## ಅಧ್ಯಾಯ 2



# ರಾಷ್ಟ್ರೀಯ ವರಮಾನ ಲೆಕ್ಕಚಾರ

*National Income Accounting*

ಈ ಅಧ್ಯಾಯದಲ್ಲಿ ನಾವು ಒಂದು ಸರಳ ಆರ್ಥಿಕತೆಯ ಮೂಲಭೂತ ಕಾರ್ಯನಿರ್ವಹಣೆಯನ್ನು ಪರಿಚಯಿಸುತ್ತೇವೆ. ವಿಭಾಗ 2.1 ರಲ್ಲಿ ನಾವು ಕಾರ್ಯನಿರ್ವಹಿಸುವ ಕೆಲವು ಪ್ರಾಥಮಿಕ ವಿಚಾರಗಳನ್ನು ವಿವರಿಸುತ್ತೇವೆ. ಇಡೀ ಆರ್ಥಿಕತೆಯ ಸಮಗ್ರ ಆದಾಯವು ಆರ್ಥಿಕತೆಯ ವಿವಿಧ ವಲಯಗಳ ಮೂಲಕ ಸಾಗುವುದನ್ನು ನೋಡುವುದು ಹೇಗೆಂದು ವಿಭಾಗ 2.2 ರಲ್ಲಿ ವಿವರಿಸುತ್ತೇವೆ. ರಾಷ್ಟ್ರೀಯ ಆದಾಯವನ್ನು ಲೆಕ್ಕಚಾರ ಮಾಡುವ ಮೂರು ವಿಧಾನಗಳನ್ನೂ ಸಹ ಇದೇ ವಿಭಾಗವು ವಿವರಿಸುತ್ತದೆ. ಅವುಗಳೆಂದರೆ ಉತ್ಪನ್ನದ ವಿಧಾನ, ವೆಚ್ಚದ ವಿಧಾನ ಮತ್ತು ಆದಾಯದ ವಿಧಾನ. ಕೊನೆಯ ವಿಭಾಗವಾದ 2.3, ರಾಷ್ಟ್ರೀಯ ಆದಾಯದ ವಿವಿಧ ಉಪವಿಭಾಗಗಳನ್ನು ವಿವರಿಸುತ್ತದೆ. ಇದು ವಿಭಿನ್ನ ಬೆಲೆಯ ಸೂಚ್ಯಂಕಗಳಾದ ಜಿ.ಡಿ.ಪಿ. ಅನಪ್ರಸರಣಕ, ಗ್ರಾಹಕ ಬೆಲೆ ಸೂಚ್ಯಂಕ, ಸಗಟು ಬೆಲೆಸೂಚ್ಯಂಕಗಳನ್ನು ಸಹ ವ್ಯಾಖ್ಯಾನಿಸುತ್ತದೆ ಮತ್ತು ರಾಷ್ಟ್ರದ ಜನರ ಸಮಗ್ರ ಕಲ್ಯಾಣದ ಸೂಚಕವಾಗಿ ರಾಷ್ಟ್ರದ ಜಿಡಿಪಿಯನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಚರ್ಚಿಸುತ್ತದೆ.

## 2.1 ಸಮಗ್ರ ಅರ್ಥಶಾಸ್ತ್ರದ ಕೆಲವು ಮೂಲಭೂತ ಪರಿಕಲ್ಪನೆಗಳು
*Some Basic Concepts Of Macroeconomics*

ಅರ್ಥಶಾಸ್ತ್ರ ವಿಷಯದ ಪ್ರವರ್ತಕರಲ್ಲಿ ಒಬ್ಬರಾದ, ಆಡಂ ಸ್ಮಿತ್ ಅವರು ತಮ್ಮ ಅತ್ಯಂತ ಪ್ರಭಾವಶಾಲಿ ಕೃತಿಗೆ – 'ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಒಂದು ಪರಿಶೀಲನೆ' ಎಂದು ಹೆಸರಿಸಿದರು. ಯಾವುದು ಒಂದು ದೇಶದ ಆರ್ಥಿಕ ಸಂಪತ್ತನ್ನು ಸೃಷ್ಟಿಸುತ್ತದೆ? ಯಾವುದು ದೇಶಗಳನ್ನು ಶ್ರೀಮಂತ ಅಥವಾ ಬಡ ದೇಶಗಳನ್ನಾಗಿ ಮಾಡುತ್ತದೆ? ಇವು ಅರ್ಥಶಾಸ್ತ್ರದ ಕೆಲವು ಪ್ರಮುಖ ಪ್ರಶ್ನೆಗಳಾಗಿವೆ. ಹೇರಳವಾದ ನೈಸರ್ಗಿಕ ಸಂಪತ್ತು – ಖನಿಜಗಳು ಅಥವಾ ಅರಣ್ಯಗಳು ಅಥವಾ ಹೆಚ್ಚು ಫಲವತ್ತಾದ ಭೂಸಂಪತ್ತಿನಿಂದ ಕೂಡಿದ ರಾಷ್ಟ್ರಗಳು ಸ್ವಾಭಾವಿಕವಾಗಿ ಶ್ರೀಮಂತ ರಾಷ್ಟ್ರಗಳಾಗಿರುವುದಿಲ್ಲ. ವಾಸ್ತವವಾಗಿ ಸಂಪನ್ಮೂಲಗಳಲ್ಲಿ ಶ್ರೀಮಂತವಾಗಿರುವ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಗಳು ಜಗತ್ತಿನ ಕೆಲವು ಅತ್ಯಂತ ಬಡ ರಾಷ್ಟ್ರಗಳನ್ನು ಹೊಂದಿವೆ. ಆದರೆ ಅನೇಕ ಶ್ರೀಮಂತ ದೇಶಗಳು ವಿರಳ ನೈಸರ್ಗಿಕ ಸಂಪತ್ತನ್ನು ಹೊಂದಿವೆ. ನೈಸರ್ಗಿಕ ಸಂಪನ್ಮೂಲಗಳ ಒಡೆತನವನ್ನು ಪ್ರಮುಖವಾಗಿ ಪರಿಗಣಿಸುವ ಕಾಲವೊಂದಿತ್ತು. ಆದರೆ ಆಗಲೂ ಸಹ ಸಂಪನ್ಮೂಲಗಳನ್ನು ಉತ್ಪಾದನಾ ಪ್ರಕ್ರಿಯೆಯ ಮೂಲಕ ರೂಪಾಂತರಿಸಬೇಕಾಗಿತ್ತು.

ಹೀಗೆ ಒಂದು ದೇಶದ ಆರ್ಥಿಕ ಸಂಪತ್ತು ಅಥವಾ ಯೋಗಕ್ಷೇಮ ಕೇವಲ ಸಂಪನ್ಮೂಲಗಳ ಒಡೆತನದ ಮೇಲೆ ಅವಲಂಬಿತವಾಗಿರಬೇಕೆಂದಿಲ್ಲ; ಉತ್ಪಾದನೆಯ ಹರಿವನ್ನು ಸೃಷ್ಟಿಸುವಲ್ಲಿ ಈ ಸಂಪನ್ಮೂಲಗಳು ಹೇಗೆ ಬಳಕೆಯಾಗುತ್ತಿವೆ ಮತ್ತು ಈ ಪ್ರಕ್ರಿಯೆಯ ಪರಿಣಾಮವಾಗಿ ಆದಾಯ ಮತ್ತು ಸಂಪತ್ತು ಹೇಗೆ ಉತ್ಪತ್ತಿಯಾಗುತ್ತದೆ ಎಂಬುದು ಮುಖ್ಯವಾದ ಅಂಶವಾಗಿದೆ.

ಈಗ ನಾವು ಈ ಉತ್ಪಾದನೆಯ ಹರಿವಿನ ಕುರಿತು ವಿಸ್ತಾರವಾಗಿ ಯೋಚಿಸೋಣ. ಈ ಉತ್ಪಾದನೆಯ ಹರಿವು ಹೇಗೆ ಉದ್ಭವಿಸುತ್ತದೆ? ನೈಸರ್ಗಿಕ ಮತ್ತು ಮಾನವ ನಿರ್ಮಿತ ಪರಿಸರದೊಂದಿಗೆ ಒಂದು ನಿರ್ದಿಷ್ಟ ಸಾಮಾಜಿಕ ಮತ್ತು ತಾಂತ್ರಿಕ ರಚನೆಯೊಳಗೆ ಉತ್ಪಾದನಾ ಹರಿವನ್ನು ನಿರ್ಮಿಸಲು ಜನರು ತಮ್ಮ ಶಕ್ತಿಗಳನ್ನು ಸಂಯೋಜಿಸುತ್ತಾರೆ.

ನಮ್ಮ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಈ ಉತ್ಪಾದನಾ ಹರಿವು ಸರಕುಗಳ ಉತ್ಪಾದನೆಯಿಂದ – ಲಕ್ಷಾಂತರ ಸಣ್ಣ ಮತ್ತು ದೊಡ್ಡ ಉದ್ಯಮಗಳು ಉತ್ಪಾದಿಸುವ ಸರಕು ಮತ್ತು ಸೇವೆಗಳ ಉತ್ಪಾದನೆಯಿಂದ – ಉಂಟಾಗುತ್ತದೆ. ಈ ಉದ್ಯಮ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯ ಜನರನ್ನು ನೇಮಿಸಿಕೊಳ್ಳುವ ದೈತ್ಯ ನಿಗಮಗಳಿಂದ ಹಿಡಿದು ಒಬ್ಬನೇ ಉದ್ಯಮಿ ಇರುವ ಸಂಸ್ಥೆಗಳನ್ನೂ ಒಳಗೊಂಡಿವೆ. ಆದರೆ ಉತ್ಪಾದನೆಯಾದ ನಂತರ ಈ ಸರಕುಗಳು ಏನಾಗುತ್ತವೆ? ಸರಕುಗಳ ಪ್ರತಿಯೊಬ್ಬ ಉತ್ಪಾದಕರು ತಮ್ಮ ಉತ್ಪನ್ನವನ್ನು ಮಾರಾಟ ಮಾಡಲು ಬಯಸುತ್ತಾರೆ. ಆದ್ದರಿಂದ ಗುಂಡುಸೂಜಿಯಂತಹ ಅತ್ಯಂತ ಚಿಕ್ಕ ವಸ್ತುಗಳಿಂದ ಆರಂಭಿಸಿ ದೊಡ್ಡ ಸರಕುಗಳಾದ ವಿಮಾನಗಳು, ಆಟೋಮೊಬೈಲ್‌ಗಳು ದೈತ್ಯ ಯಂತ್ರೋಪಕರಣಗಳು ಅಥವಾ ಮಾರಾಟ ಯೋಗ್ಯ ಸೇವೆಗಳಾದ ವೈದ್ಯರು, ವಕೀಲರು ಅಥವಾ ಹಣಕಾಸಿನ ಸಲಹೆಗಾರರು – ಉತ್ಪಾದಿಸಿದ ಯಾವುದೇ ಸರಕು ಮತ್ತು ಸೇವೆಗಳನ್ನು ಅನುಭೋಗಿಗಳಿಗೆ ಮಾರಾಟ ಮಾಡಬೇಕಾಗುತ್ತದೆ. ಅನುಭೋಗಿ, ಒಬ್ಬ ವ್ಯಕ್ತಿ ಅಥವಾ ಒಂದು ಉದ್ಯಮ ಸಂಸ್ಥೆಯಾಗಿರಬಹುದು ಮತ್ತು ಖರೀದಿಸಿದ ಸರಕು ಅಥವಾ ಸೇವೆ ಅಂತಿಮ ಬಳಕೆಗಾಗಿರಬಹುದು ಅಥವಾ ಮುಂದಿನ ಉತ್ಪಾದನೆಗಾಗಿರಬಹುದು. ಅದನ್ನು ಮುಂದಿನ ಉತ್ಪಾದನೆಯಲ್ಲಿ ಬಳಸಿದಾಗ ಅದು ತನ್ನ ನಿರ್ಧಿಷ್ಟ ಸರಕಿನ ಗುಣ ಲಕ್ಷಣಗಳನ್ನು ಕಳೆದುಕೊಳ್ಳುತ್ತದೆ ಮತ್ತು ಉತ್ಪಾದನಾ ಪ್ರಕ್ರಿಯೆ ಮೂಲಕ ಮತ್ತೊಂದು ಸರಕಾಗಿ ರೂಪಾಂತರಗೊಳ್ಳುತ್ತದೆ. ಹೀಗೆ ಹತ್ತಿ ಉತ್ಪಾದಿಸುವ ರೈತರು ಹತ್ತಿಯನ್ನು ನೂಲುವ ಗಿರಣಿಗೆ ಮಾರಾಟ ಮಾಡುತ್ತಾರೆ, ಅಲ್ಲಿ ಕಚ್ಚಾ ಹತ್ತಿಯು ನೂಲಿನ ರೂಪಾಂತರಕ್ಕೆ ಒಳಗಾಗುತ್ತದೆ; ಪ್ರತಿಯಾಗಿ ನೂಲು, ಜವಳಿ ಗಿರಣಿಗೆ ಮಾರಾಟವಾದಾಗ, ಅಲ್ಲಿ ಉತ್ಪಾದನಾ ಪ್ರಕ್ರಿಯೆಯ ಮೂಲಕ ಅದನ್ನು ಬಟ್ಟೆಯಾಗಿ ಮಾರ್ಪಡಿಸಲಾಗುತ್ತದೆ; ಪ್ರತಿಯಾಗಿ ಈ ಬಟ್ಟೆ ಮತ್ತೊಂದು ಉತ್ಪಾದನಾ ಪ್ರಕ್ರಿಯೆಯ ಮೂಲಕ ಸರಕಾಗಿ ರೂಪಾಂತರಗೊಳ್ಳುತ್ತದೆ, ತದನಂತರ ಅಂತಿಮವಾಗಿ ಅನುಭೋಗಿಗಳಿಗೆ ಅಂತಿಮ ಬಳಕೆಗಾಗಿ ಮಾರಾಟ ಮಾಡಲು ಸಿದ್ಧವಾಗುತ್ತದೆ. ಅಂತಿಮ ಬಳಕೆಯ ಉದ್ದೇಶವನ್ನೊಳಗೊಂಡಿರುವ ಯಾವುದೇ ರೂಪಾಂತರ ಅಥವಾ ಉತ್ಪಾದನೆಯ ಇತರ ಹಂತಗಳ ಮೂಲಕ ಹಾದುಹೋಗದೇ ಇರುವ ಒಂದು ಸರಕನ್ನು **ಅಂತಿಮ ಸರಕೆಂದು** ಕರೆಯಲಾಗುತ್ತದೆ.

ನಾವು ಇದನ್ನು ಅಂತಿಮ ಸರಕು ಎಂದು ಏಕೆ ಕರೆಯುತ್ತೇವೆ? ಏಕೆಂದರೆ ಒಮ್ಮೆ ಇದು ಮಾರಾಟವಾದ ಮೇಲೆ ಇದು ಕ್ರಿಯಾಶೀಲ ಆರ್ಥಿಕ ಹರಿವನ್ನು ದಾಟಿ ಹೋಗುತ್ತದೆ. ಇದು ಯಾವುದೇ ಉತ್ಪಾದಕನ ಕೈಯಲ್ಲಿ ಮುಂದಿನ ರೂಪಾಂತರಕ್ಕೆ ಒಳಗಾಗುವುದಿಲ್ಲ. ಆದಾಗ್ಯೂ, ಅಂತಿಮ ಖರೀದಿದಾರನ ಕ್ರಿಯೆಯಿಂದ ರೂಪಾಂತರಕ್ಕೆ ಒಳಗಾಗಬಹುದು. ವಾಸ್ತವವಾಗಿ ಇಂತಹ ಹಲವಾರು ಅಂತಿಮ ಸರಕುಗಳು ಅವುಗಳ ಅನುಭೋಗದ ಸಂದರ್ಭದಲ್ಲಿ ರೂಪಾಂತರಗೊಳ್ಳುತ್ತವೆ. ಹೀಗಾಗಿ, ಅನುಭೋಗಿಗಳು ಖರೀದಿಸಿದ ಚಹಾದ ಎಲೆಗಳು ಅದೇ ರೂಪದಲ್ಲಿ ಬಳಸಲ್ಪಡುವುದಿಲ್ಲ – ಸೇವಿಸಬಹುದಾದ ಚಹಾವನ್ನು ತಯಾರಿಸಲು ಅವುಗಳನ್ನು ಬಳಸಲಾಗುತ್ತದೆ, ಇದೇ ತರಹ ನಮ್ಮ ಅಡುಗೆ ಮನೆ ಪ್ರವೇಶಿಸುವ ಹೆಚ್ಚಿನ ವಸ್ತುಗಳು ಪಾಕ ಪ್ರಕ್ರಿಯೆ ಮೂಲಕ ರೂಪಾಂತರಗೊಳ್ಳುತ್ತವೆ. ಆದರೆ ಉತ್ಪನ್ನ ರೂಪಾಂತರಕ್ಕೆ ಒಳಗಾದರೂ ಸಹ ಮನೆಯಲ್ಲಿ ಅಡುಗೆ ಮಾಡುವುದು ಆರ್ಥಿಕ ಚಟುವಟಿಕೆಯಲ್ಲ. ಮನೆಯಲ್ಲಿ ಬೇಯಿಸಿದ ಆಹಾರವನ್ನು ಮಾರುಕಟ್ಟೆಯಲ್ಲಿ ಮಾರಲಾಗುವುದಿಲ್ಲ. ಆದಾಗ್ಯೂ, ಬೇಯಿಸಿದ ಉತ್ಪನ್ನವನ್ನು ಗ್ರಾಹಕರಿಗೆ ಮಾರಲಾಗುವ ಹೋಟೆಲ್‌ನಲ್ಲಿ ಅದೇ ಅಡುಗೆ ಅಥವಾ ಚಹಾ ತಯಾರಿಸುವುದಾದರೆ, ಚಹಾ ಎಲೆಗಳಂತಹ ಅದೇ ವಸ್ತುಗಳು ಅಂತಿಮ ಸರಕುಗಳಾಗಿ ಉಳಿಯುವುದಿಲ್ಲ ಮತ್ತು ಇವುಗಳನ್ನು ಆರ್ಥಿಕ ಮೌಲ್ಯ ಸೇರ್ಪಡೆಯಾಗುವ (ಮೌಲ್ಯವರ್ಧಿತಗೊಳ್ಳುವ) ಆದಾನಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ, ಒಂದು ಸರಕು ಅಂತಿಮ ಸರಕಾಗುವುದು ಆ ಸರಕಿನ ಸ್ವರೂಪದಲ್ಲಿ ಇರುವುದಿಲ್ಲ ಬದಲಾಗಿ ಅದರ ಉಪಯೋಗದ ಆರ್ಥಿಕ ಸ್ವರೂಪದಲ್ಲಿರುತ್ತದೆ.

ಅಂತಿಮ ಸರಕುಗಳಲ್ಲಿ, ನಾವು **ಅನುಭೋಗದ ಸರಕುಗಳು** ಹಾಗೂ **ಬಂಡವಾಳ ಸರಕುಗಳ** ನಡುವೆ ವ್ಯತ್ಯಾಸವನ್ನು ಗುರುತಿಸಬಹುದು. ಅನುಭೋಗಿಸಲಾಗುವ ಆಹಾರ ಮತ್ತು ಬಟ್ಟೆಯಂತಹ ಹಾಗೂ ಮನರಂಜನೆಯಂತಹ ಸೇವೆಗಳನ್ನು ಅವುಗಳ ಅಂತಿಮ ಅನುಭೋಗಿಗಳು ಖರೀದಿಸಿದಾಗ ಅವುಗಳನ್ನು ಅನುಭೋಗಿ ಸರಕುಗಳು ಅಥವಾ ಗ್ರಾಹಕ ಸರಕುಗಳು ಎಂದು ಕರೆಯುತ್ತಾರೆ (ಇದು ಅನುಭೋಗಿಸಲಾಗುವ

ಸೇವೆಗಳನ್ನು ಒಳಗೊಂಡಿದೆ. ಆದರೆ ಅನುಕೂಲಕ್ಕಾಗಿ ನಾವು ಅವುಗಳನ್ನು ಗ್ರಾಹಕ ಸರಕುಗಳೆಂದು ಉಲ್ಲೇಖಿಸಬಹುದು).

ನಂತರ ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸಲಾಗುವ ಬಾಳಿಕೆ ಬರುವ ಗುಣವುಳ್ಳ ಇತರ ಸರಕುಗಳಿವೆ. ಇವುಗಳೆಂದರೆ ಉಪಕರಣಗಳು, ಸಲಕರಣೆಗಳು ಮತ್ತು ಯಂತ್ರಗಳು ಇವು ಇತರ ಸರಕುಗಳ ಉತ್ಪಾದನೆಯನ್ನು ಸಾಧ್ಯಗೊಳಿಸಿದರೂ ಉತ್ಪಾದನಾ ಪ್ರಕ್ರಿಯೆ ಸಂದರ್ಭದಲ್ಲಿ ಸ್ವತ: ರೂಪಾಂತರಗೊಳ್ಳುವುದಿಲ್ಲ. ಇವು ಅಂತಿಮ ಅನುಭೋಗದ ಸರಕುಗಳಾಗಿದ್ದರೂ ಸಹ ಅಂತಿಮವಾಗಿ ಬಳಸುವ ಸರಕುಗಳಲ್ಲ. ನಾವು ಮೇಲೆ ಪರಿಗಣಿಸಿದ ಅಂತಿಮ ಸರಕುಗಳಂತಲ್ಲದೇ, ಇವು ಉತ್ಪಾದನೆಗೆ ನೆರವಾಗುವ ಮತ್ತು ಸಕ್ರಿಯಗೊಳಿಸುವ ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ನಿರ್ಣಾಯಕ ಬೆನ್ನೆಲುಬಾಗಿರುತ್ತವೆ. ಈ ಸರಕುಗಳು ಒಂದು ಉತ್ಪಾದನಾ ಉದ್ಯಮ ಸಂಸ್ಥೆಯು ಹೂಡಿಕೆ ಮಾಡಿದ ನಿರ್ಣಾಯಕ ಉತ್ಪಾದನಾಂಗಗಳಲ್ಲಿ ಒಂದಾಗಿದ್ದು, ಬಂಡವಾಳದ ಒಂದು ಭಾಗವಾಗುತ್ತವೆ ಮತ್ತು ಉತ್ಪಾದನೆಯ ನಿರಂತರ ಸುತ್ತುಗಳನ್ನು ಸಾಧ್ಯವಾಗಿಸುತ್ತಾ ಉತ್ಪಾದನೆಯ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗುವುದನ್ನು ಸಾಧ್ಯಗೊಳಿಸುತ್ತದೆ. ಇವು ಬಂಡವಾಳ ಸರಕುಗಳಾಗಿವೆ ಮತ್ತು ಅವು ಕ್ರಮೇಣ ಸವಕಳಿಗೆ ಒಳಗಾಗುವುದರಿಂದ ಕಾಲಾನಂತರದಲ್ಲಿ ದುರಸ್ತಿಗೊಳಪಡುತ್ತವೆ ಅಥವಾ ನಿಧಾನವಾಗಿ ಬದಲಿಸಬೇಕಾಗುತ್ತದೆ. ಹೀಗೆ ಕಾಲಾಂತರದಲ್ಲಿ ಒಂದು ಅರ್ಥವ್ಯವಸ್ಥೆ ಹೊಂದಿರುವ ಬಂಡವಾಳದ ದಾಸ್ತಾನನ್ನು ಸಂರಕ್ಷಿಸಿ ನಿರ್ವಹಿಸಲಾಗುತ್ತದೆ ಮತ್ತು ಭಾಗಶಃ ಅಥವಾ ಪೂರ್ಣವಾಗಿ ನವೀಕರಿಸಲಾಗುತ್ತದೆ. ಇದು ನಮ್ಮ ಮುಂದಿನ ಚರ್ಚೆಯಲ್ಲಿ ಮಹತ್ವದ್ದಾಗಿದೆ.

ಗಮನಿಸಬೇಕಾದ ಒಂದು ಅಂಶವೆಂದರೆ, ಟೆಲಿವಿಷಟನ್ ಸೆಟ್‌ಗಳು, ವಾಹನಗಳು (ಆಟೋಮೊಬೈಲ್) ಅಥವಾ ಕಂಪ್ಯೂಟರ್‌ಗಳಂತಹ ಕೆಲವು ಸರಕುಗಳು ಅಂತಿಮ ಬಳಕೆಗಾಗಿದ್ದರೂ ಅವುಗಳು ಬಂಡವಾಳ ಸರಕುಗಳೊಡನೆ ಒಂದು ಸಾಮಾನ್ಯ ಲಕ್ಷಣವನ್ನು ಹೊಂದಿವೆ. ಅದೆಂದರೆ ಅವು ಕೂಡ ಬಾಳಿಕೆ ಬರುವ ಸರಕುಗಳಾಗಿವೆ. ಅಂದರೆ ಅವು ತಕ್ಷಣದ ಅಥವಾ ಅಲ್ಪಾವಧಿಯ ಬಳಕೆಯಿಂದ ನಾಶವಾಗುವುದಿಲ್ಲವೆಂದು ಆಹಾರ ಅಥವಾ ಉಡುಪುಗಳಂತಹ ಸಾಮಗ್ರಿಗಳಿಗೆ ಹೋಲಿಸಿದರೆ ಅವು ಸಾಪೇಕ್ಷವಾಗಿ ದೀರ್ಘ ಬಾಳಿಕೆಯನ್ನು ಹೊಂದಿರುತ್ತವೆ. ಕ್ರಮೇಣ ಬಳಕೆ ಮಾಡುವಾಗ ಸವಕಳಿಯುಂಟಾಗಿ ಆಗಾಗ್ಗೆ ರಿಪೇರಿ ಮತ್ತು ಭಾಗಗಳ ಬದಲಿಕೆಯ ಅಗತ್ಯ ಉಂಟಾಗುತ್ತದೆ. ಅಂದರೆ, ಯಂತ್ರಗಳಂತೆ ಅವುಗಳನ್ನು ಸಂರಕ್ಷಣೆ, ನಿರ್ವಹಣೆ ಮತ್ತು ನವೀಕರಿಸಬೇಕಾಗುತ್ತದೆ. ಆದ್ದರಿಂದಲೇ ನಾವು ಇವುಗಳನ್ನು **ಅನುಭೋಗಿ ಬಾಳಿಕೆಯ ಸರಕು**ಗಳೆಂದು ಕರೆಯುತ್ತೇವೆ.

ಹೀಗೆ ಒಂದು ನಿರ್ಧಿಷ್ಟ ಅವಧಿಯಲ್ಲಿ ಆರ್ಥಿಕತೆಯಲ್ಲಿ ಉತ್ಪಾದಿಸಿದ ಎಲ್ಲಾ ಅಂತಿಮ ಸರಕುಗಳು ಮತ್ತು ಸೇವೆಗಳು, ಅನುಭೋಗಿ ಸರಕುಗಳು (ಬಾಳಿಕೆ ಬರುವ ಮತ್ತು ಬಾಳಿಕೆ ಬಾರದ ಸರಕುಗಳೆರಡು) ಅಥವಾ ಬಂಡವಾಳ ಸರಕುಗಳ ರೂಪದಲ್ಲಿರುತ್ತವೆ. ಇವು ಅಂತಿಮ ಸರಕುಗಳಾಗಿರುವುದರಿಂದ ಮುಂದೆ ಆರ್ಥಿಕ ಪ್ರಕ್ರಿಯೆಯಲ್ಲಿ ಯಾವುದೇ ರೂಪಾಂತರಕ್ಕೆ ಒಳಗಾಗುವುದಿಲ್ಲ.

ಆರ್ಥಿಕತೆಯಲ್ಲಿ ಉತ್ಪಾದನೆಯಾದ ಒಟ್ಟು ಉತ್ಪನ್ನದಲ್ಲಿನ ದೊಡ್ಡ ಪ್ರಮಾಣದ ಉತ್ಪನ್ನಗಳು ಅಂತಿಮ ಅನುಭೋಗದಲ್ಲಿ ಅಂತ್ಯಗೊಳ್ಳುವುದಿಲ್ಲ ಮತ್ತು ಅವು ಬಂಡವಾಳ ಸರಕುಗಳೂ ಅಲ್ಲ. ಇಂತಹ ಸರಕಗಳನ್ನು ಇತರ ಉತ್ಪಾದಕರು ಆದಾನ ಸಾಮಗ್ರಿಗಳಾಗಿ ಬಳಸಬಹುದಾಗಿದೆ. ಉದಾಹರಣೆ, ವಾಹನಗಳ (ಆಟೋಮೊಬೈಲ್) ತಯಾರಿಕೆಯಲ್ಲಿ ಬಳಸಲಾಗುವ ಉಕ್ಕಿನ ಹಾಳೆಗಳು ಮತ್ತು ಪಾತ್ರೆಗಳನ್ನು ಉತ್ಪಾದಿಸಲು ಬಳಸಲಾಗುವ ತಾಮ್ರ. ಇವು **ಮಧ್ಯಂತರ ಸರಕುಗಳಾಗಿವೆ.** ಇವುಗಳನ್ನು ಹೆಚ್ಚಾಗಿ ಇತರ ಸರಕುಗಳ ಉತ್ಪಾದನೆಗೆ ಕಚ್ಚಾ ಸಾಮಗ್ರಿಗಳನ್ನಾಗಿ ಅಥವಾ ಆದಾನಗಳಾಗಿ ಬಳಸಲಾಗುತ್ತದೆ. ಹೀಗಾಗಿ ಇವು ಅಂತಿಮ ಸರಕುಗಳಲ್ಲ.

ಈಗ, ಆರ್ಥಿಕತೆಯಲ್ಲಿ ಉತ್ಪಾದನೆಯ ಒಟ್ಟು ಹರಿವಿನ ವಿಸ್ತಾರವಾದ ಕಲ್ಪನೆಯನ್ನು ಪಡೆದುಕೊಳ್ಳಲು ಅರ್ಥವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಅಂತಿಮ ಸರಕುಗಳ ಸಮಗ್ರ ಮಟ್ಟದ ಪರಿಮಾಣಾತ್ಮಕ ಮಾಪನವನ್ನು

ಹೊಂದುವ ಅಗತ್ಯವಿದೆ. ಆದಾಗ್ಯೂ, ಒಂದು ಪರಿಮಾಣಾತ್ಮಕ ಮೌಲ್ಯಮಾಪನ ಪಡೆಯಲು ಒಂದು ಆರ್ಥಿಕತೆಯಲ್ಲಿ ಉತ್ಪಾದನೆಯಾದ ಒಟ್ಟು ಅಂತಿಮ ಸರಕುಗಳು ಮತ್ತು ಸೇವೆಗಳ ಮಾಪನ ಮಾಡಲು ನಾವು ಸಾಮಾನ್ಯ ಅಳತೆಗೋಲನ್ನು ಹೊಂದಿರಬೇಕು ಎಂಬುದು ಸ್ಪಷ್ಟವಾಗಿದೆ. ಟನ್‌ಗಳಷ್ಟು ಅಕ್ಕಿ ಅಥವಾ ವಾಹನಗಳು ಅಥವಾ ಯಂತ್ರಗಳ ಸಂಖ್ಯೆಗೆ ನಾವು ತಯಾರಿಸಿದ ಮೀಟರ್‌ಗಳಷ್ಟು ಬಟ್ಟೆಯನ್ನು ಸೇರಿಸಲು ಸಾಧ್ಯವಿಲ್ಲ ಹಣ ನಮ್ಮ ಸಾಮಾನ್ಯ ಅಳತೆಗೋಲಾಗಿದೆ. ಇಲ್ಲಿ ಪ್ರತಿಯೊಂದೂ ಸರಕುಗಳು ಮಾರಾಟಕ್ಕಾಗಿ ಉತ್ಪಾದಿಸಲಾಗುವುದರಿಂದ **ಈ ವೈವಿಧ್ಯಮಯ ಸರಕುಗಳ ಹಣದ ಒಟ್ಟು ಮೌಲ್ಯದ ಮೊತ್ತವು ನಮಗೆ ಅಂತಿಮ ಉತ್ಪನ್ನದ ಅಳತೆಯನ್ನು ನೀಡುತ್ತದೆ.** ಆದರೆ, ನಾವು ಅಂತಿಮ ಸರಕುಗಳನ್ನಷ್ಟೇ ಏಕೆ ಅಳೆಯಬೇಕು? ಖಂಡಿತವಾಗಿ ಮಧ್ಯಂತರ ಸರಕುಗಳು ಯಾವುದೇ ಉತ್ಪಾದನಾ ಪ್ರಕ್ರಿಯೆಗೆ ನಿರ್ಣಾಯಕ ಅದಾನಗಳಾಗಿವೆ ಮತ್ತು ನಮ್ಮ ಮಾನವಶಕ್ತಿ ಮತ್ತು ಬಂಡವಾಳದ ಸಂಗ್ರಹದ ಒಂದು ಮಹತ್ವದ ಭಾಗವು ಈ ಸರಕುಗಳ ಉತ್ಪಾದನೆಯಲ್ಲಿ ತೊಡಗಿಕೊಂಡಿವೆ. ಆದಾಗ್ಯೂ ನಾವು, ಉತ್ಪನ್ನದ ಮೌಲ್ಯದೊಂದಿಗೆ ವ್ಯವಹರಿಸುತ್ತಿರುವುದರಿಂದ, ಅಂತಿಮ ಸರಕುಗಳ ಮೌಲ್ಯವು, ಈಗಾಗಲೇ ಆದಾನಗಳಾಗಿ ಉತ್ಪಾದನೆಯಲ್ಲಿ ಸೇರಿ ಹೋಗಿರುವ ಮಧ್ಯಂತರ ಸರಕುಗಳ ಮೌಲ್ಯವನ್ನು ಒಳಗೊಂಡಿರುತ್ತದೆಂದು ಅರಿತುಕೊಳ್ಳಬೇಕು. ಇವುಗಳನ್ನು ಪ್ರತ್ಯೇಕವಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದರಿಂದ ದ್ವಿಗಣನೆಯ ದೋಷಕ್ಕೆ ಕಾರಣವಾಗುತ್ತದೆ. ಮಧ್ಯಂತರ ಸರಕುಗಳನ್ನು ಪರಿಗಣಿಸುವುದರಿಂದ ಸಮಗ್ರ ಆರ್ಥಿಕ ಚಟುವಟಿಕೆಯ ಸಂಪೂರ್ಣವಾದ ವಿವರಣೆಯನ್ನು ನೀಡಬಹುದು. ಆದರೆ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ನಮ್ಮ ಆರ್ಥಿಕ ಚಟುವಟಿಕೆಯ ಅಂತಿಮ ಮೌಲ್ಯವನ್ನು ಅದು ಅತಿಯಾಗಿ ಉತ್ಪ್ರೇಕ್ಷಿಸುತ್ತದೆ.

ಈ ಹಂತದಲ್ಲಿ ದಾಸ್ತಾನು ಮತ್ತು ಹರಿವಿನ ಪರಿಕಲ್ಪನೆಗಳನ್ನು ಪರಿಚಯಿಸುವುದು ಮುಖ್ಯವಾಗಿದೆ. ಸಾಮಾನ್ಯವಾಗಿ ನಾವು ಒಬ್ಬರ ಸರಾಸರಿ ವೇತನ ರೂ 10,000 ಆಗಿದೆ ಅಥವಾ ಉಕ್ಕಿನ ಉದ್ಯಮದ ಉತ್ಪಾದನೆಯು ಹಲವು ಟನ್‌ಗಳಷ್ಟು ಅಥವಾ ಹಲವು ರೂಪಾಯಿಗಳಷ್ಟು ಮೌಲ್ಯವುಳದ್ದು ಎಂಬ ಹೇಳಿಕೆಗಳನ್ನು ಕೇಳುತ್ತೇವೆ. ಆದರೆ, ಇವು ಅಪೂರ್ಣವಾದ ಹೇಳಿಕೆಗಳಾಗಿವೆ, ಏಕೆಂದರೆ ಇಲ್ಲಿ ಉಲ್ಲೇಖಿಸಲಾಗಿರುವ ಆದಾಯವು ವಾರ್ಷಿಕವೇ ಅಥವಾ ಮಾಸಿಕವೇ ಅಥವಾ ದೈನಂದಿನ ಆದಾಯವೇ ಎಂಬುದು ಸ್ಪಷ್ಟವಾಗಿಲ್ಲ ಮತ್ತು ಇದು ಖಂಡಿತವಾಗಿಯೂ ಅಗಾಧ ವ್ಯತ್ಯಾಸವನ್ನು ಉಂಟು ಮಾಡುತ್ತದೆ. ಕೆಲವೊಂದು ಗೊತ್ತಿರುವ ಸನ್ನಿವೇಶದಲ್ಲಿ, ಸಮಯದ ಅವಧಿ ಗೊತ್ತಿದೆ ಎಂದು ಊಹಿಸಿಕೊಳ್ಳುತ್ತೇವೆ. ಆದ್ದರಿಂದ ನಾವು ಅದನ್ನು ಉಲ್ಲೇಖಿಸುವುದಿಲ್ಲ. ಅಂದರೆ ಒಂದು ನಿರ್ದಿಷ್ಟ ಸಮಯ ಅಥವಾ ಅವಧಿ ಇವುಗಳು ಎಲ್ಲಾ ಹೇಳಿಕೆಗಳಲ್ಲಿ ಅಂತರ್ಗತವಾಗಿರುತ್ತವೆ. ಇಲ್ಲದಿದ್ದರೆ ಇಂತಹ ಹೇಳಿಕೆಗಳು ಅರ್ಥಹೀನವಾಗುತ್ತವೆ. ಆದ್ದರಿಂದ ಪರಿಕಲ್ಪನೆಗಳಾದ ಆದಾಯ, ಉತ್ಪನ್ನ ಅಥವಾ ಲಾಭಗಳು ಸಮಯವನ್ನು ಸೂಚಿಸಿದಾಗ ಮಾತ್ರ ಅರ್ಥಪೂರ್ಣವಾಗುತ್ತವೆ. ಇವುಗಳನ್ನು ಹರಿವುಗಳು ಎಂದು ಕರೆಯುತ್ತೇವೆ. ಏಕೆಂದರೆ ಇವು ಒಂದು (ನಿರ್ಧಿಷ್ಟ) ಸಮಯದ ಅವಧಿಯಲ್ಲಿ ಸಂಭವಿಸುತ್ತವೆ. ಆದ್ದರಿಂದ ನಾವು ಇವುಗಳ ಪರಿಮಾಣಾತ್ಮಕ ಅಳತೆ ಪಡೆಯಲು ಸಮಯವನ್ನು ರೂಪಿಸಬೇಕಾಗುತ್ತದೆ. ಒಂದು ಆರ್ಥಿಕತೆಯಲ್ಲಿ ಲೆಕ್ಕಪರಿಶೋಧನೆಯು ವಾರ್ಷಿಕವಾಗಿ ನಡೆಯುವುದರಿಂದ ಇವುಗಳಲ್ಲಿ ಬಹುತೇಕವಾದವು ಗಳನ್ನು ವಾರ್ಷಿಕ ಲಾಭ ಅಥವಾ ಉತ್ಪಾದನೆಯಂತೆ ವ್ಯಕ್ತ ಪಡಿಸಲಾಗುತ್ತದೆ. **ಹರಿವುಗಳನ್ನು ಒಂದು ಸಮಯದ ಅವಧಿಯಲ್ಲಿ ವ್ಯಾಖ್ಯಾನಿಸಲಾಗಿದೆ.**

ಇದಕ್ಕೆ ಪ್ರತಿಯಾಗಿ ಒಮ್ಮೆ ಉತ್ಪಾದಿಸಿದ ಬಂಡವಾಳ ಸರಕುಗಳು ಅಥವಾ ದೀರ್ಘ ಬಾಳಿಕೆಯ ಅನುಭೋಗಿ ಸರಕುಗಳು ನಿರ್ಧಿಷ್ಟ ಅವಧಿಯಲ್ಲಿ ಸವಕಳಿಯಾಗುವುದಿಲ್ಲ. ವಾಸ್ತವವಾಗಿ. ಬಂಡವಾಳದ ಸರಕುಗಳು ಉತ್ಪಾದನೆಯ ವಿವಿಧ ಸುತ್ತುಗಳ ಮೂಲಕ ನಮಗೆ ಸೇವೆಯನ್ನು ಒದಗಿಸುತ್ತವೆ. ಒಂದು ಕಾರ್ಖಾನೆಯಲ್ಲಿನ ಕಟ್ಟಡಗಳು ಅಥವಾ ಯಂತ್ರಗಳು ನಿರ್ದಿಷ್ಟ ಸಮಯದ ಗಣನೆ ಇಲ್ಲದೆ ಅಸ್ತಿತ್ವದಲ್ಲಿರುತ್ತವೆ. ಇವುಗಳಿಗೆ ಒಂದು ಹೊಸ ಯಂತ್ರವನ್ನು ಸೇರಿಸಿದರೆ, ಹೊಸಯಂತ್ರ ಸೇರ್ಪಡೆಯಾಗುತ್ತದೆ, ಅಥವಾ ಒಂದು ಯಂತ್ರ ಅನುಪಯುಕ್ತವಾದರೆ ಮತ್ತು ಅದನ್ನು ಬದಲಾಯಿಸದಿದ್ದರೆ, ಒಂದು ಯಂತ್ರ ಕಡಿಮೆ ಆಗುತ್ತದೆ. ಇವುಗಳನ್ನು ದಾಸ್ತಾನು ಎಂದು ಕರೆಯಲಾಗುತ್ತದೆ. **ದಾಸ್ತಾನುಗಳನ್ನು ನಿರ್ದಿಷ್ಟ ಕಾಲಘಟ್ಟದಲ್ಲಿ**

**ವ್ಯಾಖ್ಯಾನಿಸಲಾಗಿದೆ.** ಆದಾಗ್ಯೂ, ಈ ವರ್ಷ ಎಷ್ಟು ಯಂತ್ರಗಳು ಸೇರ್ಪಡೆಯಾಗಿವೆ ಎಂದು ನಿರ್ದಿಷ್ಟ ಸಮಯದ ಅವಧಿಯಲ್ಲಿ ನಾವು ದಾಸ್ತಾನಿನಲ್ಲಿನ ಬದಲಾವಣೆಗಳನ್ನು ಅಳೆಯಬಹುದು. ದಾಸ್ತಾನಿನಲ್ಲಿನ ಇಂತಹ ಬದಲಾವಣೆಗಳನ್ನು ಹರಿವುಗಳೆಂದು ಕರೆಯುತ್ತಾರೆ, ಇವುಗಳನ್ನು ನಿರ್ಧಿಷ್ಟ ಕಾಲಾವಧಿಯಲ್ಲಿ ಮಾಪನ ಮಾಡಬಹುವಾಗಿದೆ. ದಾಸ್ತಾನಿನ ಒಂದು ನಿರ್ಧಿಷ್ಟ ಯಂತ್ರವು ಅನೇಕ ವರ್ಷಗಳವರೆಗೆ ಬಂಡವಾಳ ದಾಸ್ತಾನಿನ ಭಾಗವಾಗಿರಬಹುದು. (ಅದು ಸವಕಳಿಯಾಗದ ಹೊರತು); ಆದರೆ, ಆ ಯಂತ್ರವನ್ನು ಸ್ಥಾಪಿಸಿದ ಹೊಸದರಲ್ಲಿ ಒಂದು ವರ್ಷದವರೆಗೆ ಮಾತ್ರ ಬಂಡವಾಳ ದಾಸ್ತಾನಿಗೆ ಸೇರ್ಪಡೆಗೊಂಡ ಹೊಸ ಯಂತ್ರಗಳ ಹರಿವಿನ ಒಂದು ಭಾಗವಾಗಿರಬಹುದು.

ದಾಸ್ತಾನು ಚಲಕಗಳ ಮತ್ತು ಹರಿವಿನ ಚಲಕಗಳ ನಡುವಿನ ವ್ಯತ್ಯಾಸವನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಲು ನಾವು ಈ ಕೆಳಗಿನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಂದು ತೊಟ್ಟಿಯನ್ನು ನಲ್ಲಿಯಿಂದ ಬರುವ ನೀರಿನಿಂದ ತುಂಬಿಸಲಾಗಿದೆ ಎಂದುಕೊಳ್ಳೋಣ. ಒಂದು ನಿಮಿಷಕ್ಕೆ ನಲ್ಲಿಯಿಂದ ತೊಟ್ಟಿಗೆ ಹರಿಯುವ ನೀರಿನ ಪ್ರಮಾಣವು ಹರಿವು ಎನಿಸಿಕೊಳ್ಳುತ್ತದೆ. ಆದರೆ ನಿರ್ದಿಷ್ಟ ಸಮಯದಲ್ಲಿ ತೊಟ್ಟಿಯಲ್ಲಿ ಎಷ್ಟು ನೀರು ಇದೆ ಎಂಬುದು ದಾಸ್ತಾನಿನ ಪರಿಕಲ್ಪನೆಯಾಗಿದೆ.

ಅಂತಿಮ ಉತ್ಪನ್ನದ ಮಾಪನದ ಕುರಿತ ನಮ್ಮ ಚರ್ಚೆಗೆ ಹಿಂದಿರುಗಿ ಬರೋಣ, ಬಂಡವಾಳ ಸರಕುಗಳನ್ನು ಒಳಗೊಂಡಿರುವ ನಮ್ಮ ಅಂತಿಮ ಉತ್ಪನ್ನದ ಭಾಗವು ಆರ್ಥಿಕತೆಯ **ಒಟ್ಟು ಹೂಡಿಕೆ**ಯನ್ನು[1] ನಿರ್ಮಿಸುತ್ತದೆ.[1] ಅವುಗಳು ಯಂತ್ರಗಳು, ಉಪಕರಣಗಳು ಮತ್ತು ಸಲಕರಣೆಗಳು, ಕಟ್ಟಡಗಳು, ಕಛೇರಿ ಸ್ಥಳಗಳು, ದಾಸ್ತಾನು ಮಳಿಗೆಗಳು ಅಥವಾ ರಸ್ತೆಗಳು, ಸೇತುವೆಗಳು, ವಿಮಾನ ನಿಲ್ದಾಣಗಳು ಅಥವಾ ಬಂದರುಗಳಂತಹ ಮೂಲ ಸೌಕರ್ಯಗಳಾಗಿರಬಹುದು. ಆದರೆ ಒಂದು ವರ್ಷದಲ್ಲಿ ಉತ್ಪಾದಿಸಲಾದ ಎಲ್ಲಾ ಬಂಡವಾಳ ಸರಕುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಬಂಡವಾಳದ ದಾಸ್ತಾನಿಗೆ ಸೇರ್ಪಡೆಯಾಗುವುದಿಲ್ಲ. ಬಂಡವಾಳ ಸರಕುಗಳ ಪ್ರಸ್ತುತ ಉತ್ಪಾದನೆಯ ಒಂದು ಭಾಗವು ಅಸ್ತಿತ್ವದಲ್ಲಿರುವ ಬಂಡವಾಳದ ಸರಕುಗಳ ನಿರ್ವಹಣೆಗೆ ಅಥವಾ ಅವುಗಳನ್ನು ಬದಲಾಯಿಸಲು ಉಪಯೋಗವಾಗುತ್ತವೆ. ಏಕೆಂದರೆ ಈಗಾಗಲೇ ಅಸ್ತಿತ್ವದಲ್ಲಿರುವ ಬಂಡವಾಳ ಸಂಗ್ರಹವು ಸವಕಲು–ಹರಕಲಾಗಿರುತ್ತದೆ. ಹೀಗಾಗಿ ಅವುಗಳ ನಿರ್ವಹಣೆ ಮತ್ತು ಬದಲಿಕೆಯ ಅಗತ್ಯವಿರುತ್ತದೆ, ಈ ವರ್ಷದ ಬಂಡವಾಳ ಸರಕುಗಳ ನಿರ್ಮಾಣದ ಒಂದು ಭಾಗವು ಅಸ್ತಿತ್ವದಲ್ಲಿರುವ ಬಂಡವಾಳ ಸರಕುಗಳ ಬದಲಿಗಾಗಿ ಹೋಗುತ್ತದೆ. ಮತ್ತು ಈಗಾಗಲೇ ಅಸ್ಥಿತ್ವದಲ್ಲಿರುವ ಬಂಡವಾಳ ಸರಕುಗಳ ದಾಸ್ತಾನಿಗೆ ಸೇರ್ಪಡೆಯಾಗುವುದಿಲ್ಲ ಮತ್ತು ನಿವ್ವಳ ಉಳಿಕೆಯ ಪ್ರಮಾಣವನ್ನು ತಲುಪಲು ಅದರ ಮೌಲ್ಯವನ್ನು ಸಮಗ್ರ ಹೂಡಿಕೆಯಿಂದ ಕಳೆಯಬೇಕಾಗುತ್ತದೆ. ಈ ರೀತಿ ಬಂಡವಾಳದ ನಿಯಮಿತ ಸವಕಲು–ಹರಕಲಿಗೆ ಅವಕಾಶ ಮಾಡಿಕೊಡುವುದಕ್ಕಾಗಿ ಒಟ್ಟು ಹೂಡಿಕೆಯ ಮೌಲ್ಯದಿಂದ ಕಳೆದುದನ್ನು **ಸವಕಳಿ** ಎನ್ನುತ್ತೇವೆ.

ಆದ್ದರಿಂದ, ಆರ್ಥಿಕತೆಯಲ್ಲಿ ಬಂಡವಾಳದ ದಾಸ್ತಾನಿಗೆ ಹೊಸ ಸೇರ್ಪಡೆಯನ್ನು ನಿವ್ವಳ ಹೂಡಿಕೆ ಅಥವಾ ಹೊಸ ಬಂಡವಾಳ ರಚನೆಯಿಂದ ಮಾಪನ ಮಾಡಲಾಗುತ್ತದೆ. ಇದನ್ನು ಹೀಗೆ ವ್ಯಕ್ತ ಪಡಿಸಲಾಗುತ್ತದೆ.

ನಿವ್ವಳ ಹೂಡಿಕೆ = ಒಟ್ಟು ಹೂಡಿಕೆ – ಸವಕಳಿ

ನಾವು ಸವಕಳಿ ಎಂಬ ಈ ಪರಿಕಲ್ಪನೆಯನ್ನು ಇನ್ನೂ ಸ್ವಲ್ಪ ಹೆಚ್ಚು ವಿವರವಾಗಿ ಪರಿಶೀಲಿಸೋಣ. ಒಂದು ಉದ್ಯಮ ಘಟಕವು ಹೂಡಿಕೆ ಮಾಡುವ ಹೊಸ ಯಂತ್ರವನ್ನು ಪರಿಗಣಿಸೋಣ. ಮುಂದೆ ಈ ಯಂತ್ರವು ಮುಂದಿನ ಇಪ್ಪತ್ತು ವರ್ಷಗಳವರೆಗೆ ಸೇವೆಯಲ್ಲಿರಬಹುದು, ನಂತರ ಅದು ದುರಸ್ತಿಗೆ ಬೀಳಬಹುದು ಮತ್ತು ಅದನ್ನು ಬದಲಾಯಿಸಬೇಕಾದ ಅಗತ್ಯ ಬೀಳಬಹುದು. ಪ್ರತಿ ವರ್ಷದ ಉತ್ಪಾದನಾ ಪ್ರಕ್ರಿಯೆಯಲ್ಲಿ

[1] ಆರ್ಥಿಕತಜ್ಞರು ಬಂಡವಾಳ ಹೂಡಿಕೆಯನ್ನು ಹೀಗೆ ವ್ಯಾಖಾನಿಸುತ್ತಾರೆ. ಇದನ್ನು ಭೌತಿಕ ಅಥವಾ ಹಣಕಾಸಿನ ಆಸ್ತಿಗಳನ್ನು ಖರೀದಿಸಲು ಬಳಸುವ ಹಣ ಎಂಬ ಅರ್ಥ ಕೊಡುವ ಹೂಡಿಕೆಯ ಸಾಮಾನ್ಯ ಕಲ್ಪನೆಯೊಂದಿಗೆ ಗೊಂದಲಮಾಡಿಕೊಳ್ಳಬಾರದು ಹೀಗಾಗಿ ಹೂಡಿಕೆ ಎಂಬ ಪದದ ಬಳಕೆಯು ಷೇರುಗಳ ಅಥವಾ ಆಸ್ತಿಗಳ ಖರೀದಿ ಅಥವಾ ವಿಮಾಪಾಲಿಸಿಗಳನ್ನು ಹೊಂದುವುದು ಎಂದು ಸೂಚಿಸುವ ಅರ್ಥದಲ್ಲಿ ಅರ್ಥಶಾಸ್ತ್ರಜ್ಞರ ವ್ಯಾಖ್ಯಾನದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ನಮಗೆ ಹೂಡಿಕೆಯು ಯಾವಾಗಲು ಬಂಡವಾಳ ರಚನೆಯಾಗಿದೆ, ಬಂಡವಾಳ ದಾಸ್ತನಿಗೆ ಒಟ್ಟು ಅಥವಾ ನಿವ್ವಳ ಸೇರ್ಪಡೆಯಾಗಿದೆ.

ಈ ಯಂತ್ರವು ಕ್ರಮೇಣ ಬಳಕೆಯಾಗುತ್ತದೆ ಮತ್ತು ಪ್ರತಿವರ್ಷ $\frac{1}{20}$ ಭಾಗದಷ್ಟು ಅದರ ಮೂಲ ಮೌಲ್ಯದಲ್ಲಿ ಸವಕಳಿ ಉಂಟಾಗುತ್ತದೆಂದು ನಾವೀಗ ಕಲ್ಪಿಸಿಕೊಳ್ಳೋಣ, ಆದ್ದರಿಂದ ಇಪ್ಪತ್ತು ವರ್ಷಗಳ ನಂತರ ಈ ಯಂತ್ರವನ್ನು ಬದಲಾಯಿಸಲು ಬೃಹತ್ ಬಂಡವಾಳವನ್ನು ಪರಿಗಣಿಸುವ ಬದಲು, ನಾವು ಪ್ರತಿವರ್ಷ ವಾರ್ಷಿಕ ಸವಕಳಿ ವೆಚ್ಚವನ್ನು ಪರಿಗಣಿಸುತ್ತೇವೆ. ಸಾಮಾನ್ಯವಾಗಿ, ಸವಕಳಿ ಎಂಬ ಪದವನ್ನು ಬಳಸುವ ಮತ್ತು ಆ ಪರಿಕಲ್ಪನೆಯಲ್ಲಿ ಅಂತರ್ಗತವಾಗಿರುವ ಅರ್ಥವೆಂದರೆ, ಒಂದು ನಿರ್ದಿಷ್ಟ ಬಂಡವಾಳ ಸರಕಿನ ನಿರೀಕ್ಷಿತ ಬಾಳಿಕೆಯ ಅವಧಿ ನಮ್ಮ ಉದಾಹರಣೆಯಲ್ಲಿನ ಯಂತ್ರಕ್ಕೆ 20 ವರ್ಷಗಳಿದ್ದಂತೆ, ಆದ್ದರಿಂದ, ಸವಕಳಿ ಎನ್ನುವುದು ಒಂದು ಬಂಡವಾಳ ಸರಕಿನ[2] ಸವಕಲು–ಹರಕಲಿನ ಭತ್ಯೆಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸರಕಿನ ವೆಚ್ಚವನ್ನು ಅದರ ಬಾಳಿಕೆ ವರ್ಷಗಳಿಂದ ಭಾಗಿಸಿದಾಗ ಬರುವುದೇ ಸವಕಳಿ.[3]

ಸವಕಳಿಯು ಒಂದು ಲೆಕ್ಕಾಚಾರದ ಪರಿಕಲ್ಪನೆಯಾಗಿದೆ ಎಂಬುದನ್ನು ಇಲ್ಲಿ ಗಮನಿಸಿ. ಪ್ರತಿ ವರ್ಷವೂ ನೈಜ ವೆಚ್ಚ ತಗಲದಿರಬಹುದು ಆದರೂ ಸವಕಳಿಯನ್ನು ವಾರ್ಷಿಕವಾಗಿ ಲೆಕ್ಕಹಾಕಲಾಗುತ್ತದೆ. ಯಾವುದೇ ಆರ್ಥಿಕತೆಯಲ್ಲಿ ವ್ಯಾಪಕವಾದ ವಿವಿಧ ಅವಧಿಯ ಬಾಳಿಕೆ ಇರುವ ಸಾಧನ ಸಾಮಾಗ್ರಿಗಳನ್ನು ಹೊಂದಿರುವ ಸಾವಿರಾರು ಉದ್ಯಮಸಂಸ್ಥೆಗಳಿರುತ್ತವೆ. ಯಾವುದೇ ನಿರ್ದಿಷ್ಟ ವರ್ಷದಲ್ಲಿ ಕೆಲವು ಉದ್ಯಮಸಂಸ್ಥೆಗಳಾದರೂ ದೊಡ್ಡ ಪ್ರಮಾಣದ ಬದಲಿಕೆ ವೆಚ್ಚವನ್ನು ವಾಸ್ತವಾಗಿ ಭರಿಸುತ್ತಿರುತ್ತವೆ. ಹೀಗಾಗಿ ಬದಲಿಕೆ ವೆಚ್ಚದ ಹರಿವು ನಿರಂತರವಾಗಿ ಇರುತ್ತದೆಂದು ಮತ್ತು ಇದು ಆ ಆರ್ಥಿಕತೆಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾದ ವಾರ್ಷಿಕ ಸವಕಳಿ ವೆಚ್ಚದ ಮೊತ್ತಕ್ಕೆ ಹೆಚ್ಚು ಕಡಿಮೆ ಹೊಂದಿಕೆಯಾಗುತ್ತದೆ ಎಂದು ನಾವು ವಾಸ್ತವಾಗಿ ಊಹಿಸಿಕೊಳ್ಳಬಹುದು.

ಅರ್ಥವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಒಟ್ಟು ಅಂತಿಮ ಉತ್ಪನ್ನಕ್ಕೆ ಸಂಬಂಧಿಸಿದ ನಮ್ಮ ಚರ್ಚೆಗೆ ಹಿಂತಿರುಗಿದರೆ, ಒಟ್ಟು ಉತ್ಪನ್ನದಲ್ಲಿ ಅನುಭೋಗಿ ಸರಕುಗಳು ಮತ್ತು ಸೇವೆಗಳು ಹಾಗೂ ಬಂಡವಾಳ ಸರಕುಗಳು ಇರುವುದನ್ನು ನೋಡುತ್ತೇವೆ. ಆರ್ಥಿಕತೆಯ ಇಡೀ ಜನಸಂಖ್ಯೆಯ ಅನುಭೋಗವನ್ನು ಅನುಭೋಗಿ ಸರಕುಗಳು ಪೋಷಿಸುತ್ತವೆ. ಅನುಭೋಗಿ ಸರಕುಗಳ ಕೊಳ್ಳುವಿಕೆಯು, ಈ ಸರಕುಗಳ ಮೇಲೆ ವೆಚ್ಚ ಮಾಡುವ ಜನರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಇದು ಪ್ರತಿಯಾಗಿ, ಅವರುಗಳ ಆದಾಯವನ್ನು ಅವಲಂಬಿಸಿರುತ್ತವೆ. ಅಂತಿಮ ಸರಕುಗಳ ಇನ್ನೊಂದು ಭಾಗವಾದ ಬಂಡವಾಳ ಸರಕುಗಳನ್ನು ವ್ಯವಹಾರಿ ಉದ್ಯಮ ಸಂಸ್ಥೆಗಳು ಕೊಳ್ಳುತ್ತವೆ. ಅವುಗಳನ್ನು ಬಂಡವಾಳ ದಾಸ್ತಾನಿನ ನಿರ್ವಹಣೆಗಾಗಿ ಬಳಸಬಹುದು ಏಕೆಂದರೆ ಅವುಗಳ ಸವಕಲು–ಹರಕಲು ಇದ್ದೇ ಇರುತ್ತದೆ ಅಥವಾ ಬಂಡವಾಳ ದಾಸ್ತಾನಿಗೆ ಸೇರ್ಪಡಿಸಿಕೊಳ್ಳಲು ಬಳಸಬಹುದು. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಉದಾಹರಣೆಗೆ, ಒಂದು ವರ್ಷದಲ್ಲಿ ಅಂತಿಮ ಸರಕುಗಳ ಉತ್ಪಾದನೆಯು ಅನುಭೋಗ ಅಥವಾ ಹೂಡಿಕೆ ರೂಪದಲ್ಲಿ ಇರಬಹುದು. ಇದು ಟ್ರೇಡ್–ಆಫ್‌ನ್ನು (*Trade-off*) ಸೂಚಿಸುತ್ತದೆ. (ಟ್ರೇಡ್–ಆಫ್: ಒಂದು ಅಂಶದಲ್ಲಿ ಏರಿಕೆಯಾಗುವುದರಿಂದ ಇನ್ನೊಂದು ಅಂಶದಲ್ಲಿ ಆಗುವ ಗುಣಾತ್ಮಕ ಅಥವಾ ಪರಿಮಾಣಾತ್ಮಕ ಇಳಿಕೆಯಾಗುವ ಸನ್ನಿವೇಶ.) ಒಂದು ಆರ್ಥಿಕತೆ ಅನುಭೋಗಿ ಸರಕುಗಳನ್ನು ಹೆಚ್ಚು ಉತ್ಪಾದಿಸಿದರೆ ಬಂಡವಾಳ ಸರಕುಗಳನ್ನು ಕಡಿಮೆ ಉತ್ಪಾದಿಸುತ್ತದೆ ಮತ್ತು ತದ್ವಿರುದ್ಧವಾಗಿರುತ್ತದೆ. (*vice-versa*).

ಹೆಚ್ಚು ಅತ್ಯಾಧುನಿಕ ಮತ್ತು ಭಾರಿ ಬಂಡವಾಳದ ಸರಕುಗಳು, ಕಾರ್ಮಿಕರ ಸರಕಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂಬುದನ್ನು ಸಾಮಾನ್ಯವಾಗಿ ಗಮನಿಸಲಾಗಿದೆ. ಸಾಂಪ್ರದಾಯಿಕ ನೇಯ್ಗೆಯವನು ಒಂದು ಸೀರೆಯನ್ನು ನೇಯ್ಗೆ ಮಾಡಲು ತಿಂಗಳುಗಳನ್ನು ತೆಗೆದುಕೊಳ್ಳುತ್ತಾನೆ. ಆದರೆ ಆಧುನಿಕ ಯಂತ್ರಗಳಿಂದ ಸಾವಿರಾರು ಮಾದರಿಯ ಬಟ್ಟೆಗಳನ್ನು ಒಂದು ದಿನದಲ್ಲಿ ತಯಾರಿಸಲಾಗುತ್ತದೆ. ಮಹಾನ್ ಐತಿಹಾಸಿಕ ಸ್ಮಾರಕಗಳಾದ ಪಿರಮಿಡ್ಡುಗಳನ್ನು ಅಥವಾ ತಾಜ್ ಮಹಲ್ ಅನ್ನು ಕಟ್ಟಲು ದಶಕಗಳನ್ನು ತೆಗೆದುಕೊಳ್ಳಲಾಯಿತು. ಆದರೆ ಆಧುನಿಕ ನಿರ್ಮಾಣ ಯಂತ್ರಗಳಿಂದ ಒಂದು ಗಗನಚುಂಬಿ ಕಟ್ಟಡವನ್ನು ಕೆಲವೇ ವರ್ಷಗಳಲ್ಲಿ ಕಟ್ಟಬಹುದು. ಆದ್ದರಿಂದ ಹೊಸ ರೀತಿಯ ಬಂಡವಾಳ ಸರಕುಗಳ ಅಧಿಕ ಉತ್ಪಾದನೆಯು ಅನುಭೋಗಿ ಸರಕುಗಳ ಅತ್ಯಧಿಕ ಉತ್ಪಾದನೆಗೆ ಸಹಾಯ ಮಾಡುತ್ತದೆ.

---

[2] ಬಂಡವಾಳದ ಬಳಕೆಗೆ ಅಪಘಾತಗಳು, ನೈಸರ್ಗಿಕ ವಿಕೋಪಗಳು, ಅಥವಾ ಅಂತಹ ಬಾಹ್ಯ ಸಂದರ್ಭಗಳಲ್ಲಿ ಸಂಭವಿಸಬಹುದಾದಂತಹ ಅನಿರೀಕ್ಷಿತ ಅಥವಾ ಹಠಾತ್ ವಿನಾಶದಂತಹವುಗಳನ್ನು ಸವಕಳಿ ತೆಗೆದುಕೊಳ್ಳುವುದಿಲ್ಲ.

[3] ನಾವು ಆಸ್ತಿ ಮೌಲ್ಯದ ಆಧಾರದ ಮೇಲೆ ಸವಕಳಿ ಸ್ಥಿರ ದರದಲ್ಲಿದೆಯೆಂದು ಇಲ್ಲಿ ಸರಳವಾದ ಊಹೆಯನ್ನು ಮಾಡುತ್ತಿದ್ದೇವೆ. ಪ್ರಸ್ತುತ ಆಚರಣೆಯಲ್ಲಿ ಸವಕಳಿಯನ್ನು ಲೆಕ್ಕಚಾರ ಮಾಡಲು ಇತರ ವಿಧಾನಗಳಿವೆ.

ಆದರೆ ನಮ್ಮನ್ನು ನಾವೇ ಸ್ವತಃ ಅಲ್ಲಗೆಳೆಯುತ್ತಿಲ್ಲವೇ? ಈ ಮೊದಲು ನೋಡಿರುವುದೇನೆಂದರೆ ಒಂದು ಆರ್ಥಿಕತೆಯಲ್ಲಿ ಅಂತಿಮ ಸರಕುಗಳ ಒಟ್ಟು ಉತ್ಪನ್ನದಲ್ಲಿ ಒಂದು ದೊಡ್ಡ ಪಾಲು ಬಂಡವಾಳ ಸರಕುಗಳ ಉತ್ಪಾದನೆಗೆ ಹೋದರೆ, ಗ್ರಾಹಕ ಸರಕುಗಳ ಉತ್ಪಾದನೆಗೆ ಸಣ್ಣ ಪಾಲು ಲಭ್ಯವಿರುತ್ತದೆ ಮತ್ತು ಈಗ ನಾವು ಹೆಚ್ಚಿನ ಬಂಡವಾಳ ಸರಕುಗಳನ್ನು ಕೂಡಿಡುತ್ತಿದ್ದೇವೆ ಎಂದರೆ ಮುಂದೆ ಹೆಚ್ಚು ಗ್ರಾಹಕ ಸರಕುಗಳ ಉತ್ಪಾದನೆಯಾಗುತ್ತದೆ ಎಂದು ಅರ್ಥಮಾಡಿಕೊಳ್ಳಬಹುದು. ಆದರೂ ಇಲ್ಲಿ ಯಾವುದೇ ವಿರೋಧಾಭಾಸವಿಲ್ಲ ಇಲ್ಲಿ ಮಹತ್ವವಾಗಿರುವುದೇನೆಂದರೆ ಸಮಯದ ಅಂಶ. ಅರ್ಥವ್ಯವಸ್ಥೆಯ ಒಂದು ನಿರ್ದಿಷ್ಟ ಅವಧಿಯಲ್ಲಿ, ಕೊಟ್ಟಿರುವ ಒಟ್ಟು ಉತ್ಪಾದನೆ ಮಟ್ಟದಲ್ಲಿ, ಹೆಚ್ಚು ಬಂಡವಾಳ ಸರಕುಗಳನ್ನು ಉತ್ಪಾದಿಸಿದರೆ ಕಡಿಮೆ ಗ್ರಾಹಕ ಸರಕುಗಳನ್ನು ಉತ್ಪಾದಿಸಲಾಗುತ್ತದೆ ಎಂಬುದು ನಿಜವಾಗಿದೆ. ಆದರೆ ಹೆಚ್ಚಿನ ಬಂಡವಾಳ ಸರಕುಗಳ ಉತ್ಪಾದನೆಯ ಅರ್ಥವೇನೆಂದರೆ ಭವಿಷ್ಯದಲ್ಲಿ ಕಾರ್ಮಿಕರಿಗೆ ಕೆಲಸ ಮಾಡಲು ಅಧಿಕ ಬಂಡವಾಳ ಸಾಮಗ್ರಿಗಳು ಇರುತ್ತವೆ ಎಂಬುದಾಗಿದೆ. ಅಷ್ಟೇ ಕಾರ್ಮಿಕರ ಸಂಖ್ಯೆಯಲ್ಲಿ ಆರ್ಥಿಕತೆಯ ಉತ್ಪಾದನಾ ಸಾಮರ್ಥ್ಯದ ಹೆಚ್ಚಳಕ್ಕೆ ಇದು ದಾರಿ ಮಾಡಿಕೊಡುತ್ತದೆಂದು ನಾವು ನೋಡಿದ್ದೇವೆ. ಹೀಗೆ ಬಂಡವಾಳ ಸರಕುಗಳನ್ನು ಕಡಿಮೆ ಉತ್ಪಾದಿಸಿದ ಸಂದರ್ಭಕ್ಕೆ ಹೋಲಿಸಿದರೆ ಒಟ್ಟು ಆದಾನವೇ ಹೆಚ್ಚಾಗಿರುತ್ತದೆ. ಒಂದು ವೇಳೆ ಒಟ್ಟು ಉತ್ಪನ್ನವು ಹೆಚ್ಚಾದರೆ ಉತ್ಪಾದಿಸಬಹುದಾದ ಗ್ರಾಹಕ ಸರಕುಗಳ ಪ್ರಮಾಣವು ನಿಶ್ಚಿತವಾಗಿ ಹೆಚ್ಚಾಗುತ್ತದೆ.

ಹೀಗೆ ಆರ್ಥಿಕ ಚಕ್ರವು ಉರುಳುವುದಲ್ಲದೆ ಅಧಿಕ ಬಂಡವಾಳದ ಸರಕುಗಳ ಉತ್ಪಾದನೆಯ ಆರ್ಥಿಕತೆಯ ವಿಸ್ತರಣೆಯನ್ನು ಸಾಧ್ಯವಾಗಿಸುತ್ತದೆ. ಇದುವರೆಗೆ ನಾವು ಮಾಡಿದ ಚರ್ಚೆಯಿಂದ ವೃತ್ತಾಕಾರದ ಹರಿವನ್ನು ಮತ್ತೊಂದು ರೀತಿಯಲ್ಲಿ ಅವಲೋಕಿಸಲು ಸಾಧ್ಯವಿದೆ.

**ನಾವು** ಮಾರುಕಟ್ಟೆಗಾಗಿ ತಯಾರಿಸಲಾದ ಎಲ್ಲಾ ಸರಕು ಮತ್ತು ಸೇವೆಗಳ ಬಗ್ಗೆ ಅಭ್ಯಾಸ ಮಾಡುತ್ತಿರುವುದರಿಂದ ಅಂತಹ ಮಾರಾಟವನ್ನು ಸಕ್ರಿಯಗೊಳಿಸುವ ಪ್ರಮುಖ ಅಂಶವೆಂದರೆ ಅಂತಹ ಉತ್ಪನ್ನಗಳಿಗೆ ಇರುವ ಕೊಳ್ಳುವ ಶಕ್ತಿಯಿಂದ ಕೂಡಿದ ಬೇಡಿಕೆಯಾಗಿದೆ. ಒಬ್ಬ ವ್ಯಕ್ತಿಯು ಸರಕುಗಳನ್ನು ಕೊಳ್ಳಲು ಅಗತ್ಯವಾದ ಸಾಮರ್ಥ್ಯವನ್ನು ಹೊಂದಿರಬೇಕು, ಇಲ್ಲವಾದಲ್ಲಿ ಮಾರುಕಟ್ಟೆಯು ಆ ವ್ಯಕ್ತಿಯ ಸರಕುಗಳ ಅವಶ್ಯಕತೆಯನ್ನು ಗುರುತಿಸುವುದಿಲ್ಲ.

ಬಂಡವಾಳದ ಮಾಲೀಕರಾಗಿ (ಬಡ್ಡಿಯನ್ನು ಸಂಪಾದಿಸುವುದು), ಕಾರ್ಮಿಕನಾಗಿ (ಕೂಲಿಯನ್ನು ಸಂಪಾದಿಸುವುದು) ಅಥವಾ ಉದ್ಯಮಶೀಲನಾಗಿ ಅಥವಾ ಭೂಮಾಲೀಕರಾಗಿ (ಗೇಣಿಯನ್ನು ಗಳಿಸುವುದು) ಪಡೆಯುವ ಆದಾಯದಿಂದ ಒಬ್ಬ ವ್ಯಕ್ತಿಯ ಸರಕುಗಳನ್ನು ಕೊಳ್ಳುವ ಸಾಮರ್ಥ್ಯವು ಬರುತ್ತದೆಂದು ನಾವು ಈಗಾಗಲೇ ಚರ್ಚಿಸಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಜನರು ಉತ್ಪಾದನಾಂಗಗಳ ಮಾಲೀಕರಾಗಿ ಗಳಿಸುವ ಆದಾಯವನ್ನು ತಮ್ಮ ಸರಕು ಮತ್ತು ಸೇವೆಗಳ ಬೇಡಿಕೆಯನ್ನು ಈಡೆರಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ.

ನಾವು ಇಲ್ಲಿ ಮಾರುಕಟ್ಟೆಯ ಮೂಲಕ ಸುಗಮಗೊಳಿಸಲಾಗಿರುವ ವೃತ್ತಾಕಾರದ ಹರಿವನ್ನು ನೋಡಬಹುದು. ಸರಳವಾಗಿ ಹೇಳುವುದಾದರೆ, ಉತ್ಪಾದನಾಂಗಗಳ ಬೇಡಿಕೆಯು ಸಾರ್ವಜನಿಕರಿಗೆ ಆದಾಯವನ್ನು ಸೃಷ್ಟಿಸುತ್ತದೆ, ಪ್ರತಿಯಾಗಿ, ಸಾರ್ವಜನಿಕರ ಸರಕು ಮತ್ತು ಸೇವೆಗಳ ಬೇಡಿಕೆಯು ಉದ್ಯಮ ಘಟಕಗಳಿಗೆ ಆದಾಯವನ್ನು ಸೃಷ್ಟಿಸುತ್ತದೆ ಮತ್ತು ಅವರು ಉತ್ಪಾದಿಸುವ ಉತ್ಪನ್ನಗಳ ಮಾರಾಟವನ್ನು ಸಾಧ್ಯವಾಗಿಸುತ್ತದೆ.

ಆದ್ದರಿಂದ,ಅನುಭೋಗ ಮತ್ತು ಉತ್ಪಾದನೆಯ ಸಾಮಾಜಿಕ ಕಾರ್ಯವು ಗಹನವಾದ ಸಂಬಂಧವನ್ನು ಹೊಂದಿವೆ ಮತ್ತು ವಾಸ್ತವವಾಗಿ ಇಲ್ಲಿ ವೃತ್ತಾಕಾರ ಫಲೋತ್ಪಾದನೆ ಇರುತ್ತದೆ. ಒಂದು ಆರ್ಥಿಕತೆಯಲ್ಲಿನ ಪ್ರಕ್ರಿಯೆಯು ಉತ್ಪಾದನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವವರಿಗಾಗಿ ಆದಾಯಗಳನ್ನು (ಪಾವತಿಯನ್ನು) ಉತ್ಪಾದಿಸುತ್ತದೆ ಮತ್ತು ಉತ್ಪಾದನಾ ಪ್ರಕ್ರಿಯೆಯ ಫಲಿತಾಂಶವಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತದೆ. ಹೀಗೆ ಉತ್ಪಾದಿಸಿದ ಆದಾಯವು ಅಂತಿಮ ಅನುಭೋಗಿ ಸರಕುಗಳನ್ನು ಖರೀದಿಸುವ ಸಾಮರ್ಥ್ಯವನ್ನು ಸೃಷ್ಟಿಸುತ್ತದೆ ಮತ್ತು ಆ ಮೂಲಕ ಉದ್ಯಮಗಳ ಉದ್ದೇಶವಾದ ಅವುಗಳ ಮಾರಾಟವನ್ನು ಸಕ್ರಿಯಗೊಳಿಸುತ್ತದೆ. ಅದೇ ರೀತಿ, ಉತ್ಪಾದನಾ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಬಂಡವಾಳ ಸರಕುಗಳೂ ಸಹ ತಮ್ಮ ಉತ್ಪಾದಕರು ಆದಾಯ – ವೇತನ, ಲಾಭ ಇತ್ಯಾದಿಗಳನ್ನು – ಗಳಿಸುವುದನ್ನು ಸಾಧ್ಯವಾಗಿಸುತ್ತವೆ. ಬಂಡವಾಳ ಸರಕುಗಳು

ಆರ್ಥಿಕತೆಯ ಬಂಡವಾಳ ದಾಸ್ತಾನಿಗೆ ಸೇರುತ್ತವೆ ಅಥವಾ ನಿರ್ವಹಿಸುತ್ತವೆ ಮತ್ತು ಹೀಗೆ ಇತರ ಸರಕುಗಳ ಉತ್ಪಾದನೆಯನ್ನು ಸಾಧ್ಯಗೊಳಿಸುತ್ತದೆ.

## 2.2 ರಾಷ್ಟ್ರೀಯ ಆದಾಯದ ವೃತ್ತಾಕಾರದ ಚಲನೆ ಮತ್ತು ರಾಷ್ಟ್ರೀಯ ಆದಾಯವನ್ನು ಲೆಕ್ಕಾಚಾರ ಮಾಡುವ ವಿಧಾನಗಳು: *Circlar Flow Of Income And Methods Of Calculating National Income*

ಹಿಂದಿನ ವಿಭಾಗದಲ್ಲಿನ ಆರ್ಥಿಕತೆಯ ವಿವರಣೆ ನಮಗೆ ಒಂದು ಸರಳ ಆರ್ಥಿಕತೆಯು ಸರಕಾರವಿಲ್ಲದೆ, ಬಾಹ್ಯ ವ್ಯಾಪಾರ ಅಥವಾ ಯಾವುದೇ ಉಳಿತಾಯವಿಲ್ಲದೆ, ಹೇಗೆ ಕಾರ್ಯನಿರ್ವಹಿಸಬಹುದು ಎಂಬ ಬಗ್ಗೆ ಒಂದು ಒರಟಾದ ಕಲ್ಪನೆ ಹೊಂದಲು ನೆರವಾಗುತ್ತದೆ. ಉದ್ಯಮ ಘಟಕಗಳಿಗಾಗಿ ಉತ್ಪಾದನಾ ಚಟುವಟಿಕೆಯನ್ನು ನಿರ್ವಹಿಸಿದ್ದಕ್ಕಾಗಿ ಕುಟುಂಬಗಳು ಉದ್ಯಮ ಘಟಕಗಳಿಂದ ಪಾವತಿಯನ್ನು ಪಡೆಯುತ್ತವೆ. ನಾವು ಮೊದಲೇ ಹೇಳಿದಂತೆ, ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಸಮಯದಲ್ಲಿ ಮೂಲಭೂತವಾಗಿ ಮಾಡಬಹುದಾದ ನಾಲ್ಕು ವಿಧದ ಕೊಡುಗೆಗಳು ಇರಬಹುದು (ಎ) ಮಾನವ ಶ್ರಮದಿಂದ ನೀಡಲಾದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಕೂಲಿ ಎನ್ನುತ್ತೇವೆ. (ಬಿ) ಬಂಡವಾದಿಂದ ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಬಡ್ಡಿ ಎಂದು ಕರೆಯುತ್ತೇವೆ (ಸಿ) ಉದ್ಯಮಶೀಲರು ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾನೆಯನ್ನು ಲಾಭ ಎನ್ನುತ್ತೇವೆ (ಡಿ) ಸ್ಥಿರ ನೈಸರ್ಗಿಕ ಸಂಪನ್ಮೂಲಗಳು (ಭೂಮಿ) ನೀಡಿದ ಕೊಡುಗೆ, ಇದಕ್ಕೆ ನೀಡಿದ ಸಂಭಾವನೆಯನ್ನು ಗೇಣಿ ಎಂದು ಕರೆಯುತ್ತೇವೆ.

ಸರಳೀಕೃತ ಆರ್ಥಿಕತೆಯಲ್ಲಿ, ಕುಟುಂಬಗಳು ತಮ್ಮ ಗಳಿಕೆಯನ್ನು ವಿಲೇವಾರಿ ಮಾಡುವ ಏಕೈಕ ಮಾರ್ಗವೆಂದರೆ ತಮ್ಮ ಸಂಪೂರ್ಣ ಆದಾಯವನ್ನು ದೇಶೀಯ ಉದ್ಯಮ ಘಟಕಗಳಿಂದ ಉತ್ಪಾದಿಸಲಾದ ಸರಕು ಮತ್ತು ಸೇವೆಗಳ ಮೇಲೆ ವ್ಯಯ ಮಾಡುವುದು. ತಮ್ಮ ಆದಾಯವನ್ನು ಹೊರಹಾಕುವ ಇತರ ದಾರಿಗಳನ್ನು (ವಾಹಿನಿ) ಮುಚ್ಚಲಾಗಿರುತ್ತದೆ. ನಾವು ಕುಟುಂಬಗಳು ಉಳಿತಾಯ ಮಾಡುವುದಿಲ್ಲವೆಂದು ಊಹಿಸಿದ್ದೇವೆ, ಸರ್ಕಾರವಿಲ್ಲದ ಕಾರಣ, ಅವರು ಸರ್ಕಾರಕ್ಕೆ ತೆರಿಗೆಯನ್ನು ಪಾವತಿಸುವುದಿಲ್ಲ – ಆಮದು ಮಾಡಿಕೊಳ್ಳುವ ಸರಕುಗಳನ್ನು ಖರೀದಿಸುವುದಿಲ್ಲ ಏಕೆಂದರೆ ಸರಳ ಆರ್ಥಿಕತೆಯಲ್ಲಿ ಬಾಹ್ಯ ವ್ಯಾಪಾರ ಇರುವುದಿಲ್ಲ. ಇದರರ್ಥವೆಂದರೆ ಉತ್ಪಾದನಾಂಗಗಳು ತಾವು ಉತ್ಪಾದಿಸಲು ಸಹಾಯ ಮಾಡಿದಂತಹ ಸರಕು ಸೇವೆಗಳುನ್ನು ಕೊಳ್ಳಲು ತಮ್ಮ ಸಂಭಾವನೆಗಳನ್ನು ಬಳಸುತ್ತವೆ. ಆರ್ಥಿಕತೆಯ ಕುಟುಂಬಗಳ ಸಮಗ್ರ ಅನುಭೋಗವು ಆರ್ಥಿಕತೆಯ ಉದ್ಯಮ ಘಟಕಗಳು ಸರಕು ಮತ್ತು ಸೇವೆಗಳ ಮೇಲೆ ಮಾಡಿದ ಒಟ್ಟು ವೆಚ್ಚಕ್ಕೆ ಸಮವಾಗಿರುತ್ತದೆ. ಆದ್ದರಿಂದ ಆರ್ಥಿಕತೆಯ ಸಂಪೂರ್ಣ ಆದಾಯ, ಮಾರಾಟದ ಆದಾಯದ ರೂಪದಲ್ಲಿ ಉತ್ಪಾದಕರಿಗೆ ಹಿಂತಿರುಗಿ ಬರುತ್ತದೆ. ವ್ಯವಸ್ಥೆಯಿಂದ ಯಾವುದೇ ಸೋರಿಕೆ ಇರುವುದಿಲ್ಲ – ಉತ್ಪಾದನಾ ಘಟಕಗಳು ಉತ್ಪಾದನಾಂಗಗಳಿಗೆ ಪಾವತಿಗಳ ರೂಪದಲ್ಲಿ ವಿತರಿಸಿದ ಮೊತ್ತ (ನಾಲ್ಕು ಉತ್ಪಾದನಾಂಗಗಳು ಗಳಿಸಿದ ಸಂಭಾವನೆಗಳ ಮೊತ್ತದ ಒಟ್ಟು ಮೊತ್ತ) ಮತ್ತು ಮಾರಾಟದ ಆದಾಯವಾಗಿ ಗಳಿಸಿದ ಸಮಗ್ರ ಅನುಭೋಗದ ವೆಚ್ಚಗಳ ನಡುವೆ ವ್ಯತ್ಯಾಸವಿರುವುದಿಲ್ಲ.

ಮುಂದಿನ ಅವಧಿಯಲ್ಲಿ ಉದ್ಯಮ ಘಟಕಗಳು ಮತ್ತೊಮ್ಮೆ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ ಮತ್ತು ಉತ್ಪಾದನಾಂಗಗಳಿಗೆ ಸಂಭಾವನೆಗಳನ್ನು ಪಾವತಿ ಮಾಡುತ್ತವೆ. ಸರಕು ಮತ್ತು ಸೇವೆಗಳನ್ನು ಖರೀದಿಸಲು ಈ ಸಂಭಾವನೆಗಳನ್ನು ಮತ್ತೊಮ್ಮೆ ಬಳಸಲಾಗುತ್ತದೆ. ಆದ್ದರಿಂದ ವರ್ಷ ಉರುಳಿದಂತೆ ಒಂದು ದೇಶದ ಒಟ್ಟು ಆದಾಯವು, ಎರಡು ವಲಯಗಳ ಮೂಲಕ, ಉದ್ಯಮ ಘಟಕ ಮತ್ತು ಕುಟುಂಬಗಳ ಮೂಲಕ ವೃತ್ತಾಕಾರದ ರೀತಿಯಲ್ಲಿ ಹಾದುಹೋಗುತ್ತದೆ ಎಂದು ಊಹಿಸಬಹುದು. ಇದನ್ನು ರೇಖಾಚಿತ್ರ 2.1 ರಲ್ಲಿ ಪ್ರತಿನಿಧಿಸಲಾಗಿದೆ. ಉದ್ಯಮ ಘಟಕಗಳಿಂದ ಉತ್ಪಾದಿಸಲಾದ ಸರಕು ಮತ್ತು ಸೇವೆಗಳ ಮೇಲೆ ಆದಾಯವನ್ನು ವೆಚ್ಚ ಮಾಡಿದಾಗ ಅದು ಉದ್ಯಮ ಘಟಕಗಳಿಂದ ಸ್ವೀಕರಿಸಿದ **ಸಮಗ್ರ ವೆಚ್ಚದ** ರೂಪವನ್ನು ಪಡೆಯುತ್ತದೆ. ವೆಚ್ಚದ ಮೌಲ್ಯವು ಸರಕು ಮತ್ತು ಸೇವೆಗಳ ಮೌಲ್ಯಕ್ಕೆ ಸಮನಾಗಿರಬೇಕಾಗಿರುವುದರಿಂದ **ಸಮಗ್ರ ಆದಾಯವನ್ನು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಲೆಕ್ಕಾಚಾರ**

**ಮಾಡುವುದರಿಂದ ಮಾಪನ ಮಾಡಬಹುದಾಗಿದೆ.** ಉದ್ಯಮ ಘಟಕಗಳು ಪಡೆಯುವ ಸಮಗ್ರ ಆದಾಯವನ್ನು ಉತ್ಪಾದನಾಂಗಗಳಿಗೆ ಪಾವತಿಸಿದಾಗ ಅದು ಸಮಗ್ರ ಆದಾಯದ ರೂಪವನ್ನು ಪಡೆಯುತ್ತದೆ.




**ರೇಖಾಚಿತ್ರ 2.1:** ಸರಳ ಆರ್ಥಿಕತೆಯಲ್ಲಿ ಆದಾಯದ ವೃತ್ತಕಾರದ ಹರಿವು

ಚಿತ್ರ 2.1 ರಲ್ಲಿ, ಕುಟುಂಬಗಳಿಂದ ಉದ್ಯಮ ಘಟಕಗಳಿಗೆ ಹೋಗುವ, ಮೇಲ್ಭಾಗದ ಬಾಣದ ಗುರುತು, ಕುಟುಂಬಗಳು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಖರೀದಿಸಲು ವೆಚ್ಚ ಮಾಡುತ್ತವೆ ಎಂಬುದನ್ನು ಪ್ರತಿನಿಧಿಸುತ್ತದೆ. ಉದ್ಯಮಗಳಿಂದ ಕುಟುಂಬಗಳಿಗೆ ಹೋಗುವ ಎರಡನೇ ಬಾಣವು ಮೇಲಿನ ಬಾಣದ ಪ್ರತಿರೂಪವಾಗಿದೆ. ಇದು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಹರಿಯುವ ಸರಕು ಮತ್ತು ಸೇವೆಗಳನ್ನು ಪ್ರತಿನಿಧಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಈ ಹರಿವುಗಳನ್ನು ಕುಟುಂಬಗಳು ಉದ್ಯಮ ಘಟಕಗಳಿಂದ ಪಡೆದಿರುತ್ತವೆ. ಇದಕ್ಕಾಗಿ ಅವರು ವೆಚ್ಚ ಮಾಡುತ್ತಾರೆ. ಸಂಕ್ಷಿಪ್ತವಾಗಿ ಮೇಲಿನ ಎರಡೂ ಬಾಣದ ಗುರುತುಗಳು ಸರಕು ಮತ್ತು ಸೇವೆಗಳ ಮಾರುಕಟ್ಟೆಯನ್ನು ಪ್ರತಿನಿಧಿಸುತ್ತವೆ. ಮೇಲಿನ ಬಾಣವು ಸರಕು ಮತ್ತು ಸೇವೆಗಳ ಪಾವತಿಗಳ ಹರಿವನ್ನು ಪ್ರತಿನಿಧಿಸುತ್ತದೆ, ಕೆಳಗಿನ ಬಾಣವು ಸರಕು ಮತ್ತು ಸೇವೆಗಳ ಹರಿವನ್ನು ಪ್ರತಿನಿಧಿಸುತ್ತದೆ. ಅದೇ ರೀತಿ ರೇಖಾ ಚಿತ್ರದ ಕೆಳಭಾಗದಲ್ಲಿರುವ ಎರಡು ಬಾಣಗಳು ಉತ್ಪಾದನಾಂಗಗಳ ಮಾರುಕಟ್ಟೆಯನ್ನು ಪ್ರತಿನಿಧಿಸುತ್ತವೆ. ಕುಟುಂಬಗಳಿಂದ ಉದ್ಯಮ ಘಟಕಗಳಿಗೆ ಹೋಗುವ ಅತ್ಯಂತ ಕೆಳಗಿನ ಬಾಣವು, ಉದ್ಯಮ ಘಟಕಗಳಿಗೆ ಕುಟುಂಬಗಳು ಸಲ್ಲಿಸುವ ಸೇವೆಗಳನ್ನು ಸಂಕೇತಿಸುತ್ತದೆ. ಈ ಸೇವೆಗಳನ್ನು ಬಳಸಿಕೊಂಡು ಉದ್ಯಮ ಘಟಕಗಳು ಉತ್ಪನ್ನಗಳನ್ನು ಉತ್ಪಾದಿಸುತ್ತವೆ. ಇದರ ಮೇಲಿರುವ ಉದ್ಯಮಘಟಕಗಳಿಂದ ಕುಟುಂಬಗಳಿಗೆ ಹೋಗುವ ಬಾಣವು, ಕುಟುಂಬಗಳು ಒದಗಿಸಿದ ಸೇವೆಗಳಿಗಾಗಿ ಉದ್ಯಮ ಘಟಕಗಳು ಮಾಡಿದ ಪಾವತಿಗಳನ್ನು ಪ್ರತಿನಿಧಿಸುತ್ತದೆ.

ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಪ್ರತಿನಿಧಿಸುವ ಅಷ್ಟೇ ಪ್ರಮಾಣದ ಹಣವು ವೃತ್ತಾಕಾರದ ರೀತಿಯಲ್ಲಿ ಚಲಿಸುತ್ತದೆ. ಒಂದು ವರ್ಷದಲ್ಲಿ ಉತ್ಪತ್ತಿಯಾದ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಅಂದಾಜು ಮಾಡಲು ಬಯಸಿದರೆ, ರೇಖಾಚಿತ್ರದಲ್ಲಿನ ಯಾವುದೇ ಚುಕ್ಕಿಗಳ ಸಾಲುಗಳಲ್ಲಿ ಹರಿವಿನ ವಾರ್ಷಿಕ ಮೌಲ್ಯಗಳನ್ನು ಅಳೆಯಬಹುದು. ಉದ್ಯಮ ಘಟಕಗಳು ತಾವು ಉತ್ಪಾದಿಸುವ ಅಂತಿಮ ಸರಕು ಮತ್ತು ಸೇವೆಗಳಿಗಾಗಿ ಪಡೆಯುವ ಸಮಗ್ರ ವೆಚ್ಚದ ಮೌಲ್ಯವನ್ನು ಅಳತೆ ಮಾಡುವುದರಿಂದ ಮೇಲಿನ ಹರಿವಿನ (*A* ಬಿಂದುವಿನಲ್ಲಿ) ಅಳತೆ ಮಾಡಬಹುದಾಗಿದೆ. ಈ ವಿಧಾನವನ್ನು **ವೆಚ್ಚದ ವಿಧಾನ**ವೆಂದು ಕರೆಯಲಾಗುವುದು. ಎಲ್ಲಾ ಉದ್ಯಮಗಳಿಂದ ಉತ್ಪತ್ತಿಯಾದ ಅಂತಿಮ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಅಳೆಯುವ ಮೂಲಕ ನಾವು '*B* ನಲ್ಲಿ ಹರಿವನ್ನು ಅಳತೆ ಮಾಡಿದರೆ ಅದನ್ನು **ಉತ್ಪನ್ನದ ವಿಧಾನ** ಎಂದು ಕರೆಯಲಾಗುತ್ತದೆ. *C* ನಲ್ಲಿ ಎಲ್ಲಾ ಉತ್ಪಾದನಾಂಗಗಳ ಪಾವತಿಗಳ ಮೊತ್ತವನ್ನು ಅಳೆಯುವುದನ್ನು **ಆದಾಯದ ವಿಧಾನ** ಎಂದು ಕರೆಯಲಾಗುತ್ತದೆ.

ಆರ್ಥಿಕತೆಯ ಸಮಗ್ರ ವೆಚ್ಚವು ಉತ್ಪಾದನಾಂಗಗಳು ಗಳಿಸುವ ಸಮಗ್ರ ಆದಾಯಕ್ಕೆ ಸಮನಾಗಿರಬೇಕು ಎಂಬುದನ್ನು ಗಮನಿಸಿ (*A* ಮತ್ತು '*C*' ಬಿಂದುವಿನಲ್ಲಿ ಹರಿವು ಸಮನಾಗಿದೆ) ನಿರ್ದಿಷ್ಟ ಸಮಯದ ಅವಧಿಯಲ್ಲಿ ಕುಟುಂಬಗಳು ಸರಕುಗಳು ಮತ್ತು ಸೇವೆಗಳ ಮೇಲೆ ಹೆಚ್ಚು ಖರ್ಚು ಮಾಡಲು ನಿರ್ಧರಿಸುತ್ತವೆ ಎಂದು ಈಗ ಭಾವಿಸೋಣ. ಆ ಸಮಯದಲ್ಲಿ ಅವರು ಹೆಚ್ಚುವರಿ ಹಣವನ್ನು ವೆಚ್ಚ ಮಾಡಲು ಹಣವನ್ನು ಎಲ್ಲಿಂದ ಪಡೆಯುತ್ತಾರೆ ಎಂಬ ಪ್ರಶ್ನೆಯನ್ನು ನಾವು ನಿರ್ಲಕ್ಷಿಸೋಣ. ಏಕೆಂದರೆ ಅವರು ಈಗಾಗಲೇ ತಮ್ಮ ಎಲ್ಲಾ ಆದಾಯವನ್ನು ವ್ಯಯ ಮಾಡಿದ್ದಾರೆ. (ಹೆಚ್ಚುವರಿಯಾಗಿ ವ್ಯಯ ಮಾಡಲು ಹಣವನ್ನು ಅವರು ಎರವಲು ಪಡೆದಿರಬಹುದು). ಅವರು ಈಗ ಸರಕು ಮತ್ತು ಸೇವೆಗಳ ಮೇಲೆ ಅಧಿಕ ವೆಚ್ಚ ಮಾಡಿದರೆ ಈ ಹೆಚ್ಚುವರಿ

ಬೇಡಿಕೆಯನ್ನು ಪೂರೈಸಲು ಉದ್ಯಮ ಘಟಕಗಳು ಅಧಿಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ. ಉತ್ಪಾದನೆ ಹೆಚ್ಚಿಸುವುದರಿಂದ ಉದ್ಯಮ ಘಟಕಗಳು ಸಹ ಹೆಚ್ಚುವರಿ ಉತ್ಪಾದನಾಂಗಗಳಿಗೆ ಹೆಚ್ಚಿನ ಸಂಭಾವನೆ ನೀಡಬೇಕಾಗುತ್ತದೆ. ಉದ್ಯಮ ಘಟಕಗಳು ಹೆಚ್ಚುವರಿಯಾಗಿ ಎಷ್ಟು ಹಣವನ್ನು ಪಾವತಿಸುತ್ತವೆ? ಹೆಚ್ಚುವರಿ ಪಾವತಿಗಳು, ಉತ್ಪಾದಿಸಿದ ಹೆಚ್ಚುವರಿ ಸರಕುಗಳು ಮತ್ತು ಸೇವೆಗಳ ಮೌಲ್ಯಗಳಿಗೆ ಸಮಾನವಾಗಿರಬೇಕು. ಆದ್ದರಿಂದ ಕುಟುಂಬಗಳು ಅಂತಿಮವಾಗಿ ಅವರು ಕೈಗೊಂಡ ಹೆಚ್ಚುವರಿ ಆರಂಭಿಕ ವೆಚ್ಚಕ್ಕೆ ಬೆಂಬಲ ನೀಡುವ ಹೆಚ್ಚುವರಿ ಆದಾಯವನ್ನು ಪಡೆಯುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಕುಟುಂಬಗಳು ತಮ್ಮ ಸಾಧನಗಳನ್ನು ಮೀರಿ ಹೆಚ್ಚು ವ್ಯಯ ಮಾಡಲು ನಿರ್ಧರಿಸಬಹುದು. ಮತ್ತು ಕೊನೆಯಲ್ಲಿ ಅದರ ಹೆಚ್ಚುವರಿ ವೆಚ್ಚವನ್ನು ಕೈಗೊಳ್ಳಲು ನಿಖರವಾಗಿ ಅಗತ್ಯವಾದ ಮೊತ್ತದಷ್ಟು ಆದಾಯ ಹೆಚ್ಚುತ್ತದೆ. ವಿಭಿನ್ನವಾಗಿ ಹೇಳುವುದಾದರೆ, ಆರ್ಥಿಕತೆಯು ಪ್ರಸ್ತುತ ಮಟ್ಟದ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಲು ನಿರ್ಧರಿಸಬಹುದು. ಆದರೆ ಹೀಗೆ ಮಾಡುವುದರಿಂದ, ಅದರ ಆದಾಯವು ಅಂತಿಮವಾಗಿ, ಹೆಚ್ಚಿನ ಮಟ್ಟದ ವೆಚ್ಚದೊಂದಿಗೆ, ಉನ್ನತ ಮಟ್ಟದ ಸ್ಥಿರತೆಗೆ ಹೆಚ್ಚುತ್ತದೆ. ಮೊದಲಿಗೆ ಇದು ಸ್ವಲ್ಪ ವಿರೋಧಾಭಾಸವಾಗಿ ಕಾಣಬಹುದು. ಆದರೆ ಆದಾಯವು ವೃತ್ತಾಕಾರದ ರೀತಿಯಲ್ಲಿ ಚಲಿಸುತ್ತಿರುವ ಕಾರಣ, ಒಂದು ಹಂತದ ಹರಿವಿನ ಹೆಚ್ಚಳವು, ಅಂತಿಮವಾಗಿ ಎಲ್ಲಾ ಹಂತಗಳ ಹರಿವಿನ ಹೆಚ್ಚಳಕ್ಕೆ ಕಾರಣವಾಗಬೇಕು ಎಂದು ಲೆಕ್ಕಚಾರ ಮಾಡುವುದು ಕಷ್ಟಕರವಲ್ಲ. ಒಬ್ಬ ಆರ್ಥಿಕ ಏಜೆಂಟ್‌ನ ಕಾರ್ಯಕ್ಕೂ, ಇಡೀ ಆರ್ಥಿಕತೆಯ ಕಾರ್ಯ ನಿರ್ವಹಣೆಗೂ ವ್ಯತ್ಯಾಸವಿರುತ್ತದೆ ಎಂಬುದನ್ನು ತೋರಿಸಲು ಇದು ಒಂದು ಉದಾಹರಣೆಯಾಗಿದೆ. ಮೊದಲನೆಯದರಲ್ಲಿ ಒಂದು ಕುಟುಂಬದ ವೆಚ್ಚವು ಆ ಕುಟುಂಬದ ಆದಾಯಕ್ಕೆ ನಿರ್ಬಂಧಿತವಾಗುತ್ತದೆ. ಒಬ್ಬ ಏಕೈಕ ಕೆಲಸಗಾರ (ಕಾರ್ಮಿಕ) ಹೆಚ್ಚು ವೆಚ್ಚವನ್ನು ಕೈಗೊಳ್ಳಲು ನಿರ್ಧರಿಸುತ್ತಾನೆ ಮತ್ತು ಇದು ಅದಕ್ಕೆ ಸಮನಾದ ಆದಾಯದ ಹೆಚ್ಚಳ ಉಂಟು ಮಾಡುತ್ತದೆಂದು ಹೇಳಲು ಸಾಧ್ಯವಿಲ್ಲ. ಸಮಗ್ರ ವೆಚ್ಚವು ಹೇಗೆ ಸಮಗ್ರ ಆದಾಯದಲ್ಲಿ ವ್ಯತ್ಯಾಸವನ್ನುಂಟು ಮಾಡುತ್ತದೆಂದು ಮುಂದಿನ ಅಧ್ಯಾಯಗಳಲ್ಲಿ ತಿಳಿಯೋಣ.

ಮೇಲೆ ನಮೂದಿಸಿರುವ ಚಿತ್ರರೂಪದ ವಿವರಣೆಯು ಸರಳವಾದುದುದಾಗಿದೆ. ಇಂತಹ ಕಾಲ್ಪನಿಕ ಆರ್ಥಿಕತೆಯ ವೃತ್ತಾಂತದ ವಿವರಣೆಯನ್ನು **'ಸಮಗ್ರ ಆರ್ಥಿಕ ಮಾದರಿ'** ಎನ್ನುತ್ತೇವೆ. ಒಂದು ಮಾದರಿಯು ವಾಸ್ತವಿಕ ಆರ್ಥಿಕತೆಯನ್ನು ವಿವರವಾಗಿ ವಿವರಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ನಮ್ಮ ಮಾದರಿಯು ಕುಟುಂಬಗಳು ಉಳಿತಾಯ ಮಾಡುವುದಿಲ್ಲವೆಂದು, ಸರ್ಕಾರ ಅಸ್ಥಿತ್ವವಿರುವುದಿಲ್ಲವೆಂದು, ಇತರ ರಾಷ್ಟ್ರಗಳೊಂದಿಗೆ ವ್ಯಾಪಾರವಿರುವುದಿಲ್ಲವೆಂದು ಊಹಿಸುತ್ತದೆ. ಆದಾಗ್ಯೂ ಪ್ರತಿ ನಿಮಿಷದ ವಿವರಗಳಲ್ಲಿ ಆರ್ಥಿಕತೆಯನ್ನು ಹಿಡಿದಿಟ್ಟುಕೊಳ್ಳಲು ಮಾದರಿಗಳು ಬಯಸುವುದಿಲ್ಲ, ಆರ್ಥಿಕ ವ್ಯವಸ್ಥೆಯ ಕಾರ್ಯಚಟುವಟಿಕೆಯ ಕೆಲವು ಅಗತ್ಯ ಲಕ್ಷಣಗಳನ್ನು ಎತ್ತಿತೋರಿಸುವುದು ಅವುಗಳ ಪ್ರಮುಖ ಉದ್ದೇಶವಾಗಿದೆ. ಆದರೆ ಆರ್ಥಿಕತೆಯ ಅಗತ್ಯ ಲಕ್ಷಣಗಳನ್ನು ತಪ್ಪಾಗಿ ನಿರೂಪಿಸುವಷ್ಟು ಸರಳಗೊಳಿಸದಂತೆ ಎಚ್ಚರಿಕೆ ವಹಿಸಬೇಕು. ಅರ್ಥಶಾಸ್ತ್ರದ ವಿಷಯವು ಮಾದರಿಗಳಿಂದ ತುಂಬಿದ್ದು, ಅವುಗಳಲ್ಲಿ ಅನೇಕ ಮಾದರಿಗಳನ್ನು ಈ ಪುಸ್ತಕದಲ್ಲಿ ಪ್ರಸ್ತುತಪಡಿಸಲಾಗಿದೆ. ಯಾವ ವಾಸ್ತವಿಕ ಬದುಕಿನ ಸನ್ನಿವೇಶಕ್ಕೆ ಯಾವ ಮಾದರಿಯು ಅನ್ವಯಿಸುತ್ತದೆ ಎಂಬುದನ್ನು ಲೆಕ್ಕಚಾರ ಮಾಡುವುದು ಅರ್ಥಶಾಸ್ತ್ರಜ್ಞರ ಕೆಲಸವಾಗಿದೆ.

ಮೇಲೆ ವಿವರಿಸಿರುವ ನಮ್ಮ ಸರಳ ಮಾದರಿಯನ್ನು ನಾವು ಬದಲಾಯಿಸಿ, ಉಳಿತಾಯವನ್ನು ಪರಿಚಯಿಸಿದರೆ $A$ ಅಥವಾ $B$ ಅಥವಾ $C$ ಬಿಂದುಗಳಲ್ಲಿ ಯಾವುದೇ ಬಿಂದುವಿನಲ್ಲಿ ಲೆಕ್ಕಾಚಾರ ಮಾಡಿದರೂ ಆರ್ಥಿಕತೆಯ ಸಮಗ್ರ ಆದಾಯದ ಅಂದಾಜು ಒಂದೇ ಆಗಿರುತ್ತದೆ ಎಂಬ ಪ್ರಮುಖ ತೀರ್ಮಾನವನ್ನು ಅದು ಬದಲಾಯಿಸುತ್ತದೆಯೇ? ಈ ತೀರ್ಮಾನವು ಮೂಲಭೂತ ರೀತಿಯಲ್ಲಿ ಬದಲಾಗುವುದಿಲ್ಲ ಎಂದು ಹೇಳುತ್ತದೆ. ಆರ್ಥಿಕ ವ್ಯವಸ್ಥೆಯು ಎಷ್ಟೇ ಸಂಕೀರ್ಣವಾಗಿದ್ದರೂ ಸರಕು ಮತ್ತು ಸೇವೆಗಳ ವಾರ್ಷಿಕ ಉತ್ಪಾದನೆಯ ಅಂದಾಜು ಎಲ್ಲಾ ಮೂರು ವಿಧಾನಗಳಲ್ಲೂ ಒಂದೇ ಆಗಿರುತ್ತದೆ.

ಒಂದು ಆರ್ಥಿಕತೆಯಲ್ಲಿ ಸರಕು ಮತ್ತು ಸೇವೆಗಳ ಒಟ್ಟು ಉತ್ಪಾದನಾ ಮೌಲ್ಯಗಳನ್ನು ಮೂರು ವಿಧಾನಗಳ ಮೂಲಕ ಲೆಕ್ಕಾಚಾರ ಮಾಡಬಹುದೆಂಬುದನ್ನು ನೋಡಿದ್ದೇವೆ. ಈಗ ನಾವು ಈ ಲೆಕ್ಕಾಚಾರಗಳ ವಿವಿಧ ಹಂತಗಳನ್ನು ವಿವರವಾಗಿ ಚರ್ಚಿಸುತ್ತೇವೆ.

### 2.2.1. ಉತ್ಪನ್ನ ಅಥವಾ ಮೌಲ್ಯವರ್ಧಿತ ವಿಧಾನ *The Product or Value Added Method*

ಉತ್ಪನ್ನ ವಿಧಾನದಲ್ಲಿ ನಾವು ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಲೆಕ್ಕಾಚಾರ ಮಾಡುತ್ತೇವೆ. (ವರ್ಷವು ಸಮಯದ ಒಂದು ಘಟಕವಾಗಿದ್ದರೆ). ಇದನ್ನು ಮಾಡುವುದು ಹೇಗೆ? ಆರ್ಥಿಕತೆಯಲ್ಲಿ ಉತ್ಪಾದಿಸಿದ ಎಲ್ಲಾ ಸರಕು ಮತ್ತು ಸೇವೆಗಳ ಮೌಲ್ಯಗಳನ್ನು ಸೇರಿಸುತ್ತೇವೆಯೇ? ಇದನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ಉದಾಹರಣೆ ನಮಗೆ ಸಹಾಯ ಮಾಡುತ್ತದೆ.

ಆರ್ಥಿಕತೆಯಲ್ಲಿ ಎರಡೇ ವಿಧದ ಉತ್ಪಾದಕರು ಇರುತ್ತಾರೆ ಎಂದು ನಾವು ಭಾವಿಸೋಣ. ಅವರು ಗೋಧಿ ಉತ್ಪಾದಕರು (ಅಥವಾ ರೈತರು) ಮತ್ತು ಬ್ರೆಡ್ ತಯಾರಕರು (ರೊಟ್ಟಿ ಮಾಡುವವರು). ಗೋಧಿ ಉತ್ಪಾದಕರು ಗೋಧಿ ಬೆಳೆಯುತ್ತಾರೆ ಮತ್ತು ಅವರಿಗೆ ಮಾನವ ಕಾರ್ಮಿಕರ (ಶ್ರಮದ) ಹೊರತಾಗಿ ಬೇರೆ ಯಾವುದೇ ಆದಾನ ಬೇಕಾಗಿಲ್ಲ. ಅವರು ಬೇಕರಿಯವರಿಗೆ ಗೋಧಿಯ ಒಂದು ಭಾಗವನ್ನು ಮಾರಾಟ ಮಾಡುತ್ತಾರೆ. ಬೇಕರಿಯವರಿಗೆ ಬ್ರೆಡ್ ತಯಾರಿಸಲು ಗೋಧಿ ಹೊರತುಪಡಿಸಿ ಬೇರಾವುದೇ ಕಚ್ಚಾ ವಸ್ತುಗಳ ಅಗತ್ಯವಿಲ್ಲ. ಒಂದು ವರ್ಷದಲ್ಲಿ ರೈತರು ಉತ್ಪಾದಿಸಿದ ಗೋಧಿಯ ಒಟ್ಟು ಮೌಲ್ಯವು ₹100 ಆಗಿದೆ ಎಂದು ಭಾವಿಸೋಣ. ಇದರಿಂದ ಅವರು 50 ರೂಪಾಯಿ ಗೋಧಿಯನ್ನು ಬೇಕರಿಯವರಿಗೆ ಮಾರಾಟ ಮಾಡಿದ್ದಾರೆ. ಬೇಕರಿಯವರು ವರ್ಷವಿಡೀ ಈ ಗೋಧಿಯನ್ನು ಬಳಸುತ್ತಾರೆ ಮತ್ತು 200 ₹ ಮೌಲ್ಯದ ಬ್ರೆಡ್ ಅನ್ನು ತಯಾರಿಸುತ್ತಾರೆ. ಆರ್ಥಿಕತೆಯಲ್ಲಿ ಒಟ್ಟು ಉತ್ಪಾದನೆಯ ಮೌಲ್ಯವು ಎಷ್ಟು? ನಾವು ವಿವಿಧ ವಲಯಗಳ ಉತ್ಪಾದನೆಯ ಮೌಲ್ಯಗಳನ್ನು ಒಟ್ಟುಗೂಡಿಸುವ ಸರಳ ಮಾರ್ಗವನ್ನು ಅನುಸರಿಸಿದರೆ ನಾವು ₹200 ಗಳನ್ನು (ಬೇಕರಿಯವರ ಉತ್ಪಾದನೆಯ ಮೌಲ್ಯ) ₹ 100 (ರೈತರ ಉತ್ಪಾದನೆಯ ಮೌಲ್ಯ) ಕ್ಕೆ ಸೇರಿಸುತ್ತೇವೆ. ಇದರ ಫಲಿತಾಂಶವು ₹. 300 ಆಗಿರುತ್ತದೆ.

ಸ್ವಲ್ಪ ಚಿಂತನೆ ನಡೆಸಿದರೆ, ಒಟ್ಟಾರೆ ಉತ್ಪಾದನೆಯ ಮೌಲ್ಯ ₹ 300 ರಷ್ಟಲ್ಲ ಎಂದು ನಮಗೆ ತಿಳಿಯುತ್ತದೆ. ಯಾವುದೇ ಆದಾನಗಳ ಅಗತ್ಯವಿಲ್ಲದೇ 100 ರೂಪಾಯಿಗಳಷ್ಟು ಗೋಧಿಯನ್ನು ರೈತರು ಉತ್ಪಾದಿಸಿದ್ದಾರೆ. ಆದ್ದರಿಂದ ಸಂಪೂರ್ಣವಾಗಿ ₹ 100 ರೈತರ ಸೂಕ್ತ ಕೊಡುಗೆಯಾಗಿದೆ. ಆದರೆ ಬೇಕರಿಯವರ ವಿಷಯದಲ್ಲಿ ಇದು ನಿಜವಲ್ಲ. ಬೇಕರಿಯವರು ತಮ್ಮ ಬ್ರೆಡ್‌ನ್ನು ತಯಾರಿಸಲು ₹. 50 ಮೌಲ್ಯದ ಗೋಧಿಯನ್ನು ಖರೀದಿಸ –ಬೇಕಾಯಿತು. ಅವರು ಒದಗಿಸಿದ ₹ 200 ಮೌಲ್ಯದ ಬ್ರೆಡ್ ಸಂಪೂರ್ಣವಾಗಿ ಅವರ ಕೊಡುಗೆಯಾಗಿಲ್ಲ. ಬೇಕರಿಯವರ ಕೊಡುಗೆಯ ಲೆಕ್ಕಾಚಾರವನ್ನು ಮಾಡಲು ಅವರು ರೈತರಿಂದ ಖರೀದಿಸಿದ ಮೌಲ್ಯವನ್ನು ನಾವು ಕಳೆಯಬೇಕಾದ ಅಗತ್ಯವಿದೆ. ನಾವು ಇದನ್ನು ಮಾಡದಿದ್ದರೆ ದ್ವಿ ಎಣಿಕೆಯ' ತಪ್ಪನ್ನು ಮಾಡುತ್ತೇವೆ. ಏಕೆಂದರೆ ₹ 50 ಮೌಲ್ಯದ ಗೋಧಿಯನ್ನು ಎರಡು ಬಾರಿ ಎಣಿಕೆ ಮಾಡಲಾಗುತ್ತದೆ. ಮೊದಲನೇ ಬಾರಿಗೆ ಇದು ರೈತರ ಉತ್ಪಾದನೆಯ ಭಾಗವಾಗಿ ಪರಿಗಣಿಸಲಾಗಿದೆ. ಎರಡನೆಯ ಬಾರಿಗೆ ಬೇಕರಿಯವನಿಂದ ತಯಾರಿಸಿದ ಬ್ರೆಡ್ ನಲ್ಲಿ ಗೋಧಿಯ ಆದಾನದ ಮೌಲ್ಯವಾಗಿ ಇದನ್ನು ಪರಿಗಣಿಸಲಾಗುತ್ತದೆ.

ಆದ್ದರಿಂದ, ಬೇಕರಿಯವರು ಮಾಡಿದ ನಿವ್ವಳ ಕೊಡುಗೆ, ₹ 200 – ₹ 50 = ₹ 150. ಹೀಗಾಗಿ ಈ ಸರಳ ಆರ್ಥಿಕತೆಯಿಂದ ಉತ್ಪತ್ತಿಯಾಗುವ ಸರಕುಗಳ ಒಟ್ಟಾರೆ ಮೌಲ್ಯ ₹ 100 (ರೈತರ ನಿವ್ವಳ ಕೊಡುಗೆ) + ₹ 150 (ಬೇಕರಿಯವರ ನಿವ್ವಳ ಕೊಡುಗೆ) = ₹ 250.

ಒಂದು ಉದ್ಯಮ ಘಟಕವು ಮಾಡಿದ ನಿವ್ವಳ ಕೊಡುಗೆಯನ್ನು ಸೂಚಿಸಲು ಬಳಸುವ ಪದವನ್ನು ಅದರ **ಮೌಲ್ಯವರ್ಧನೆ** ಎಂದು ಕರೆಯಲಾಗುತ್ತದೆ. ಉದ್ಯಮ ಘಟಕವು ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಬಳಸಲಾಗುವ ಕಚ್ಚಾಸರಕುಗಳನ್ನು ಮತ್ತೊಂದು ಉದ್ಯಮದಿಂದ ಖರೀದಿಸಿದರೆ ಅಂತಹ ಕಚ್ಚಾಸರಕುಗಳನ್ನು **'ಮಧ್ಯಂತರ ಸರಕುಗಳು'** ಎಂದು ಕರೆಯುವುದನ್ನು ನಾವು ನೋಡಿದ್ದೇವೆ. ಆದ್ದರಿಂದ, ಉದ್ಯಮ ಘಟಕದ ಉತ್ಪಾದನೆಯ ಮೌಲ್ಯ – ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳ ಮೌಲ್ಯ = ಒಂದು ಉದ್ಯಮ ಘಟಕದಿಂದ ಆದ ಮೌಲ್ಯ ವರ್ಧನೆ. ಒಂದು ಉದ್ಯಮ ಘಟಕವು ಸೇರಿಸಿದ (ಮೌಲ್ಯವರ್ಧನೆ ಮಾಡಿದ) ಮೌಲ್ಯವನ್ನು ಶ್ರಮ, ಬಂಡವಾಳ, ಸಂಘಟನೆ ಮತ್ತು ಭೂಮಿ ಎಂಬ ನಾಲ್ಕು ಉತ್ಪಾದನಾಂಗಗಳ ನಡುವೆ ವಿತರಿಸಲಾಗುತ್ತದೆ. ಹಾಗಾಗಿ ಉದ್ಯಮ ಘಟಕವು ಪಾವತಿಸಿದ ಕೂಲಿ, ಬಡ್ಡಿ, ಲಾಭಗಳು ಮತ್ತು ಗೇಣಿಗಳನ್ನು ಉದ್ಯಮ ಘಟಕಗಳು ಸೇರಿಸಿದ ಮೌಲ್ಯಕ್ಕೆ ಸೇರಿಸಲಾಗಿದೆ. ಸೇರಿಸಲಾದ ಮೌಲ್ಯವು **ಹರಿವಿನ ಚಲಕ**ವಾಗಿದೆ. ನಾವು ಮೇಲೆ ನೀಡಲಾದ ಉದಾಹರಣೆಯನ್ನು ಕೋಷ್ಟಕ 2.1ರ ಮೂಲಕ ಪ್ರತಿನಿಧಿಸಬಹುದು.

**ಕೋಷ್ಟಕ 2.1: ಉತ್ಪಾದನೆ, ಮಧ್ಯಂತರ ಸರಕುಗಳು ಮತ್ತು ಮೌಲ್ಯ ವರ್ಧನೆ.**

| | ರೈತ | ಬೇಕರಿಯವನು |
|---|---|---|
| ಒಟ್ಟು ಉತ್ಪಾದನೆ | 100 | 200 |
| ಬಳಸಲ್ಪಟ್ಟ ಮಧ್ಯಂತರ ಸರಕುಗಳು | 0 | 50 |
| ಮೌಲ್ಯ ಸೇರಿಸಲಾಗಿದೆ | 100 | 200 – 50 =150 |

ಇಲ್ಲಿ ಎಲ್ಲಾ ಚಲಕಗಳನ್ನು ಹಣದ ರೂಪದಲ್ಲಿ ವ್ಯಕ್ತಪಡಿಸಲಾಗಿದೆ. ಇಲ್ಲಿ ಪಟ್ಟಿ ಮಾಡಿದ ವಿವಿಧ ಚಲಕಗಳನ್ನು ಮೌಲ್ಯಮಾಪನ ಮಾಡಲು ಸರಕುಗಳ ಮಾರುಕಟ್ಟೆಯ ಬೆಲೆಗಳ ಬಗ್ಗೆ ನಾವು ಯೋಚಿಸಬಹುದು. ಮತ್ತು ನಾವು ಉತ್ಪಾದನಾ ಸರಪಳಿಯಲ್ಲಿ ಹೆಚ್ಚಿನ ಆಟಗಾರರನ್ನು (ಉತ್ಪಾದನಾಕಾರರನ್ನು) ಪರಿಚಯಿಸಬಹುದು ಮತ್ತು ಅದನ್ನು ಇನ್ನಷ್ಟು ವಾಸ್ತವಿಕವಾಗಿ ಸಂಕೀರ್ಣಗೊಳಿಸಬಹುದು. ಉದಾಹರಣೆಗೆ, ರೈತರು ಗೋಧಿಯನ್ನು ಉತ್ಪಾದಿಸಲು ರಸಗೊಬ್ಬರಗಳು ಅಥವಾ ಕೀಟನಾಶಕಗಳನ್ನು ಬಳಸಿಕೊಳ್ಳಬಹುದು. ಗೋಧಿಯ ಉತ್ಪಾದನೆಯ ಮೌಲ್ಯದಿಂದ ಈ ಆದಾನಗಳ ಮೌಲ್ಯವನ್ನು ಕಡಿತಗೊಳಿಸಬೇಕು. ಅಥವಾ ಬೇಕರಿಯವನು ಬಹುಶ: ಬ್ರೆಡ್ ಅನ್ನು ಹೋಟೆಲ್ ಗಳಿಗೆ ಮಾರಬಹುದು, ಮಧ್ಯಂತರ ಸರಕುಗಳ ಮೌಲ್ಯ ಕಳೆಯುವುದರ ಮೂಲಕ ಇದರ ಮೌಲ್ಯವರ್ಧನೆಯನ್ನು ಲೆಕ್ಕಚಾರ ಮಾಡಬೇಕಾಗುತ್ತದೆ. (ಈ ಸಂದರ್ಭದಲ್ಲಿ ಬ್ರೆಡ್).

ನಾವು ಈಗಾಗಲೇ ಸವಕಳಿ ಪರಿಕಲ್ಪನೆಯನ್ನು ಪರಿಚಯಿಸಿದ್ದೇವೆ, ಇದನ್ನು ಸ್ಥಿರ ಬಂಡವಾಳದ ಬಳಕೆ ಎಂದು ಕರೆಯಲಾಗುತ್ತದೆ. ಉತ್ಪಾದನೆಯನ್ನು ಕೈಗೊಳ್ಳಲು ಬಳಸುವ ಬಂಡವಾಳವು ಸವಕಳಿಗೆ ಒಳಗಾಗುವುದರಿಂದ ಉತ್ಪಾದಕರು ಬಂಡವಾಳ ಮೌಲ್ಯವನ್ನು ಸ್ಥಿರವಾಗಿಟ್ಟುಕೊಳ್ಳಲು ಬದಲಿಕೆಯ ಹೂಡಿಕೆಯನ್ನು ಕೈಗೊಳ್ಳಬೇಕು. ಬದಲಿಕೆಯ ಹೂಡಿಕೆಯು ಹೂಡಿಕೆದಾರರ ಬಂಡವಾಳದ ಸವಕಳಿಯಾಗಿರುತ್ತದೆ. ನಾವು ಮೌಲ್ಯವರ್ಧನೆಗೆ ಸವಕಳಿಯನ್ನು ಸೇರಿಸಿದರೆ ಲೆಕ್ಕಾಚಾರದ ನಂತರ ಪಡೆದಿರುವ ಮೌಲ್ಯ ವರ್ಧನೆಯನ್ನು ಒಟ್ಟು ಮೌಲ್ಯವರ್ಧಿನೆ ಎಂದು ಕರೆಯಲಾಗುತ್ತದೆ. ಒಟ್ಟು ಮೌಲ್ಯ ವರ್ಧನೆಯಲ್ಲಿ, ಸವಕಳಿ ವೆಚ್ಚವನ್ನು ಕಳೆದರೆ **ನಿವ್ವಳ ಮೌಲ್ಯವರ್ಧನೆ**ಯನ್ನು ಪಡೆಯುತ್ತೇವೆ. ಒಟ್ಟು ಮೌಲ್ಯ ವರ್ಧನೆಯಂತಲ್ಲದೆ, ನಿವ್ವಳ ಮೌಲ್ಯ ವರ್ಧನೆಯು ಬಂಡವಾಳ ಅನುಭವಿಸುವ ಸವಕಳಿಯನ್ನು ಒಳಗೊಂಡಿರುವುದಿಲ್ಲ. ಉದಾಹರಣೆಗೆ, ಉದ್ಯಮ ಘಟಕವೊಂದು ವರ್ಷಕ್ಕೆ ₹ 100 ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತದೆ ಎಂದು ಕೊಳ್ಳೋಣ. ಅದು ಬಳಸುವ ಮಧ್ಯಂತರ ಸರಕುಗಳ ಮೌಲ್ಯವು ₹. 20 ಮತ್ತು ಬಂಡವಾಳ ಬಳಕೆಯ ಮೌಲ್ಯವು ₹ 10 ಆಗಿದ್ದಾಗ ಉದ್ಯಮದ ಒಟ್ಟು ವಾರ್ಷಿಕ ಮೌಲ್ಯ ವರ್ಧಿತವು ₹ *100* – ₹ 20 = ವರ್ಷಕ್ಕೆ ₹ 80 ಆಗಿರುತ್ತದೆ. ವಾರ್ಷಿಕ ನಿವ್ವಳ ಮೌಲ್ಯ ವರ್ಧಿತವು ₹ *100* – ₹ *20* – ₹ 10 = ವರ್ಷಕ್ಕೆ ₹ 70 ಆಗಿರುತ್ತದೆ.

ನಾವು ಮೌಲ್ಯವರ್ಧನೆಯನ್ನು ಲೆಕ್ಕಾಚಾರ ಮಾಡುವಾಗ ಉದ್ಯಮ ಘಟಕದ **ಉತ್ಪಾದನಾ ಮೌಲ್ಯವನ್ನು** ಗಣನೆಗೆ ತೆಗೆದುಕೊಳ್ಳುತ್ತೇವೆ, ಆದರೆ ಉದ್ಯಮ ಘಟಕಕ್ಕೆ ತನ್ನೆಲ್ಲಾ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗದಿರಬಹುದು. ಇಂತಹ ಒಂದು ಸಂದರ್ಭದಲ್ಲಿ ಅದು ವರ್ಷದ ಕೊನೆಯಲ್ಲಿ ಕೆಲವು ದಾಸ್ತಾನನ್ನು ಹೊಂದಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಉದ್ಯಮ ಘಟಕವು ಪ್ರಾರಂಭದಲ್ಲಿಯೇ ಕೆಲವು ಮಾರಾಟವಾಗದ ಸಂಗ್ರಹವನ್ನು ಹೊಂದಿರಬಹುದು. ಮುಂದಿನ ವರ್ಷದಲ್ಲಿ ಅದು ಕಡಿಮೆ ಉತ್ಪಾದನೆ ಮಾಡಿರುತ್ತದೆ. ಆದರೆ ಅದು ವರ್ಷದ ಪ್ರಾರಂಭದಲ್ಲಿದ್ದ ದಾಸ್ತಾನನ್ನು ಮಾರಾಟ ಮಾಡುವ ಮೂಲಕ ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಪೂರೈಸಿರುತ್ತದೆ. ಒಂದು ಉದ್ಯಮ ಘಟಕವು ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶರಹಿತವಾಗಿ ಹೊಂದಿರುವ ಈ ದಾಸ್ತಾನನ್ನು ನಾವು ಹೇಗೆ ಪರಿಗಣಿಸಬೇಕು? ಅಲ್ಲದೇ ಉದ್ಯಮ ಘಟಕವು ಇತರ ಉದ್ಯಮ ಘಟಕಗಳಿಂದ ಕಚ್ಚಾ ಸರಕುಗಳನ್ನು ಖರೀದಿಸುತ್ತದೆ ಎಂದು ನೆನಪಿನಲ್ಲಿಡಿ. ಬಳಸಲಾಗುವ ಕಚ್ಚಾ ಸರಕುಗಳ ಭಾಗವನ್ನು ಮಧ್ಯವರ್ತಿ ಸರಕುಗಳಾಗಿ ವರ್ಗೀಕರಿಸಲಾಗಿದೆ, ಬಳಸಲಾಗದ ಭಾಗಕ್ಕೆ ಏನಾಗುತ್ತದೆ?

ಅರ್ಥಶಾಸ್ತ್ರದಲ್ಲಿ, ಒಂದು ಉದ್ಯಮ ಘಟಕದ ಮಾರಾಟವಾಗದ ಸಿದ್ಧ ಪಡಿಸಿದ ಸರಕುಗಳನ್ನು ಅಥವಾ ಅರೆ–ಸಿದ್ಧಪಡಿಸಿದ ಸರಕುಗಳು ಅಥವಾ ಒಂದು ವರ್ಷದಿಂದ ಮುಂದಿನ ವರ್ಷಕ್ಕೆ ನಿರ್ವಹಣೆ



ಮಾಡುವ ಕಚ್ಚಾ ವಸ್ತುಗಳನ್ನು ತಪಶೀಲುಪಟ್ಟಿ (ಸರಕು ಸಾಮಗ್ರಿಗಳ ಉಳಿಕೆ – *Inventory*) ಎಂದು ಕರೆಯಲಾಗುತ್ತದೆ. ತಪಶೀಲುಪಟ್ಟಿಯು ದಾಸ್ತಾನಿನ ಚಲಕವಾಗಿದೆ. ಇದು ವರ್ಷದ ಆರಂಭದಲ್ಲಿ ಮೌಲ್ಯವನ್ನು ಹೊಂದಿರಬಹುದು; ಅದಕ್ಕಿನ್ನ ಹೆಚ್ಚಿನ ಮೌಲ್ಯವನ್ನು ಒಂದು ವರ್ಷದ ಕೊನೆಯಲ್ಲಿ ಹೊಂದಿರಬಹುದು. ಅಂತಹ ಸಂದರ್ಭದಲ್ಲಿ ತಪಶೀಲುಪಟ್ಟಿಯು ಹೆಚ್ಚಾಗುತ್ತವೆ (ಅಥವಾ ಶೇಖರಣೆಯಾಗುತ್ತವೆ). ವರ್ಷಾಂತ್ಯದಲ್ಲಿ ಹೋಲಿಸಿದರೆ ವರ್ಷದ ಆರಂಭಕ್ಕಿಂತ ತಪಶೀಲುಪಟ್ಟಿಯ ಮೌಲ್ಯವು ಕಡಿಮೆ ಇದ್ದರೆ ತಪಶೀಲುಪಟ್ಟಿಯು ಕಡಿಮೆಯಾಗುತ್ತದೆ (ಕುಸಿದಿದೆ ಎಂದರ್ಥವಾಗುತ್ತದೆ). ಆದ್ದರಿಂದ ನಾವು ಈ ತೀರ್ಮಾನಕ್ಕೆ ಬರಬಹುದು **ಒಂದು ವರ್ಷದ ಒಂದು ಉದ್ಯಮ ಘಟಕದ ತಪಶೀಲುಪಟ್ಟಿಯ ವ್ಯತ್ಯಾಸ ≡ ಆ ವರ್ಷದ ಉದ್ಯಮ ಘಟಕದ ಉತ್ಪಾದನೆ – ಉದ್ಯಮ ಘಟಕದ ಆ ವರ್ಷದ ಮಾರಾಟ.**

ಅನನ್ಯತೆ '≡' ಸಮಾನತೆಯನ್ನು ಸೂಚಿಸುತ್ತದೆ. ಸಮತೆ ('=') ಯಂತಲ್ಲದೇ ಅನನ್ಯತೆಯು ಎಡಭಾಗ ಅಥವಾ ಬಲಭಾಗ ಅಥವಾ ಬಲಭಾಗಗಲ್ಲಿ ಯಾವ ಚಲಕಗಳು ಇರುತ್ತವೆಂಬುದನ್ನು ಪರಿಗಣಿಸದೆ ಯಾವಾಗಲೂ ಸಿಂಧುವಾಗುತ್ತದೆ. ಉದಾಹರಣೆಗೆ, $2 + 2 \equiv 4$ ಎಂದು ಬರೆಯಬಹುದು, ಏಕೆಂದರೆ ಇದು ಯಾವಾಗಲೂ ಸತ್ಯವಾಗಿದೆ. ಆದರೆ ನಾವು $2 \times x = 4$ ಎಂದೇ ಬರೆಯಬೇಕು. ಏಕೆಂದರೆ ಇದು $x$ ನ ನಿರ್ದಿಷ್ಟ ಮೌಲ್ಯ ಎರಡು ಬಾರಿ 4 ಕ್ಕೆ ಸಮನಾಗಿರುತ್ತದೆ (ಅಂದರೆ $x = 2$ ಇದ್ದಾಗ ) ಮತ್ತು ಯಾವಾಗಲೂ ಅಲ್ಲ. ನಾವು $2 \times x \equiv 4$ ಎಂದು ಬರೆಯುವುದಿಲ್ಲ.

ಉದ್ಯಮ ಘಟಕದ ಉತ್ಪಾದನೆಯು ≡ ವರ್ಧಿತವಾದ ಮೌಲ್ಯ + ಉದ್ಯಮ ಘಟಕವು ಬಳಸಿದ ಮಧ್ಯವರ್ತಿ ಸರಕುಗಳು ಎಂಬುದನ್ನು ಗಮನಿಸಿ, ಇದರಿಂದ ನಾವು ಪಡೆಯುವುದೇನೆಂದರೆ ಉದ್ಯಮ ಘಟಕದ ಒಂದು ವರ್ಷದಲ್ಲಿನ ತಪಶೀಲುಪಟ್ಟಿಯ ಬದಲಾವಣೆ ≡ ವರ್ಧಿತವಾದ ಮೌಲ್ಯ + ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳು – ಒಂದು ವರ್ಷದಲ್ಲಿನ ಉದ್ಯಮ ಘಟಕದ ಮಾರಾಟ.

ಉದಾಹರಣೆಗೆ ಒಂದು ಉದ್ಯಮ ಘಟಕವು ವರ್ಷದ ಪ್ರಾರಂಭದಲ್ಲಿ ₹ 100 ಮೌಲ್ಯದ ಮಾರಾಟವಾಗದ ದಾಸ್ತಾನನ್ನು ಹೊಂದಿದೆ ಎಂದುಕೊಳ್ಳೋಣ. ಈ ವರ್ಷದಲ್ಲಿ ಉದ್ಯಮ ಘಟಕವು ₹ 1000 ಮೌಲ್ಯದ ಸರಕುಗಳನ್ನು ಉತ್ಪಾದಿಸುತ್ತದೆ ಮತ್ತು ಅದರಲ್ಲಿ ₹ 800 ಮೌಲ್ಯಗಳಷ್ಟು ಸರಕುಗಳನ್ನು ಮಾರಾಟ ಮಾಡುತ್ತದೆ. ಹೀಗಾಗಿ ಇಲ್ಲಿ ಉತ್ಪಾದನೆ ಮತ್ತು ಮಾರಾಟದ ನಡುವಿನ ವ್ಯತ್ಯಾಸವು ₹ 200 ಆಗುತ್ತದೆ. ಈ ₹ 200 ಮೌಲ್ಯವು ತಪಶೀಲುಪಟ್ಟಿಯ ಬದಲಾವಣೆಯಾಗಿದೆ. ಆದ್ದರಿಂದ ವರ್ಷದ ಕೊನೆಯಲ್ಲಿ ತಪಶೀಲುಪಟ್ಟಿಯು ₹ 100 + ₹ 200 = ₹ 300 ಆಗುತ್ತದೆ. ಇಲ್ಲಿ ತಪಶೀಲುಪಟ್ಟಿಯ ಬದಲಾವಣೆಯು ಒಂದು ಸಮಯದ ಅವಧಿಯಲ್ಲಿ ಆಗುತ್ತದೆ ಎಂಬುದನ್ನು ಗಮನಿಸಿ ಆದ್ದರಿಂದ ಇದು **ಹರಿವಿನ ಚಲಕ**ವಾಗಿದೆ.

ತಪಶೀಲುಪಟ್ಟಿಗಳನ್ನು ಬಂಡವಾಳವೆಂದು ಪರಿಗಣಿಸಲಾಗಿದೆ. ಒಂದು ಉದ್ದಿಮೆ ಘಟಕದ ದಾಸ್ತಾನಿಗೆ ಸೇರ್ಪಡೆಯಾಗುವ ಬಂಡವಾಳವನ್ನು **ಹೂಡಿಕೆ**ಯೆಂದು ಕರೆಯಲಾಗುತ್ತದೆ. ಆದ್ದರಿಂದ ಉದ್ದಿಮೆಯ ತಪಶೀಲುಪಟ್ಟಿಯಲ್ಲಿನ ಬದಲಾವಣೆಯನ್ನು ಹೂಡಿಕೆಯೆಂದು ಪರಿಗಣಿಸಲಾಗುತ್ತದೆ. ಹೂಡಿಕೆಯಲ್ಲಿ ಮೂರು ಪ್ರಮುಖ ವರ್ಗಗಳಿವೆ. ಮೊದಲನೆಯದು – ಒಂದು ವರ್ಷದಲ್ಲಿ ಒಂದು ಉದ್ಯಮ ಘಟಕದ ತಪಶೀಲುಪಟ್ಟಿಯ ಮೌಲ್ಯದಲ್ಲಿನ ಹೆಚ್ಚಳ. ಇದನ್ನು ಉದ್ಯಮ ಘಟಕ ಕೈಗೊಂಡಿರುವ ಹೂಡಿಕೆ ವೆಚ್ಚ ಎಂದು ಪರಿಗಣಿಸಲಾಗುತ್ತದೆ. ಎರಡನೇ ವರ್ಗದ ಹೂಡಿಕೆಯು ಸ್ಥಿರ ವ್ಯಾಪಾರ ಹೂಡಿಕೆಯಾಗಿದೆ, ಇದನ್ನು ಉದ್ಯಮ ಘಟಕವು ನಿಯೋಜಿಸಿಕೊಳ್ಳುವ ಯಂತ್ರೋಪಕರಣ, ಕಾರ್ಖಾನೆಯ ಕಟ್ಟಡಗಳು, ಮತ್ತು ಸಲಕರಣೆಗಳು ಎಂದು ವ್ಯಾಖ್ಯಾನಿಸಲಾಗುತ್ತದೆ. ಹೂಡಿಕೆಯ ಕೊನೆಯ ವರ್ಗ ವಸತಿ ಹೂಡಿಕೆಯಾಗಿದೆ, ಇದು ವಸತಿ ಸೌಕರ್ಯಗಳನ್ನು ಉಲ್ಲೇಖಿಸುತ್ತದೆ.

ತಪಶೀಲುಪಟ್ಟಿಯಲ್ಲಿನ ಬದಲಾವಣೆಗಳು ಯೋಜಿತ ಆಗಿರಬಹುದು ಅಥವಾ ಯೋಜಿತವಲ್ಲದಿರಬಹುದು. ಮಾರಾಟದಲ್ಲಿ ಅನಿರೀಕ್ಷಿತ ಇಳಿಕೆ ಸಂಭವಿಸಿದರೆ ಉದ್ಯಮ ಘಟಕದಲ್ಲಿ ಮಾರಾಟ ಮಾಡದೆ ಉಳಿದ ದಾಸ್ತಾನು ಇರುತ್ತದೆ. ಇದನ್ನು ಉದ್ಯಮ ಘಟಕವು ನಿರೀಕ್ಷಿಸಿರುವುದಿಲ್ಲ ಹಾಗಾಗಿ **ಯೋಜಿತವಲ್ಲದ ತಪಶೀಲುಪಟ್ಟಿಗಳ** ಶೇಖರಣೆಯಾಗುತ್ತದೆ. ಇದಕ್ಕೆ ವಿರುದ್ಧದ ಸನ್ನಿವೇಶದಲ್ಲಿ ಮಾರಾಟದಲ್ಲಿ ಅನಿರೀಕ್ಷಿತ ಏರಿಕೆ ಎದುರಾದ ಸಂದರ್ಭದಲ್ಲಿ **ಯೋಜಿತವಲ್ಲದ ತಪಶೀಲುಪಟ್ಟಿಯ ಕುಸಿತ** ಕಂಡುಬರುತ್ತದೆ.

ಈ ಕೆಳಗಿನ ಉದಾಹರಣೆಯ ಸಹಾಯದಿಂದ ಇದನ್ನು ವಿವರಿಸಬಹುದು. ಉದ್ಯಮಘಟಕವೊಂದು ಶರ್ಟ್‌ಗಳನ್ನು ತಯಾರಿಸುತ್ತದೆ ಎಂದು ಊಹಿಸಿಕೊಳ್ಳಿ. ಅದು ವರ್ಷಾರಂಭದಲ್ಲಿ 100 ಶರ್ಟ್‌ಗಳ ತಪಶೀಲುಪಟ್ಟಿಯನ್ನು ಹೊಂದಿರುತ್ತದೆ. ಮುಂಬರುವ ವರ್ಷದಲ್ಲಿ ಇದು 1,000 ಶರ್ಟ್‌ಗಳ ಮಾರಾಟವನ್ನು ನಿರೀಕ್ಷಿಸುತ್ತದೆ. ಆದ್ದರಿಂದ ಅದು 1,000 ಶರ್ಟ್‌ಗಳನ್ನು ಉತ್ಪಾದಿಸುತ್ತದೆ, ವರ್ಷಾಂತ್ಯದಲ್ಲಿ ತಪಶೀಲುಪಟ್ಟಿಯಲ್ಲಿ 100 ಶರ್ಟ್‌ಗಳನ್ನು ಉಳಿಸಿಟ್ಟುಕೊಳ್ಳುವ ನಿರೀಕ್ಷೆ ಇಟ್ಟುಕೊಂಡಿರುತ್ತದೆ. ಆದರೆ ಅದೇ ವರ್ಷದಲ್ಲಿ ಶರ್ಟ್‌ಗಳ ಮಾರಾಟವು ಅನಿರೀಕ್ಷಿತವಾಗಿ ಕಡಿಮೆಯಾಗುತ್ತದೆ. ಉದ್ಯಮ ಘಟಕವು 600 ಶರ್ಟ್‌ಗಳನ್ನು ಮಾತ್ರ ಮಾರಾಟ ಮಾಡಲು ಸಮರ್ಥವಾಗುತ್ತದೆ. ಇದರ ಅರ್ಥ ಉದ್ಯಮ ಘಟಕವು 400 ಮಾರಾಟವಾಗದ ಶರ್ಟ್‌ಗಳನ್ನು ಹೊಂದಿರುತ್ತದೆ. ವರ್ಷದಲ್ಲಿ ಉದ್ಯಮ ಘಟಕವು 400 + 100 = 500 ಅಂಗಿಗಳೊಂದಿಗೆ ಕೊನೆಗೊಳ್ಳುತ್ತದೆ. ತಪಶೀಲುಪಟ್ಟಿಯಲ್ಲಿ 400 ಶರ್ಟ್‌ಗಳ ಅನಿರೀಕ್ಷಿತ ಹೆಚ್ಚಳವು ಯೋಜಿತವಲ್ಲದ ತಪಶೀಲುಪಟ್ಟಿಯ ಶೇಖರಣೆಗೆ ಉದಾಹರಣೆಯಾಗಿದೆ. ಹಾಗಲ್ಲದೆ ಮಾರಾಟವು 1,000 ಶರ್ಟ್‌ಗಳಿಗಿಂತ ಹೆಚ್ಚಾದರೆ ನಾವು ತಪಶೀಲುಪಟ್ಟಿಯ ಯೋಜಿತವಲ್ಲದ ಕುಸಿತವನ್ನು ಹೊಂದುತ್ತೇವೆ. ಉದಾಹರಣೆಗೆ, ಒಂದುವೇಳೆ ಮಾರಾಟವು 1,050 ಆದರೆ, ಆಗ 1,000 ಶರ್ಟ್‌ಗಳನ್ನು ಮಾತ್ರವಲ್ಲದೆ ಉದ್ಯಮ ಘಟಕವು 50 ಶರ್ಟ್‌ಗಳನ್ನು ತಪಶೀಲುಪಟ್ಟಿಯಿಂದ ಮಾರಾಟ ಮಾಡಬೇಕಾಗುತ್ತದೆ. ತಪಶೀಲುಪಟ್ಟಿಯಲ್ಲಿನ 50 ಶರ್ಟ್‌ಗಳಷ್ಟು ಅನಿರೀಕ್ಷಿತ ಇಳಿಕೆ ತಪಶೀಲುಪಟ್ಟಿಯಲ್ಲಿನ ಕುಸಿತಕ್ಕೆ ಉದಾಹರಣೆಯಾಗಿದೆ.

**ತಪಶೀಲುಪಟ್ಟಿಯ ಯೋಜಿತ ಸಂಗ್ರಹಣೆ ಅಥವಾ ಕುಸಿತಕ್ಕೆ** ಯಾವುದು ಉದಾಹರಣೆಯಾಗಿರ–ಬಹುದು? ಉದ್ಯಮ ಘಟಕವು ವರ್ಷದಲ್ಲಿ 100 ಶರ್ಟ್‌ಗಳಿಂದ 200 ಶರ್ಟ್‌ಗಳಿಗೆ ತಪಶೀಲುಪಟ್ಟಿಯನ್ನು ಹೆಚ್ಚಿಸಲು ಬಯಸಿದೆ ಎಂದು ಭಾವಿಸೋಣ. ವರ್ಷದಲ್ಲಿ 1,000 ಶರ್ಟ್‌ಗಳ ಮಾರಾಟವನ್ನು (ಮೊದಲಿನಂತೆ) ನಿರೀಕ್ಷಿಸುತ್ತಾ ಉದ್ಯಮ ಘಟಕವು 1000 + 100 = 1,100 ಶರ್ಟ್‌ಗಳನ್ನು ಉತ್ಪಾದಿಸುತ್ತದೆ. ವಾಸ್ತವವಾಗಿ ಮಾರಾಟವು 1,000 ಶರ್ಟ್‌ಗಳಾಗಿದ್ದರೆ, ಆ ಉದ್ಯಮ ಘಟಕವು ತಪಶೀಲುಪಟ್ಟಿಯ ಹೆಚ್ಚಳವನ್ನು ಹೊಂದುತ್ತದೆ. ಉದ್ಯಮ ಘಟಕವು ಯೋಚಿಸಿದಂತೆ ತಪಶೀಲುಪಟ್ಟಿ 200 ಶರ್ಟ್‌ಗಳಾಗುತ್ತದೆ. ಈ ಏರಿಕೆಯು ತಪಶೀಲುಪಟ್ಟಿಯ ಯೋಜಿತ ಶೇಖರಣೆಯ ಒಂದು ಉದಾಹರಣೆಯಾಗಿದೆ. ಮತ್ತೊಂದೆಡೆ ಉದ್ಯಮವು 100 ರಿಂದ 25 ರವರೆಗೆ ತಪಶೀಲುಪಟ್ಟಿಯನ್ನು ಕಡಿಮೆ ಮಾಡಲು ಬಯಸಿದರೆ, ಆಗ ಅದು 1000 – 75 = 925 ಶರ್ಟ್‌ಗಳನ್ನು ಉತ್ಪಾದಿಸುತ್ತದೆ. ಏಕೆಂದರೆ ಇದು ಆರಂಭದ ತಪಶೀಲುಪಟ್ಟಿಯಲ್ಲಿನ 100 ಶರ್ಟ್‌ಗಳಲ್ಲಿ 75 ಅನ್ನು ಮಾರಾಟ ಮಾಡಲು ಯೋಜಿಸಿದೆ. (ಇದರಿಂದ ಈ ಉದ್ಯಮ ಘಟಕವು ವರ್ಷಾಂತ್ಯದ ಕೊನೆಯಲ್ಲಿ 100 – 75 = 25 ಶರ್ಟಗಳ ತಪಶೀಲುಪಟ್ಟಿಯನ್ನು ಹೊಂದಲು ಬಯಸುತ್ತದೆ.) ಒಂದು ವೇಳೆ ಉದ್ಯಮ ಘಟಕವು ನಿರೀಕ್ಷಿಸಿದಂತೆ ಮಾರಾಟವು ವಾಸ್ತವವಾಗಿ 1000 ಶರ್ಟ್‌ಗಳಾದರೆ ಉದ್ಯಮ ಘಟಕವು ಯೋಜಿತ ತಪಶೀಲುಪಟ್ಟಿಯಲ್ಲಿ 25 ಶರ್ಟ್‌ಗಳನ್ನು ಹೊಂದುತ್ತದೆ.

ಮುಂದಿನ ಅಧ್ಯಾಯಗಳಲ್ಲಿ ಯೋಜಿತವಲ್ಲದ ಮತ್ತು ಯೋಜಿತ ತಪಶೀಲುಪಟ್ಟಿಯಲ್ಲಿನ ಬದಲಾವಣೆಗಳ ನಡುವಿನ ವ್ಯತ್ಯಾಸದ ಬಗ್ಗೆ ಹೆಚ್ಚಿನ ಅರಿವನ್ನು ಪಡೆಯೋಣ.

ತಪಶೀಲುಪಟ್ಟಿಯ ಬದಲಾವಣೆಯ ಗ್ರಹಿಕೆಯಿಂದ ಈ ಕೆಳಗಿನ ಸಮೀಕರಣವನ್ನು ಬರೆಯಬಹುದು. ಉದ್ಯಮ ಘಟಕದ ಒಟ್ಟು ಮೌಲ್ಯವು $i(GVAi)$ ≡ ಉದ್ಯಮ ಘಟಕದಲ್ಲಿ ಉತ್ಪಾದನೆಯಾಗುವ ಉತ್ಪನ್ನದ ಸಮಗ್ರ ಮೌಲ್ಯ $i\ (Qi)$ – ಉದ್ಯಮ ಘಟಕವು ಬಳಸಿದ ಮಧ್ಯಂತರ ಸರಕುಗಳ ಮೌಲ್ಯ $(Zi)$.

$GVAi \equiv$ ಉದ್ಯಮ ಘಟಕದ ಮಾರಾಟದ ಮೌಲ್ಯ $(Vi)$ + ದಾಸ್ತಾನುಗಳಲ್ಲಿನ ಬದಲಾವಣೆಯ ಮೌಲ್ಯ $(Ai)$ – ಉದ್ಯಮ ಘಟಕವು ಬಳಸುವ ಮಧ್ಯಂತರ ಸರಕುಗಳ ಮೌಲ್ಯ $(Zi)$ (2.1)

ಕೆಳಗಿನವುಗಳ ಬಳಕೆಯಿಂದ ಸಮೀಕರಣ (2.1) ನ್ನು ಪಡೆಯಲಾಗಿದೆ.

ಒಂದು ವರ್ಷದಲ್ಲಿನ ಉದ್ಯಮ ಘಟಕದ ತಪಶೀಲುಪಟ್ಟಿಯಲ್ಲಿನ ಬದಲಾವಣೆ ≡ ಆ ವರ್ಷದ ಉದ್ಯಮ ಘಟಕದ ಉತ್ಪಾದನೆ – ಉದ್ಯಮ ಘಟಕದ ಆ ವರ್ಷದ ಮಾರಾಟ:

ಉದ್ಯಮ ಘಟಕದ ಮಾರಾಟವು ಕೇವಲ ದೇಶೀಯ ಖರೀದಿದಾರರಿಗಷ್ಟೇ ಅಲ್ಲದೆ ವಿದೇಶೀಯ ಖರೀದಿದಾರರನ್ನೂ (ಎರಡನೆಯದನ್ನು ರಫ್ತು ಎಂದು ಕರೆಯಲಾಗುತ್ತದೆ) ಒಳಗೊಂಡಿರುತ್ತದೆಂಬುದನ್ನು ಗಮನಿಸಬೇಕಾಗುತ್ತದೆ. ಮೇಲೆ ತಿಳಿಸಿದ ಚಲಕಗಳೆಲ್ಲವೂ, ಹರಿವಿನ ಚಲಕಗಳೆಂಬುದನ್ನೂ ಸಹ ಗಮನಿಸಬೇಕು. ಸಾಮಾನ್ಯವಾಗಿ ಇದನ್ನು ವಾರ್ಷಿಕ ಆಧಾರದ ಮೇಲೆ ಮಾಪನ ಮಾಡಲಾಗುತ್ತದೆ. ಆದ್ದರಿಂದ ಅವು ವರ್ಷವಾರು ಹರಿವುಗಳ ಮೌಲ್ಯಗಳನ್ನು ಅಳೆಯುತ್ತವೆ.

ಉದ್ಯಮ ಘಟಕಕ್ಕೆ ಸೇರಿಸಲಾದ ನಿವ್ವಳ ಮೌಲ್ಯ $i \equiv GVAi$ - ಉದ್ಯಮ ಘಟಕದ ಸವಕಳಿ $i(Di)$

ಒಂದು ವರ್ಷದಲ್ಲಿ ಆರ್ಥಿಕತೆಯ ಎಲ್ಲಾ ಉದ್ಯಮ ಘಟಕಗಳ ಒಟ್ಟು ಮೌಲ್ಯ ವರ್ಧನೆಯನ್ನು ಸೇರಿಸಿದರೆ ಆ ಆರ್ಥಿಕತೆಯು ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು ಮತ್ತು ಸೇವೆಗಳ ಸಮಗ್ರ ಮೊತ್ತದ ಮೌಲ್ಯದ ಮಾಪನವನ್ನು ಪಡೆಯುತ್ತೇವೆ (ನಾವು ಗೋಧಿ – ಬ್ರೆಡ್ ಉದಾಹರಣೆಯಲ್ಲಿ ಮಾಡಿದಂತೆ).

ಇಂತಹ ಅಂದಾಜುಗಳನ್ನು **ಒಟ್ಟು ದೇಶೀಯ ಉತ್ಪನ್ನ** ಎಂದು ಕರೆಯುತ್ತೇವೆ ($GDP$). ಆದ್ದರಿಂದ

$GDP \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಒಟ್ಟು ಮೌಲ್ಯದ ಮೊತ್ತವಾಗಿದೆ.

ಆರ್ಥಿಕತೆಯಲ್ಲಿ, ಪ್ರತಿಯೊಂದಕ್ಕೂ 1 ರಿಂದ $N$ ಸಂಖ್ಯೆಯವರೆಗೆ ನೀಡಿದ ಸಂಖ್ಯೆಯಷ್ಟು ಉದ್ಯಮ ಘಟಕಗಳಿದ್ದರೆ ಆಗ $GDP \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸೇರಿಸಿದ ಒಟ್ಟು ಮೌಲ್ಯದ ಒಟ್ಟು ಮೊತ್ತವಾಗಿದೆ.

$$\equiv GVA_1 + GVA_2 + . . . + GVA_N$$

ಆದ್ದರಿಂದ

$$GDP \equiv \sum_{i=1}^{N} GVA_i \quad (2.2)$$

$\Sigma$ ಚಿಹ್ನೆಯು ಒಂದು ಸಂಕೇತನವಾಗಿದ್ದು – ಇದನ್ನು ಸಂಕಲವನ್ನು ಸೂಚಿಸಲು ಬಳಸಲಾಗುತ್ತದೆ. 3 ವಿದ್ಯಾರ್ಥಿಗಳು ಕ್ರಮವಾಗಿ ರೂಪಾಯಿ 200, 250 ಮತ್ತು 350 ಜೇಬುಗಾಸನ್ನು ಹೊಂದಿದ್ದಾರೆಂದುಕೊಳ್ಳೋಣ. $i^{th}$ ವಿದ್ಯಾರ್ಥಿಯ ಜೇಬುಗಾಸು $X_i$ ಎಂದು ಹೇಳಬಹುದಾದರೆ, ಆಗ $X_1 = 200, X_2 = 250, X_3 = 350$ ಎಂದಾಗುತ್ತದೆ. ಒಟ್ಟು ಜೇಬುಗಾಸನ್ನು $X_1 + X_2 + X_3$ ನಿಂದ ನೀಡಬಹುದು. ಮೇಲೆ ನೀಡಿದ ಸಂಕಲನ ಸಂಕೇತನವು ಸಂಕ್ಷಿಪ್ತ ರೂಪದಲ್ಲಿ ಬರೆಯಲು ಉಪಯೋಗವಾಗುತ್ತದೆ : $X_1 + X_2 + X_3$ ನ್ನು $\sum_{i=1}^{3} X_i$ ಎಂದು ಬರೆಯಬಹುದು. ಇದರರ್ಥ $X$ ನ ಮೂರು ಮೌಲ್ಯಗಳು 1 ರಿಂದ 3 ವ್ಯಕ್ತಿಗಳಿಗೆ ಅನುಗುಣವಾಗಿರುತ್ತವೆಂದು ಮತ್ತು ನಾವು 1 ರಿಂದ 3 ವ್ಯಕ್ತಿಗಳಿಗೆ $X$ ನ ಮೌಲ್ಯಗಳ ಒಟ್ಟು ಮೊತ್ತವೆಂದು ಉಲ್ಲೇಖಿಸುತ್ತೇವೆ. ಸಮಗ್ರತೆಗಳನ್ನು ಅಧ್ಯಯನ ಮಾಡುವುದರಿಂದ ಈ ಸಂಕೇತನವು ನಿರ್ದಿಷ್ಟವಾಗಿ ಸಮಗ್ರ ಅರ್ಥಶಾಸ್ತ್ರದಲ್ಲಿ ಉಪಯುಕ್ತವಾಗಿದೆ. ಉದಾಹರಣೆಗೆ $C_1, C_2$ .......... $C_{1000}$ ಅನುಭೋಗವಿರುವ 1000 ಅನುಭೋಗಿಗಳು ಆರ್ಥಿಕತೆಯಲ್ಲಿದ್ದಾರೆ ಎಂದುಕೊಳ್ಳೋಣ. ಈ ಆರ್ಥಿಕತೆಯ ಸಮಗ್ರ ಅನುಭೋಗವನ್ನು ಲೆಕ್ಕ ಹಾಕಲು ಬಯಸಿದರೆ, ನಾವು ಈ ಎಲ್ಲಾ ಮೌಲ್ಯಗಳನ್ನು ಸಂಕಲಿಸಬೇಕು. ಇದರರ್ಥ ಈ ಆರ್ಥಿಕತೆಗೆ ಸಮಗ್ರ ಅನುಭೋಗವನ್ನು ಹೀಗೆ ನೀಡಬಹುದು. $C = c_1 + c_2 .......... + c_{1000}$ ಆದಾಗ್ಯೂ ಸಂಕಲನ ಸಂಕೇತನವು ಅತ್ಯಂತ ಸಂಕ್ಷಿಪ್ತ ಸ್ವರೂಪದಲ್ಲಿ ಬರೆಯಲು ನಮಗೆ ಅನುವು ಮಾಡಿಕೊಡುತ್ತದೆ. ನಾವು 1 ರಿಂದ 1000 ದ ವರೆಗಿನ ವ್ಯಕ್ತಿಗಳ ಅನುಭೋಗದ ಮೌಲ್ಯಗಳನ್ನು ಸಂಕಲಿಸುತ್ತಿರುವುದರಿಂದ ಇಲ್ಲಿ $i$ ವ್ಯಕ್ತಿಯ ಅನುಭೋಗದ ಮೌಲ್ಯವು $C_i$ ಆಗಿದ್ದು ಸಮಗ್ರ ಅನುಭೋಗವು $C = \sum_{i=1}^{1000} c_i$ ಆಗುತ್ತದೆ.

ಸಾಮಾನ್ಯವಾಗಿ ನಾವು $X_i$ ಪ್ರಮಾಣದ ಒಟ್ಟು ಮೊತ್ತವನ್ನು ವ್ಯಕ್ತಿ 1ರಿಂದ $n$ ವರೆಗೆ ತೆಗೆದುಕೊಂಡಾಗ $\sum_{i=1}^{n} x_i$ ಎಂದು ಸಂಕೇತಿಸುತ್ತೇವೆ.

### 2.2.2. ವೆಚ್ಚದ ವಿಧಾನ *Expenditure Method*

*GDP*ಯನ್ನು ಲೆಕ್ಕಹಾಕಲು ಒಂದು ಪರ್ಯಾಯ ಮಾರ್ಗವೆಂದರೆ ಉತ್ಪನ್ನಗಳ ಬೇಡಿಕೆಯ ಪರಿಗಣನೆ. ಈ ವಿಧಾನವನ್ನು ವೆಚ್ಚದ ವಿಧಾನವೆಂದು ಕರೆಯಲಾಗುತ್ತದೆ. ಈ ಮೊದಲು ವಿವರಿಸಿದ ರೈತ, ಬೇಕರಿಯವನ ಉದಾಹರಣೆಯಲ್ಲಿ ವೆಚ್ಚದ ವಿಧಾನದಿಂದ ಆರ್ಥಿಕತೆಯಲ್ಲಿ ಉತ್ಪನ್ನದ ಸಮಗ್ರ ಮೌಲ್ಯವನ್ನು ಈ ಕೆಳಗಿನ ರೀತಿಯಲ್ಲಿ ಲೆಕ್ಕಚಾರ ಮಾಡಲಾಗುತ್ತದೆ. ಈ ವಿಧಾನದಲ್ಲಿ ನಾವು ಪ್ರತಿ ಉದ್ಯಮ ಘಟಕವು ಕೈಗೊಳ್ಳುವ ಅಂತಿಮ ವೆಚ್ಚವನ್ನು ಸೇರಿಸುತ್ತೇವೆ. ಅಂತಿಮ ವೆಚ್ಚವೆಂದರೆ, ಮಧ್ಯಂತರ ಉದ್ದೇಶಗಳಿಗಾಗಿ ಮಾಡದಿರುವ ವೆಚ್ಚದ ಭಾಗವಾಗಿದೆ. ಬೇಕರಿಯವರು ರೈತರಿಂದ ಖರೀದಿಸುವ ₹ 50 ಮೌಲ್ಯದ ಗೋಧಿಯನ್ನು ಮಧ್ಯವರ್ತಿ ಸರಕುಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಅಂತಿಮ ವಿಭಾಗದ ವೆಚ್ಚದ ಅಡಿಯಲ್ಲಿ ಇದು ಬರುವುದಿಲ್ಲ. ಆದ್ದರಿಂದ ಆರ್ಥಿಕತೆಯ ಉತ್ಪನ್ನದ ಮೌಲ್ಯವು ₹ 200 ಆಗಿದೆ. (ಬೇಕರಿಯವನು ಸ್ವೀಕರಿಸಿದ ಅಂತಿಮ ವೆಚ್ಚ) + ₹ 50 (ರೈತರು ಪಡೆದ ಅಂತಿಮ ವೆಚ್ಚ) = ವರ್ಷಕ್ಕೆ ₹ 250.

ಉದ್ಯಮ ಘಟಕ *i*, ಈ ಕೆಳಗಿನ ಖಾತೆಗಳಲ್ಲಿ ಅಂತಿಮ ವೆಚ್ಚವನ್ನು ಮಾಡಬಹುದು. (*a*) ಉದ್ಯಮ ಘಟಕವು ಉತ್ಪಾದಿಸಿದ ಸರಕು ಸೇವೆಗಳ ಮೇಲೆ ಮಾಡಿದ ಅಂತಿಮ ಅನುಭೋಗದ ವೆಚ್ಚ ಇದನ್ನು, ನಾವು *Ci* ಯಿಂದ ಸೂಚಿಸುತ್ತೇವೆ. ಅನುಭೋಗದ ವೆಚ್ಚವನ್ನು ಕೈಗೊಳ್ಳುವವರು ಹೆಚ್ಚಾಗಿ ಕುಟುಂಬಗಳೇ ಆಗಿವೆಯೆಂದು ನಾವು ಗಮನಿಸಬಹುದು. ಕೆಲವೊಮ್ಮೆ ಉದ್ಯಮಘಟಕಗಳು, ತಮ್ಮ ಅತಿಥಿಗಳು ಅಥವಾ ನೌಕರರನ್ನು ಸತ್ಕರಿಸಲು ಉಪಭೋಗ್ಯಗಳನ್ನು ಖರೀದಿಸುವಂತಹ ಸನ್ನಿವೇಶವು ಇದಕ್ಕೆ ಅಪವಾದವಾಗಬಹುದು. (ಬಿ) ಉದ್ಯಮ ಘಟಕ *i* ಯು ಉತ್ಪಾದಿಸಿದ ಬಂಡವಾಳ ಸರಕುಗಳ ಮೇಲೆ ಉಂಟಾಗುವ ಇತರ ಉದ್ಯಮಘಟಕಗಳ ಅಂತಿಮ ಹೂಡಿಕೆಯ ವೆಚ್ಚ *Ii* ಆಗಿದೆ. *GDP* ಯ ಲೆಕ್ಕಚಾರದಲ್ಲಿ ಮಧ್ಯಂತರ ಸರಕುಗಳ ಮೇಲಿನ ವೆಚ್ಚವನ್ನು ಸೇರಿಸುವುದಿಲ್ಲ ಎಂಬುದನ್ನು ಗಮನಿಸಿ. ಆದರೆ ಹೂಡಿಕೆಯ ಮೇಲಿನ ವೆಚ್ಚವನ್ನು ಸೇರಿಸಲಾಗಿದೆ. ಕಾರಣವೇನೆಂದರೆ ಹೂಡಿಕೆಯ ಸರಕುಗಳು ಉದ್ಯಮ ಘಟಕದೊಂದಿಗೆ ಉಳಿಯುತ್ತವೆ, ಆದರೆ ಮಧ್ಯಂತರ ಸರಕುಗಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ (*c*) ಉಪಯೋಗಿಸಲಾಗುತ್ತದೆ. ಉದ್ಯಮ ಘಟಕವು ಉತ್ಪಾದಿಸಿದ ಅಂತಿಮ ಸರಕು ಮತ್ತು ಸೇವೆಗಳ ಮೇಲೆ ಸರ್ಕಾರವು ಮಾಡುವ ವೆಚ್ಚ *i*, ನಾವು ಅದನ್ನು *Gi* ನಿಂದ ಸೂಚಿಸೋಣ. ಸರ್ಕಾರದ ಅಂತಿಮ ವೆಚ್ಚವು ಅನುಭೋಗದ ಮತ್ತು ಹೂಡಿಕೆಯ ವೆಚ್ಚಗಳೆರಡನ್ನೂ (*d*) ಒಳಗೊಂಡಿದೆ ಎಂಬುದನ್ನು ಗಮನಿಸಿ ವಿದೇಶದಲ್ಲಿ ತನ್ನ ಸರಕು ಮತ್ತು ಸೇವೆಗಳನ್ನು ಮಾರಾಟ ಮಾಡುವ ಮೂಲಕ ಉದ್ಯಮ ಘಟಕವು ರಫ್ತು ಆದಾಯವನ್ನು ಗಳಿಸುತ್ತದೆ. ಇದನ್ನು $X_i$ ನಿಂದ ಸೂಚಿಸಲಾಗುತ್ತದೆ.

ಆದ್ದರಿಂದ ಉದ್ಯಮ ಘಟಕ *i* ಗಳಿಸುವ ಆದಾಯದ ಒಟ್ಟು ಮೊತ್ತವನ್ನು

$RV_i \equiv i$ ಉದ್ಯಮ ಘಟಕ ಪಡೆದ ಅಂತಿಮ ಅನುಭೋಗ ವೆಚ್ಚ, ಹೂಡಿಕೆ ವೆಚ್ಚ, ಸರ್ಕಾರದ ವೆಚ್ಚ ಮತ್ತು ರಫ್ತು ವೆಚ್ಚಗಳ ಒಟ್ಟು ಮೊತ್ತ .

$$RV_i \equiv C_i + I_i + G_i + X_i$$

*N* ಉದ್ಯಮಗಳಿದ್ದರೆ, ಅವುಗಳನ್ನು ಒಟ್ಟು ಗೂಡಿಸಿದರೆ

$\sum_{i=1}^{N} RV_i \equiv$ ಆರ್ಥಿಕತೆಯಲ್ಲಿನ ಎಲ್ಲ ಉದ್ಯಮ ಘಟಕಗಳು ಪಡೆದ ಅಂತಿಮ, ಅನುಭೋಗ ವೆಚ್ಚ, ಹೂಡಿಕೆ ವೆಚ್ಚ ಸರ್ಕಾರದ ವೆಚ್ಚ ಮತ್ತು ರಫ್ತು ವೆಚ್ಚಗಳ ಒಟ್ಟು ಮೊತ್ತ

$$\equiv \sum_{i=1}^{N} C_i + \sum_{i=1}^{N} I_i + \sum_{i=1}^{N} G_i + \sum_{i=1}^{N} X_i \qquad (2.3)$$

C ಯು ಇಡೀ ಆರ್ಥಿಕತೆಯ ಅಂತಿಮ ಅನುಭೋಗದ ಒಟ್ಟು ವೆಚ್ಚವಾಗಿರಲಿ. *C* ನ ಒಂದು ಭಾಗವನ್ನು ಅನುಭೋಗಿ ಸರಕುಗಳ ಆಮದುಗಳ ಮೇಲೆ ವೆಚ್ಚ ಮಾಡಲಾಗಿದೆ ಎಂಬುದನ್ನು ಗಮನಿಸಿ. $C = \sum_{i=1}^{N} C_i + C_m$. ಅನುಭೋಗಿ ಸರಕುಗಳನ್ನು ಆಮದು ಮಾಡಿಕೊಳ್ಳುವ ವೆಚ್ಚವನ್ನು $C_m$ ಸೂಚಿಸುತ್ತದೆ. ಆದ್ದರಿಂದ $C - C_m$ ದೇಶೀಯ ಉದ್ಯಮ ಘಟಕಗಳ ಮೇಲೆ ಮಾಡಿದ ಸಮಗ್ರ ಅಂತಿಮ ಅನುಭೋಗ ವೆಚ್ಚದ ಭಾಗವನ್ನು ಸೂಚಿಸುತ್ತದೆ. ಅಂತೆಯೇ $I - I_m$ ದೇಶೀಯ ಉದ್ಯಮ ಘಟಕದಲ್ಲಿ ವೆಚ್ಚ ಮಾಡಲಾಗಿರುವ ಅಂತಿಮ ಹೂಡಿಕೆಯ ಸಮಗ್ರ ವೆಚ್ಚದ ಭಾಗವನ್ನು ಪ್ರತಿನಿಧಿಸಲಿ, *'I'* ಆರ್ಥಿಕತೆಯ ಸಮಗ್ರ ಅಂತಿಮ

ಹೂಡಿಕೆಯ ವೆಚ್ಚದ ಮೌಲ್ಯ ಮತ್ತು ಇದರಲ್ಲಿ $I_m$ ವಿದೇಶಿ ಬಂಡವಾಳ ಹೂಡಿಕೆ ಸರಕುಗಳಿಗೆ ಮಾಡಿದ ವೆಚ್ಚವಾಗಿದೆ. ಅಂತೆಯೇ ದೇಶೀಯ ಉದ್ಯಮ ಘಟಕಗಳಿಗೆ ವೆಚ್ಚ ಮಾಡಲಾದ ಸಮಗ್ರ ಅಂತಿಮ ಸರಕಾರೀ ವೆಚ್ಚದ ಭಾಗವನ್ನು $G - G_m$ ಪ್ರತಿನಿಧಿಸುತ್ತದೆ. ಇಲ್ಲಿ $G$ ಎಂಬುದು ಆರ್ಥಿಕತೆಯ ಸರ್ಕಾರದ ಸಮಗ್ರ ವೆಚ್ಚವಾಗಿದೆ ಮತ್ತು $Gm$ ಆಮದುಗಳ ಮೇಲೆ ಮಾಡುವ $G$ ನ ಭಾಗವಾಗಿದೆ.

ಆದ್ದರಿಂದ $\sum_{i=1}^{N} C_i \equiv$ ಆರ್ಥಿಕತೆಯಲ್ಲಿನ ಎಲ್ಲಾ ಉದ್ಯಮ ಘಟಕಗಳು ಸ್ವೀಕರಿಸಿದ ಅಂತಿಮ ಅನುಭೋಗ ವೆಚ್ಚದ ಒಟ್ಟು ಮೊತ್ತ $\equiv C - C_m$; $\sum_{i=1}^{N} I_i \equiv$ ಆರ್ಥಿಕತೆಯಲ್ಲಿ ಎಲ್ಲಾ ಉದ್ಯಮ ಘಟಕಗಳಿಂದ ಪಡೆದ ಅಂತಿಮ ಬಂಡವಾಳ ವೆಚ್ಚಗಳ ಒಟ್ಟು ಮೊತ್ತ $\equiv I - I_m$; $\sum G_i$ ಆರ್ಥಿಕತೆಯ ಎಲ್ಲ ಉದ್ಯಮ ಘಟಕಗಳಿಂದ ಸ್ವೀಕರಿಸಿದ ಸರಕಾರದ ಅಂತಿಮ ವೆಚ್ಚದ ಒಟ್ಟು ಮೊತ್ತ $\equiv G - G_m$.

ಸಮೀಕರಣ 2.3ಗೆ ಆದೇಶಿಸಿದಾಗ ನಾವು

$$\sum_{i=1}^{N} RV_i \equiv C - C_m + I - I_m + G - G_m + \Sigma_{i=1}^{N} X_i$$
$$\equiv C + I + G + \sum_{i=1}^{N} X_i - (C_m + I_m + G_m)$$
$$\equiv C + I + G + X - M$$ ಪಡೆಯುತ್ತೇವೆ.

ಇಲ್ಲಿ $X$ $\sum_{i=1}^{N} X_i$ ಎಂಬುದು, ಒಂದು ಆರ್ಥಿಕತೆಯ ರಫ್ತುಗಳ ಮೇಲೆ ವಿದೇಶಿಯರ ಸಮಗ್ರ ವೆಚ್ಚವನ್ನು ಸೂಚಿಸುತ್ತದೆ. $M \equiv C_m + I_m + G_m$ ಎಂಬುದು ಆರ್ಥಿಕತೆಯಿಂದ ಉಂಟಾಗುವ ಸಮಗ್ರ ಆಮದು ವೆಚ್ಚವಾಗಿದೆ.

$GDP \equiv$ ಆರ್ಥಿಕತೆಯಲ್ಲಿ ಉದ್ಯಮ ಘಟಕಗಳಿಂದ ಪಡೆದ ಎಲ್ಲಾ ವೆಚ್ಚಗಳ ಒಟ್ಟು ಮೊತ್ತವಾಗಿದೆ ಎಂಬುದು ನಮಗೆ ತಿಳಿದಿದೆ.

ಬೇರೆ ಪದಗಳಲ್ಲಿ ಹೇಳುವುದಾದರೆ

$$GDP \equiv \sum_{i=1}^{N} RV_i \equiv C + I + G + X - M \qquad (2.4)$$

$GDP$ ಯನ್ನು ವೆಚ್ಚದ ವಿಧಾನದ ಪ್ರಕಾರ ಸಮೀಕರಣ (2.4) ವ್ಯಕ್ತ ಪಡಿಸುತ್ತದೆ. ಬಲಗಡೆಯಿರುವ ಐದು ಚಲಕಗಳಲ್ಲಿ, ಬಂಡವಾಳ ಹೂಡಿಕೆಯ ವೆಚ್ಚ, I ಹೆಚ್ಚು ಅಸ್ಥಿರವಾಗಿದೆ ಎಂಬುದನ್ನು ಗಮನಿಸಬಹುದು.

### 2.2.3 ವರಮಾನ ವಿಧಾನ *Income Method*

ನಾವು ಆರಂಭದಲ್ಲಿ ತಿಳಿಸಿದಂತೆ, ಆರ್ಥಿಕತೆಯಲ್ಲಿ ಸಮಗ್ರವಾಗಿ ಪಡೆದುಕೊಳ್ಳುವ ಎಲ್ಲಾ ಅಂತಿಮ ವೆಚ್ಚಗಳ ಮೊತ್ತವು ಎಲ್ಲಾ ಉತ್ಪಾದನಾಂಗಗಳಿಂದ ಪಡೆದ ವರಮಾನಗಳಿಗೆ ಸಮನಾಗಿರಬೇಕು (ಅಂತಿಮ ವೆಚ್ಚವೆಂದರೆ ಅಂತಿಮ ಸರಕುಗಳ ಮೇಲಿನ ವೆಚ್ಚ. ಇದು ಮಧ್ಯವರ್ತಿ ಸರಕುಗಳ ಮೇಲಿನ ವೆಚ್ಚಗಳನ್ನು ಒಳಗೊಂಡಿರುವುದಿಲ್ಲ). ಎಲ್ಲಾ ಉದ್ಯಮ ಘಟಕಗಳಿಂದ ಗಳಿಸಿದ ವರಮಾನವನ್ನು ಉತ್ಪಾದನಾಂಗಗಳ ನಡುವೆ ವೇತನಗಳ, ಕೂಲಿಗಳ, ಲಾಭಗಳ, ಬಡ್ಡಿಗಳಿಕೆ ಮತ್ತು ಗೇಣಿಗಳ ರೂಪದಲ್ಲಿ ವಿತರಿಸಬೇಕೆಂಬ ಸರಳ ಕಲ್ಪನೆಯನ್ನು ಅನುಸರಿಸುತ್ತದೆ. ಆರ್ಥಿಕತೆಯಲ್ಲಿ $M$ ಸಂಖ್ಯೆಯಷ್ಟು ಕುಟುಂಬಗಳಿವೆ. ಒಂದು ನಿರ್ದಿಷ್ಟ ವರ್ಷದಲ್ಲಿ $i$ ಕುಟಂಬವು ಪಡೆದ ಕೂಲಿ ಮತ್ತು ವೇತನವು $W_i$ ನಷ್ಟು ಆಗಿದೆ. ಅಂತೆಯೇ ಒಟ್ಟು ಲಾಭಗಳು, ಬಡ್ಡಿಯ ಪಾವತಿಗಳು ಮತ್ತು ಬಾಡಿಗೆಗಳಾಗಿ $P_i$, $In_i$, $R_i$ ಗಳಾಗಿರಲಿ.

ಆದ್ದರಿಂದ GDP ಯನ್ನು ಹೀಗೆ ನೀಡಲಾಗಿದೆ

$$GDP \equiv \sum_{i=1}^{M} W_i + \sum_{i=1}^{M} P_i + \sum_{i=1}^{M} =In_i + \sum_{i=1}^{M} =R_i \equiv W + P + In + R \qquad (2.5)$$

ಇಲ್ಲಿ, $\sum_{i=1}^{M} W_i \equiv W$, $\sum_{i=1}^{M} P_i \equiv P$, $\sum_{i=1}^{M} In_i \equiv In$, $\sum_{i=1}^{M} R_i \equiv R$

ಸಮೀಕರಣಗಳಾದ (2.2). (2.4) ಮತ್ತು (2.5) ಒಟ್ಟಾಗಿ ತೆಗೆದುಕೊಂಡಾಗ ನಾವು ಪಡೆಯುತ್ತೇವೆ

$$GDP \equiv \sum_{i=1}^{N} GVA_i \equiv C + I + G + X - M \equiv W + P + In + R \qquad (2.6)$$

ಉದ್ಯಮ ಘಟಕಗಳ ಯೋಜಿತ ಮತ್ತು ಯೋಜನಾ ರಹಿತ ಹೂಡಿಕೆಯ ಒಟ್ಟು ಮೊತ್ತವನ್ನು $I$ ಅನನ್ಯತೆಯಲ್ಲಿ (2.6) ಪ್ರತಿನಿಧಿಸುತ್ತದೆ ಎಂಬುದನ್ನು ಗಮನಿಸಬೇಕಾಗಿದೆ.

ಹೀಗಾಗಿ (2.2), (2.4) ಮತ್ತು (2.6) ಅನನ್ಯತೆಗಳು ಒಂದೇ ಚಲಕದ ಅಂದರೆ *GDP*ಯ ವಿಬಿನ್ನ ಅಭಿವ್ಯಕ್ತಿಗಳಾಗಿರುವುದರಿಂದ GDP, ನಾವು ಚಿತ್ರ (2.2)ರ ಮೂಲಕ ಸಮಾನತೆಯನ್ನು ಪ್ರತಿನಿಧಿಸಬಹುದು.




**ರೇಖಾಚಿತ್ರ 2.2:** ಮೂರು ವಿಧಾನಗಳಿಂದ GDP ಯನ್ನು ರೇಖಾಚಿತ್ರದಿಂದ ಪ್ರತಿನಿಧಿಸುವುದು

ಈಗ, ಅಂದಾಜಿನ ಎಲ್ಲಾ ವಿಧಾನಗಳು ಹೇಗೆ ಒಂದೇ ಉತ್ತರವನ್ನು ನೀಡುತ್ತವೆಂಬ ಸಂಖ್ಯಾತ್ಮಕ ಉದಾಹರಣೆಯನ್ನು ನೋಡೋಣ.

ಉದಾಹರಣೆ : A ಮತ್ತು B ಎಂಬ ಎರಡು ಉದ್ಯಮಘಟಕಗಳಿವೆ. A ಉದ್ಯಮ ಘಟಕವು ಕಚ್ಚಾ ಸರಕನ್ನು ಬಳಸದೆ ರೂಪಾಯಿ 50 ಬೆಲೆಬಾಳುವ ಹತ್ತಿಯನ್ನು ಉತ್ಪಾದಿಸುತ್ತದೆ. A ಯು ತನ್ನ ಹತ್ತಿಯನ್ನು B ಉದ್ಯಮ ಘಟಕಕ್ಕೆ ಮಾರಾಟ ಮಾಡುತ್ತದೆ. B ಯು ಇದನ್ನು ಬಳಸಿ ಬಟ್ಟೆಯನ್ನು ತಯಾರಿಸುತ್ತದೆ. B ಯು ತಾನು ತಯಾರಿಸಿದ ಬಟ್ಟೆಯನ್ನು ಅನುಭೋಗಿಗಳಿಗೆ ರೂಪಾಯಿ 200ಕ್ಕೆ ಮಾರಾಟ ಮಾಡುತ್ತದೆ.

1. ಉತ್ಪಾದನೆಯ ಹಂತದಲ್ಲಿ GDP ಅಥವಾ ಮೌಲ್ಯವರ್ದನೆ ವಿಧಾನ :

ಮೌಲ್ಯವರ್ದನೆಯನ್ನು ನೆನಪಿಸುತ್ತಾ (VA) = ಮಾರಾಟ–ಮಧ್ಯಂತರ ಸರಕುಗಳು

ಆದ್ದರಿಂದ, $VA_A = 50 - 0 = 50$

$VA_B = 200 - 50 = 150$

ಹೀಗಾಗಿ $GDP = VA_A + VA_B = 200$

**ಕೋಷ್ಟಕ 2.2 A ಮತ್ತು B ಉದ್ಯಮ ಘಟಕಗಳಿಗೆ GDP ಯ ವಿತರಣೆ**

| | **ಉದ್ಯಮ ಘಟಕ A** | **ಉದ್ಯಮ ಘಟಕ B** |
|---|---|---|
| ಮಾರಾಟ | 50 | 200 |
| ಮದ್ಯಂತರ ಅನುಭೋಗ | 0 | 50 |
| ಮೌಲ್ಯವರ್ಧನೆ | 50 | 150 |

2. ವಿಲೇವಾರಿ ಹಂತದಲ್ಲಿನ GDP ಅಥವಾ ವೆಚ್ಚದ ವಿಧಾನ :

ನೆನಪಿಸಿಕೊಳ್ಳುವುದಾದರೆ GDP = ಅಂತಿಮ ವೆಚ್ಚದ ಮೊತ್ತ ಅಥವಾ ಅಂತಿಮ ಬಳಕೆಗೆ ಸರಕು ಸೇವೆಗಳ ಮೇಲಿನ ವೆಚ್ಚಗಳು. ಮೇಲಿನ ಸಂಗತಿಯಲ್ಲಿ ಅಂತಿಮ ವೆಚ್ಚವು ಅನುಭೋಗಿಗಳು ಮಾಡಿದ ಬಟ್ಟೆ ಮೇಲಿನ ವೆಚ್ಚವಾಗಿರುತ್ತದೆ. ಆದ್ದರಿಂದ, GDP = 200 ಆಗುತ್ತದೆ.

3. ವಿತರಣೆಯ ಹಂತದಲ್ಲಿನ GDP ಅಥವಾ ಆದಾಯದ ವಿಧಾನ :

ಪುನಃ A ಮತ್ತು B ಉದ್ಯಮ ಘಟಕಗಳತ್ತ ನೋಡೋಣ

ಈಗ, A ಘಟಕವು ಸ್ವೀಕರಿಸಿದ 50 ರೂಗಳಲ್ಲಿ, ಉದ್ಯಮ ಘಟಕವು 20 ರೂಗಳನ್ನು ಕೆಲಸಗಾರರಿಗೆ ಕೂಲಿಯಾಗಿ ನೀಡುತ್ತದೆ. ಉಳಿದ 30ನ್ನು ತನ್ನ ಲಾಭವಾಗಿ ಇಟ್ಟುಕೊಳ್ಳುತ್ತದೆ. ಅದೇ ರೀತಿಯಾಗಿ, B ಘಟಕವು ರೂ 60ನ್ನು ಕೂಲಿಯಾಗಿ ನೀಡುತ್ತದೆ ಮತ್ತು 90ನ್ನು ಲಾಭವಾಗಿ ಇಟ್ಟುಕೊಳ್ಳುತ್ತದೆ.

**ಕೋಷ್ಟಕ 2.3 : A ಮತ್ತು B ಉದ್ಯಮ ಘಟಕಗಳ ಉತ್ಪಾದನಾಂಗಗಳ ಆದಾಯ ವಿತರಣೆ**

| | **ಉದ್ಯಮ ಘಟಕ A** | **ಉದ್ಯಮ ಘಟಕ B** |
|---|---|---|
| ಕೂಲಿ | 20 | 60 |
| ಲಾಭ | 30 | 90 |

ನೆನಪಿಸಿಕೊಳ್ಳುವುದಾದರೆ ಆದಾಯದ ವಿಧಾನದಿಂದ = ಉತ್ಪಾದನಾಂಗಗಳ ಆದಾಯದ ಒಟ್ಟು ಮೊತ್ತ ಇದು ಸ್ವೀಕರಿಸಿದ ಒಟ್ಟು ಕೂಲಿ (A ಮತ್ತು B ಗಳ ಕೆಲಸಗಾರರು) ಮತ್ತು ಗಳಿಸಿದ ಒಟ್ಟು ಲಾಭ (A ಮತ್ತು B ನಿಂದ ಗಳಿಸಿದ) ಕ್ಕೆ ಸಮನಾಗಿರುತ್ತದೆ. ಇದು 80+120=200ಕ್ಕೆ ಸಮನಾಗಿರುತ್ತದೆ.[4]

### 2.2.4 ಉತ್ಪಾದನಾಂಗ ವೆಚ್ಚ, ಮೂಲ ಬೆಲೆಗಳು ಮತ್ತು ಮಾರುಕಟ್ಟೆ ಬೆಲೆಗಳು

ಭಾರತದಲ್ಲಿ ಉತ್ಪಾದನಾಂಗಗಳ ವೆಚ್ಚದಲ್ಲಿ GDP ಯು ರಾಷ್ಟ್ರೀಯ ವರಮಾನದ ಅತ್ಯಂತ ಪ್ರಮುಖ ಮಾಪನವಾಗಿದೆ ಭಾರತ ಸರ್ಕಾರದ ಕೇಂದ್ರೀಯ ಅಂಕಿಅಂಶಗಳ ಕಛೇರಿ (CSO) ಯು, ಉತ್ಪಾದನಾಂಗಗಳ ವೆಚ್ಚದಲ್ಲಿ ಮತ್ತು ಮಾರುಕಟ್ಟೆ ಬೆಲೆಗಳಲ್ಲಿ GDP ಯ ಬಗ್ಗೆ ವರದಿ ಮಾಡುತ್ತಾ ಬಂದಿದೆ. CSO ತನ್ನ ಜನವರಿ 2015ರಲ್ಲಿ ಪರಿಷ್ಕರಣೆಯಲ್ಲಿ ಮೂಲ ಬೆಲೆಗಳಲ್ಲಿನ GVA ಯನ್ನು ಮತ್ತು ಮಾರುಕಟ್ಟೆ ಬೆಲೆಗಳಲ್ಲಿನ GDP ಯನ್ನು ಉತ್ಪಾದನಾಂಗಗಳ ವೆಚ್ಚದ GDP ಗೆ ಬದಲಾಯಿಸಿದೆ. ಇದನ್ನು ಈಗ GDP ಎಂದು ಕರೆಯಲಾಗುತ್ತದೆ ಮತ್ತು ಇದು ಈಗ ಅತ್ಯಂತ ಪ್ರಮುಖ ಮಾಪನವಾಗಿದೆ.

ಆರ್ಥಿಕತೆಯಲ್ಲಿ ಉತ್ಪಾದಿಸಲಾದ GVA ಯ ವಿಚಾರವನ್ನು ಈಗಾಗಲೇ ಚರ್ಚಿಸಲಾಗಿದೆ. ಆರ್ಥಿಕತೆಯಲ್ಲಿ ಉತ್ಪಾದಿಸಲಾದ ಒಟ್ಟು ಉತ್ಪನ್ನದ ಮೇಲ್ಭಾಗದಲ್ಲಿ ಕಳೆಯಲಾದ ಮಧ್ಯಂತರ ಅನುಭೋಗದ ಮೌಲ್ಯವಾಗಿದೆ. (ಅಂತಿಮ ಅನುಭೋಗಕ್ಕೆ ಬಳಸದೆ ಮುಂದಿನ ಉತ್ಪಾದನೆಗೆ ಬಳಸುವ ಉತ್ಪನ್ನವಾಗಿದೆ.) ಇಲ್ಲಿ ನಾವು ಮೂಲ ಬೆಲೆಗಳ ಪರಿಕಲ್ಪನೆಯನ್ನು ಚರ್ಚಿಸೋಣ. ಉತ್ಪಾದನಾಂಗಗಳ ವೆಚ್ಚ, ಮೂಲ ಬೆಲೆಗಳು ಮತ್ತು ಮಾರುಕಟ್ಟೆ ಬೆಲೆಗಳ ನಡುವಿನ ವ್ಯತ್ಯಾಸವು, ನಿವ್ವಳ ಉತ್ಪಾದನಾ ತೆರಿಗೆಗಳು (ಉತ್ಪಾದನಾ ಸಹಾಯಧನಗಳನ್ನು ಕಳೆದ ಉತ್ಪಾದನಾ ತೆರಿಗೆಗಳು) ಮತ್ತು ನಿವ್ವಳ ಉತ್ಪನ್ನ ತೆರಿಗೆಗಳು (ಉತ್ಪನ್ನ ಸಹಾಯಧನಗಳನ್ನು ಕಳೆದ ಉತ್ಪನ್ನ ತೆರಿಗೆಗಳು) ನಡುವಿನ ವ್ಯತ್ಯಾಸದ ಆಧಾರದ ಮೇಲೆ ನಿಂತಿವೆ. ಉತ್ಪಾದನಾ ತೆರಿಗೆಗಳು ಮತ್ತು ಸಹಾಯಧನಗಳು ಉತ್ಪಾದನೆಗೆ ಸಂಬಂಧಿಸಿದಂತೆ ಮಾಡಿದ ಪಾವತಿ ಅಥವಾ ಸ್ವೀಕೃತಿಗಳಾಗಿರುತ್ತವೆ ಮತ್ತು ಇವು ಭೂ ಕಂದಾಯಗಳು, ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳಂತಹ ಉತ್ಪಾದನಾ ಪ್ರಮಾಣಗಳಿಂದ ಸ್ವತಂತ್ರ್ಯವಾಗಿರುತ್ತವೆ. ಮತ್ತೊಂದೆಡೆ ಉತ್ಪನ್ನ ತೆರಿಗೆಗಳು ಮತ್ತು ಸಹಾಯಧನಗಳು ಒಂದು ಘಟಕ ಅಥವಾ ಉತ್ಪನ್ನದ ಮೇಲೆ ಮಾಡಿದ ಪಾವತಿ ಅಥವಾ ಸ್ವೀಕೃತಿಯಾಗಿರುತ್ತದೆ. ಉದಾ : ಅಬಕಾರಿ ತೆರಿಗೆ, ಸೇವಾ ತೆರಿಗೆ, ಆಮದು ಮತ್ತು ರಫ್ತು ಸುಂಕಗಳು ಇತ್ಯಾದಿ. ಉತ್ಪಾದನಾಂಗಗಳ ವೆಚ್ಚವು ಉತ್ಪಾದನಾಂಗಳಿಗೆ ಪಾವತಿಯನ್ನು ಮಾತ್ರ ಒಳಗೊಂಡಿರುತ್ತದೆ. ಇದು ಯಾವುದೇ ತೆರಿಗೆಯನ್ನು ಒಳಗೊಂಡಿರುವುದಿಲ್ಲ. ಮಾರುಕಟ್ಟೆ ಬೆಲೆಗಳನ್ನು ಪಡೆದುಕೊಳ್ಳಬೇಕಾದರೆ ಉತ್ಪಾದನಾಂಗ ವೆಚ್ಚಕ್ಕೆ ಪರೋಕ್ಷ ತೆರಿಗೆಗಳನ್ನು ಸೇರಿಸಿ

[4] ಈ ಉದಾಹರಣೆಯಲ್ಲಿ ಗೇಣಿ ಮತ್ತು ಬಡ್ಡಿ ರೂಪದ ಉತ್ಪಾದನಾಂಗ ಪಾವತಿಯನ್ನು ಬಿಟ್ಟಿದ್ದೇವೆ. ಆದರೆ ಮೂಲ ಫಲಿತಾಂಶಕ್ಕೆ ಇದು ಯಾವುದೇ ವ್ಯತ್ಯಾಸವನ್ನು ಉಂಟು ಮಾಡುವುದಿಲ್ಲ. ಏಕೆಂದರೆ ಕೂಲಿಯನ್ನು ಪಾವತಿಸಿದ ನಂತರ ಒಂದು ಉದ್ಯಮ ಘಟಕವು ಸೇರಿಸಿದ ಉಳಿದ ಮೌಲ್ಯವು ಬಡ್ಡಿ, ಶ್ರೇಣಿ ಮತ್ತು ಲಾಭಗಳ ನಡುವೆ ವಿತರಣೆಯಾಗುತ್ತದೆ. ಒಟ್ಟಾಗಿ ಕಾರ್ಯ ನಿರತ ಮಿಗುತೆ ಎಂದು ಕರೆಯಲಾಗುತ್ತದೆ.

ಮತ್ತು ಒಟ್ಟು ಸಹಾಯಧನಗಳನ್ನು ಕಳೆಯಬೇಕಾಗುತ್ತದೆ. ಮೂಲ ಬೆಲೆಗಳು ಇವುಗಳ ನಡುವೆ ಇರುತ್ತದೆ : ಇವು ಉತ್ಪಾದನಾ ತೆರಿಗೆಗಳನ್ನು ಒಳಗೊಳ್ಳುತ್ತವೆ (ಉತ್ಪಾದನಾ ಸಹಾಯಧನ ರಹಿತವಾಗಿ) ಆದರೆ ಉತ್ಪನ್ನ ತೆರಿಗೆಗಳನ್ನು ಒಳಗೊಳ್ಳುವುದಿಲ್ಲ (ಉತ್ಪನ್ನ ಸಹಾಯಧನ ರಹಿತವಾಗಿ). ಆದ್ದರಿಂದ ಮಾರುಕಟ್ಟೆ ಬೆಲೆಗಳನ್ನು ಪಡೆಯಬೇಕಾದರೆ ನಾವು ಉತ್ಪನ್ನ ತೆರಿಗೆಗಳನ್ನು (ಉತ್ಪನ್ನ ಸಹಾಯಧನ ರಹಿತವಾಗಿ) ಮೂಲ ಬೆಲೆಗಳಿಗೆ ಸೇರಿಸಬೇಕಾಗುತ್ತದೆ.

ಮೇಲೆ ಹೇಳಿರುವಂತೆ, CSO ಮೂಲ ಬೆಲೆಗಳಲ್ಲಿ GVA ಯನ್ನು ಪ್ರಕಟಿಸುತ್ತದೆ. ಹೀಗೆ ಇದು ನಿವ್ವಳ ಉತ್ಪಾದನಾ ತೆರಿಗೆಗಳನ್ನು ಒಳಗೊಂಡಿರುತ್ತದೆ ಆದರೆ ನಿವ್ವಳ ಉತ್ಪನ್ನ ತೆರಿಗೆಗಳನ್ನಲ್ಲ. GDP ಯನ್ನು (ಮಾರುಕಟ್ಟೆ ಬೆಲೆಗಳಲ್ಲಿ) ಪಡೆಯಲು ನಿವ್ವಳ ಉತ್ಪನ್ನ ತೆರಿಗೆಗಳನ್ನು GVA ಗೆ ಮೂಲ ಬೆಲೆಗಳಲ್ಲಿ ಸೇರಿಸಬೇಕಾಗುತ್ತದೆ. ಹೀಗೆ,

ಉತ್ಪಾದನಾಂಗ ವೆಚ್ಚಗಳಲ್ಲಿ GVA + ನಿವ್ವಳ ಉತ್ಪಾದನಾ ತೆರಿಗೆಗಳು = ಮೂಲ ಬೆಲೆಗಳಲ್ಲಿ GVA.

ಮೂಲ ಬೆಲೆಗಳಲ್ಲಿ GVA + ನಿವ್ವಳ ಉತ್ಪನ್ನ ತೆರಿಗೆಗಳು = ಮಾರುಕಟ್ಟೆ ಬೆಲೆಗಳಲ್ಲಿ GVA

ಈ ಅಧ್ಯಾಯದ ಕೊನೆಯಲ್ಲಿ ಇರುವ ಕೋಷ್ಟಕ 2.5ರಲ್ಲಿ GDP ಯ (ಮಾರುಕಟ್ಟೆ ಬೆಲೆಗಳಲ್ಲಿ) ಮತ್ತು ಮೂಲ ಬೆಲೆಗಳಲ್ಲಿ GVA ಅಂಕಿ ಅಂಶಗಳನ್ನು ನೀಡಿದರೆ ಕೋಷ್ಟಕ 2.6 ವೆಚ್ಚದ ಭಾಗದಿಂದ GDP ರಚನೆಯನ್ನು ನೀಡುತ್ತದೆ.

## 2.3 ಕೆಲವು ಸಮಗ್ರ ಆರ್ಥಿಕ ಅನನ್ಯತೆಗಳು *Some Macroeconomic Identities*

ಒಂದು ದೇಶದಲ್ಲಿ ಒಂದು ವರ್ಷದಲ್ಲಿ ಉತ್ಪಾದಿಸಿದ ಅಂತಿಮ ಸರಕು ಸೇವೆಗಳ ಸಮಗ್ರ ಉತ್ಪನ್ನವನ್ನು ಒಟ್ಟು ದೇಶೀಯ ಉತ್ಪನ್ನವು ಮಾಪನ ಮಾಡುತ್ತದೆ. ಆದರೆ ಇದರ ಪೂರ್ಣಭಾಗವು ದೇಶದ ಪ್ರಜೆಗಳಿಗೆ ದೊರಕದಿರಬಹುದು. ಉದಾಹರಣೆಗೆ, ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುವ ಭಾರತದ ನಾಗರೀಕ ತನ್ನ ವೇತನವನ್ನು ಗಳಿಸಬಹುದು ಮತ್ತು ಸೌದಿ ಅರೇಬಿಯಾದ *GDP* ಯಲ್ಲಿ ಅದನ್ನು ಸೇರಿಸಿಕೊಳ್ಳುತ್ತದೆ. ಆದರೆ ಅದು ಕಾನೂನುಬದ್ಧವಾಗಿ ಹೇಳುವುದಾದರೆ, ಅವರು ಭಾರತೀಯರಾಗಿದ್ದಾರೆ. ವಿದೇಶದಲ್ಲಿ ಭಾರತೀಯರ ಗಳಿಕೆಯನ್ನು ಅಥವಾ ಭಾರತೀಯರ ಒಡೆತನದ ಉತ್ಪಾದನಾಂಗಗಳನ್ನು ಗಣನೆಗೆ ತೆಗೆದುಕೊಳ್ಳಲು ಯಾವುದಾದರೊಂದು ಮಾರ್ಗ ಇದೆಯೇ? ಈ ಪ್ರಯತ್ನದಲ್ಲಿ ಸಮರೂಪತೆಯನ್ನು ಕಾಪಾಡಿಕೊಳ್ಳಲು, ದೇಶೀಯ ಆರ್ಥಿಕತೆಯೊಳಗೆ ಕೆಲಸ ಮಾಡುವ ವಿದೇಶಿಗರ ಆದಾಯವನ್ನು ಅಥವಾ ವಿದೇಶಗಳ ಒಡೆತನದ ಉತ್ಪಾದನಾಂಗಗಳ ಪಾವತಿಗಳನ್ನು ನಾವು ಕಡಿತಗೊಳಿಸಬೇಕು. ಉದಾಹರಣೆಗೆ, ಕೊರಿಯಾದ ಮಾಲೀಕತ್ವದ ಹುಂಡೈ ಕಾರು ಕಾರ್ಖಾನೆಯಿಂದ ಪಡೆದ ಲಾಭಗಳನ್ನು ಭಾರತದ *GDP*ಯಿಂದ ಕಳೆಯಬೇಕಾಗಿದೆ. ಅಂತಹ ಸೇರ್ಪಡೆಗಳು ಹಾಗೂ ಕಳೆಯುವಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವ ಸಮಗ್ರ ಆರ್ಥಿಕ ಚಲಕಗಳನ್ನು ಒಟ್ಟು **ದೇಶೀಯ ಉತ್ಪನ್ನ**ವೆಂದು (GNP) ಕರೆಯುತ್ತಾರೆ. ಆದ್ದರಿಂದ GNP ಯನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.




ನಿಮ್ಮ ದೇಶೀಯ ಆರ್ಥಿಕತೆಯಲ್ಲಿ ವಿದೇಶಿಯರುಗಳು ಒಂದು ಪಾಲನ್ನು ಹೊಂದಿದ್ದಾರೆ. ಇದನ್ನು ತರಗತಿ ಕೊಠಡಿಯಲ್ಲಿ ಚರ್ಚಿಸಿ.

GNP ≡ GDP + ವಿಶ್ವದ ಉಳಿದ ಭಾಗಗಳಲ್ಲಿ ಬಳಸಿದ ದೇಶೀಯ ಉತ್ಪಾದನಾಂಗಗಳು ಗಳಿಸಿದ ಆದಾಯ – ದೇಶೀಯ ಆರ್ಥಿಕತೆಯಲ್ಲಿ ಬಳಸಿದ ವಿಶ್ವದ ಉಳಿದ ಉತ್ಪಾದನಾಂಗಗಳು ಗಳಿಸಿದ ಆದಾಯ. ಆದ್ದರಿಂದ

GNP ≡ GDP + ವಿದೇಶಗಳಿಂದ ಬಂದ ಉತ್ಪಾದನಾಂಗಗಳ ನಿವ್ವಳ ಆದಾಯ.

(ವಿದೇಶಗಳಿಂದ ಬಂದ ಉತ್ಪಾದನಾಂಗದ ನಿವ್ವಳ ಆದಾಯ = ವಿಶ್ವದ ಇತರ ಭಾಗಗಳಲ್ಲಿ ಬಳಸಲಾಗುವ ದೇಶೀಯ ಉತ್ಪಾದನಾಂಗಗಳು ಗಳಿಸಿದ ಆದಾಯ – ದೇಶೀಯ ಆರ್ಥಿಕತೆಯಲ್ಲಿ ಬಳಸಿದ ವಿಶ್ವದ ಉಳಿದ ಉತ್ಪಾದನಾಂಗಗಳು ಗಳಿಸಿದ ಆದಾಯ.)

ಒಂದು ವರ್ಷದಲ್ಲಿ ಬಂಡವಾಳದ ಒಂದು ಭಾಗವು ಸವಕಲು ಹರಕಲು *(Wear and Tear)* ಕಾರಣಗಳಿಂದಾಗಿ ಪೋಲಾಗುತ್ತದೆ (ಅನುಭೋಗಕ್ಕೆ ಒಳಗಾಗುತ್ತದೆ). ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಇದನ್ನೇ **ಸವಕಳಿ** ಎಂದು ಕರೆಯುತ್ತಾರೆ. ಸಹಜವಾಗಿ ಸವಕಳಿ ಯಾರೊಬ್ಬರ ಆದಾಯದ ಭಾಗವಾಗಿ ಇರುವುದಿಲ್ಲ. ನಾವು *GNP* ಯಿಂದ ಸವಕಳಿಯನ್ನು ಕಳೆದರೆ **ನಿವ್ವಳ ರಾಷ್ಟ್ರೀಯ ಉತ್ಪನ್ನ (*NNP*)** ದೊರಕುತ್ತದೆ. ಹೀಗಾಗಿ

$$NNP \equiv GNP - \text{ಸವಕಳಿ}$$

ಈ ಎಲ್ಲ ಚಲಕಗಳು ಮಾರುಕಟ್ಟೆ ಬೆಲೆಗಳಲ್ಲಿ ಮೌಲ್ಯಮಾಪನಗೊಳ್ಳುತ್ತವೆ ಎಂಬದನ್ನು ಗಮನಿಸಬೇಕಾಗಿದೆ. ಮೇಲೆ ನೀಡಿದ ಅಭಿವ್ಯಕ್ತಿಯ ಮೂಲಕ, ಮಾರುಕಟ್ಟೆಯ ಬೆಲೆಗಳಲ್ಲಿ *NNP* ಯನ್ನು ಪಡೆಯಲಾಗುತ್ತದೆ ಆದರೆ ಮಾರುಕಟ್ಟೆ ಬೆಲೆಯು **ಪರೋಕ್ಷ ತೆರಿಗೆಗಳ**ನ್ನು ಒಳಗೊಂಡಿದೆ. ಆದರೆ ಸರಕುಗಳು ಮತ್ತು ಸೇವೆಗಳ ಮೇಲೆ ಪರೋಕ್ಷ ತೆರಿಗೆಗಳನ್ನು ವಿಧಿಸಿದಾಗ ಅವುಗಳ ಬೆಲೆಗಳು ಹೆಚ್ಚಾಗುತ್ತುವೆ. ಪರೋಕ್ಷ ತೆರಿಗೆಗಳು ಸರ್ಕಾರಕ್ಕೆ ಸೇರುತ್ತವೆ. ಉತ್ಪಾದನಾಂಗಗಳಿಗೆ ಸೇರುವ *NNP* ಯ ಭಾಗವನ್ನು ಲೆಕ್ಕಚಾರ ಮಾಡಲು ನಾವು ಮಾರುಕಟ್ಟೆಯ ಬೆಲೆಗಳಲ್ಲಿ ಪಡೆದ *NNP* ಯಿಂದ ಪರೋಕ್ಷ ತೆರಿಗೆಗಳನ್ನು ಕಳೆಯಬೇಕು. ಅದೇ ರೀತಿ ಸರ್ಕಾರವು ಕೆಲವು ಸರಕುಗಳ ಬೆಲೆಗಳ ಮೇಲೆ ಸಹಾಯಧನವನ್ನು ನೀಡಬಹುದು. (ಭಾರತದಲ್ಲಿ ಸರ್ಕಾರವು ಪೆಟ್ರೋಲ್ ಮೇಲೆ ಅಧಿಕ ತೆರಿಗೆ ವಿಧಿಸುತ್ತದೆ. ಆದರೆ ಅಡುಗೆ ಅನಿಲಕ್ಕೆ ಸಹಾಯಧನವನ್ನು ನೀಡಿದೆ.) ಹಾಗಾಗಿ ನಾವು ಮಾರುಕಟ್ಟೆ ಬೆಲೆಯಲ್ಲಿ ಮೌಲ್ಯಮಾಪನ ಮಾಡಿದ (ಪಡೆದ) *NNP* ಗೆ ಸಹಾಯಧನವನ್ನು ಸೇರಿಸಬೇಕಾಗಿದೆ. ಹಾಗೆ ಮಾಡುವ ಮೂಲಕ ನಾವು ಪಡೆಯುವ ಮಾಪನವನ್ನು **ಉತ್ಪಾದನಾಂಗದ ವೆಚ್ಚದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ** ಎಂದು ಕರೆಯಲಾಗುತ್ತದೆ ಅಥವಾ ರಾಷ್ಟ್ರೀಯ ಆದಾಯ ಎಂದು ಕರೆಯಲಾಗುತ್ತದೆ.

ಹೀಗೆ, ಉತ್ಪಾದನಾಂಗಗಳ ವೆಚ್ಚದಲ್ಲಿ $NNP \equiv$ ರಾಷ್ಟ್ರೀಯ ಆದಾಯ $(NI) \equiv$ ಮಾರುಕಟ್ಟೆ ಬೆಲೆಯಲ್ಲಿ $NNP$ – (ಪರೋಕ್ಷ ತೆರಿಗೆಗಳು ಸಹಾಯ ಧನಗಳು) $\equiv$ ಮಾರುಕಟ್ಟೆ ಬೆಲೆಯಲ್ಲಿ $NNP$ – ನಿವ್ವಳ ಪರೋಕ್ಷ ತೆರಿಗೆಗಳು (ನಿವ್ವಳ ಪರೋಕ್ಷ ತೆರಿಗೆ $\equiv$ ಪರೋಕ್ಷ ತೆರಿಗೆಗಳು – ಸಹಾಯ ಧನಗಳು)

ರಾಷ್ಟ್ರೀಯ ಆದಾಯವನ್ನು ನಾವು ಸಣ್ಣ ಸಣ್ಣ ವರ್ಗಗಳಾಗಿ ವಿಂಗಡಿಸಬಹುದು. ಕುಟುಂಬಗಳಿಂದ ಸ್ವೀಕರಿಸಲಾಗುವ *NI* ಭಾಗಕ್ಕೆ ಅಭಿವ್ಯಕ್ತಿಯನ್ನು ಹುಡುಕಲು ನಾವು ಪ್ರಯತ್ನಿಸೋಣ. ಇದನ್ನು ನಾವು ವೈಯಕ್ತಿಕ ಆದಾಯ ಎಂದು(*PI*) ಕರೆಯೋಣ. ಮೊದಲನೆಯದಾಗಿ ನಾವು ಉದ್ಯಮ ಘಟಕಗಳು ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳು ಗಳಿಸಿದ *NI* ನ ಲಾಭದ ಒಂದು ಭಾಗವು ಉತ್ಪಾದನಾಂಗಗಳ ನಡುವೆ ವಿತರಣೆಯಾಗುವುದಿಲ್ಲ ಎಂಬುದನ್ನು ಗಮನಿಸೋಣ. ಇದನ್ನು **ವಿತರಣೆಯಾಗದ ಲಾಭ**ಗಳೆಂದು (*UP*) ಕರೆಯುತ್ತಾರೆ. ನಾವು *PI* ಗೆ ತಲುಪಬೇಕಾದರೆ *NI* ನಿಂದ *UP* ಅನ್ನು ಕಳೆಯಬೇಕಾಗಿದೆ. ಏಕೆಂದರೆ *UP* ಯು ಕುಟುಂಬಗಳಿಗೆ ಸೇರಿದುದಾಗಿಲ್ಲ. ಅದೇ ರೀತಿ ಉದ್ಯಮ ಘಟಕಗಳು ಗಳಿಸಿದ ಆದಾಯದ ಮೇಲೆ ವಿಧಿಸಲಾಗುವ ಕಾರ್ಪೋರೇಟ್ ತೆರಿಗೆಗಳನ್ನು *NI* ಯಿಂದ ಕಳೆಯಬೇಕಾಗುತ್ತದೆ. ಏಕೆಂದರೆ ಇದು ಕುಟುಂಬಗಳಿಗೆ ಸೇರುವುದಿಲ್ಲ. ಮತ್ತೊಂದೆಡೆ, ಕುಟುಂಬಗಳು ಖಾಸಗಿ ಉದ್ಯಮ ಘಟಕಗಳಿಗೆ ಅಥವಾ ಸರ್ಕಾರಕ್ಕೆ ಹಿಂದೆ ನೀಡಿದ ಸಾಲದ ಮೇಲಿನ ಬಡ್ಡಿ ಪಾವತಿಯನ್ನು ಸ್ವೀಕರಿಸುತ್ತವೆ ಹಾಗೆಯೇ ಒಂದು ವೇಳೆ ಕುಟುಂಬಗಳು ಉದ್ಯಮ ಘಟಕಗಳು ಮತ್ತು ಸರ್ಕಾರದಿಂದ ಸಾಲ ಪಡೆದಿದ್ದರೆ, ಅದಕ್ಕೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ಉದ್ಯಮ ಘಟಕಗಳಿಗೆ ಮತ್ತು ಸರ್ಕಾರಕ್ಕೆ ಕುಟುಂಬಗಳು ಪಾವತಿಸಿದ ನಿವ್ವಳ ಬಡ್ಡಿಗಳನ್ನು ಕಳೆಯಬೇಕಾಗುತ್ತದೆ. ಕುಟುಂಬಗಳು ಸರ್ಕಾರ ಮತ್ತು ಉದ್ಯಮಗಳಿಂದ ವರ್ಗಾವಣೆ ಪಾವತಿಗಳನ್ನು ಪಡೆಯುತ್ತವೆ (ಉದಾಹರಣೆಗೆ ಪಿಂಚಣಿಗಳು, ವಿದ್ಯಾರ್ಥಿವೇತನಗಳು, ಬಹುಮಾನಗಳು,) ಇವುಗಳನ್ನು ಕುಟುಂಬಗಳ ವೈಯಕ್ತಿಕ ಆದಾಯವನ್ನು ಲೆಕ್ಕಹಾಕಲು ಸೇರಿಸಬೇಕಾಗುತ್ತದೆ.

ಆದ್ದರಿಂದ, ವೈಯಕ್ತಿಕ ವರಮಾನ $(PI) \equiv NI$ – ವಿತರಣೆಯಾಗದ ಲಾಭಗಳು – ಕುಟುಂಬಗಳು ಮಾಡಿದ ನಿವ್ವಳ ಬಡ್ಡಿಯ ಪಾವತಿಗಳು – ಕಾರ್ಪೊರೇಟ್ ತೆರಿಗೆ + ಸರ್ಕಾರ ಮತ್ತು ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಪಾವತಿಯಾದ ವರ್ಗಾವಣೆ ಪಾವತಿಗಳು.

ಆದಾಗ್ಯೂ ವೈಯಕ್ತಿಕ ಆದಾಯವು *(PI)* ಕುಟುಂಬಗಳಿಗೆ ಪೂರ್ಣ ಅಧಿಕಾರ ಇರುವ ಆದಾಯವಲ್ಲ ಅವರು *PI* ನಿಂದ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ನಾವು ವೈಯಕ್ತಿಕ ತೆರಿಗೆ ಪಾವತಿಗಳು ಮತ್ತು ತೆರಿಗೆಯೇತರ ಪಾವತಿಗಳನ್ನು *PI* ನಲ್ಲಿ ಕಳೆದರೆ ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವನ್ನು

ಪಡೆಯುತ್ತೇವೆ. ಆದ್ದರಿಂದ ವೈಯಕ್ತಿಕ ವೆಚ್ಚಮಾಡಬಹುದಾದ ಆದಾಯ *(PDI)* ≡ *PI* – ವೈಯಕ್ತಿಕ ತೆರಿಗೆ ಪಾವತಿಗಳು – ತೆರಿಗೆಯೇತರ ಪಾವತಿಗಳು.

ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯವು ಕುಟುಂಬಗಳಿಗೆ ಸೇರಿದ ಸಮಗ್ರ ಆದಾಯದ ಭಾಗವಾಗಿದೆ ಅವರು ಅದರ ಒಂದು ಭಾಗವನ್ನು ಅನುಭೋಗಿಸಲು ಮತ್ತು ಇನ್ನೊಂದು ಭಾಗವನ್ನು ಉಳಿತಾಯ ಮಾಡಲು ನಿರ್ಧರಿಸಬಹುದು. ಪ್ರಮುಖ ಸಮಗ್ರ ಆರ್ಥಿಕ ಚಲಕಗಳ ನಡುವಿನ ಸಂಬಂಧಗಳನ್ನು ರೇಖಾಚಿತ್ರ 2.3ರಲ್ಲಿ ಪ್ರತಿನಿಧಿಸಲಾಗಿದೆ.

ಈ ಅಧ್ಯಾಯದ ಕೊನೆಯಲ್ಲಿ ಓದುಗರಿಗೆ ಭಾರತದ ಕೆಲವು ಪ್ರಮುಖ ಸಮಗ್ರ ಆರ್ಥಿಕ ಚಲಕಗಳನ್ನು ಒಂದು ಕೋಷ್ಟಕದ ಮೂಲಕ ನೀಡಲಾಗಿದೆ. ಪ್ರಸ್ತುತ ಬೆಲೆಯಲ್ಲಿ 1990–91 ರಿಂದ 2004–2005 ಈ ಕೋಷ್ಟಕವು ಅವುಗಳ ವಾಸ್ತವ ಮೌಲ್ಯಗಳ ಅಂದಾಜು ಕಲ್ಪನೆಯನ್ನು ನೀಡುತ್ತದೆ.




**ರೇಖಾಚಿತ್ರ 2.3:** ಸಮಗ್ರ ಆದಾಯದ ಉಪವರ್ಗಗಳ ರೇಖಾತ್ಮಕ ನಿರೂಪಣೆ. *NFIA* ವಿದೇಶದಲ್ಲಿನ ನಿವ್ವಳಉತ್ಪಾದನಾಂಗದ ಆದಾಯ, *D*; ಸವಕಳಿ. *ID*; ಪರೋಕ್ಷ ತೆರಿಗೆ, *SUB* ಸಹಾಯಧನಗಳು, *UP*; ವಿತರಣೆಯಾಗದ ಲಾಭಗಳು *NIH;* ಕುಟುಂಬಗಳ ನಿವ್ವಳ ಬಡ್ಡಿ ಪಾವತಿ, *CT*; ಕಾರ್ಪೊರೇಟ್ ತೆರಿಗೆ, *TrH;* ಕುಟುಂಬಗಳು ಸ್ವೀಕರಿಸಿದ ವರ್ಗಾವಣೆಗಳು, *PTP*; ವೈಯಕ್ತಿಕ ತೆರಿಗೆ ಪಾವತಿಗಳು, *NP;* ತೆರಿಗೆಯೇತರ ಪಾವತಿಗಳು.

**ವೆಚ್ಚ ಮಾಡಬಹುದಾದ ರಾಷ್ಟ್ರೀಯ ಆದಾಯ ಮತ್ತು ಖಾಸಗಿ ಆದಾಯ**

ಈ ವರ್ಗಗಳ ಸಮಗ್ರ ಆರ್ಥಿಕ ಚಲಕಗಳಲ್ಲದೆ ಭಾರತದಲ್ಲಿ, ಕೆಲವು ಇತರ ಸಮಗ್ರ ಆದಾಯದ ವರ್ಗಗಳನ್ನು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಬಳಸಲಾಗುತ್ತದೆ.

- **ವೆಚ್ಚ ಮಾಡಬಹುದಾದ ರಾಷ್ಟ್ರೀಯ ಆದಾಯ** = ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ + ವಿಶ್ವದ ಉಳಿದ ಭಾಗಗಳ ಇತರ ಪ್ರಸ್ತುತ ವರ್ಗಾವಣೆಗಳು

ದೇಶೀಯ ಆರ್ಥಿಕತೆಯು ವಿಲೇವಾರಿ ಮಾಡಬಹುದಾದ ಸರಕು ಮತ್ತು ಸೇವೆಗಳ ಗರಿಷ್ಠ ಪ್ರಮಾಣ ಎಷ್ಟೆಂಬುದರ ಬಗ್ಗೆ ಒಂದು ಕಲ್ಪನೆಯನ್ನು ವೆಚ್ಚ ಮಾಡಬಹುದಾದ ರಾಷ್ಟ್ರೀಯವು ನೀಡುತ್ತದೆ. ವಿಶ್ವದ ಇತರ ಭಾಗಗಳಿಂದಾದ ಪ್ರಸ್ತುತ ವರ್ಗಾವಣೆಗಳು ಒಳಗೊಂಡಿರುವ ಅಂಶಗಳೆಂದರೆ ಉಡುಗೊರೆಗಳು, ಅನುದಾನಗಳು ಇತ್ಯಾದಿ.

- **ಖಾಸಗಿ ಆದಾಯ** = ಖಾಸಗಿ ವಲಯಯಕ್ಕೆ ನಿವ್ವಳ ದೇಶೀಯ ಉತ್ಪನ್ನಗಳಿಂದ ಸೇರುವ ಉತ್ಪಾದನಾಂಗದ ಆದಾಯ + ರಾಷ್ಟ್ರೀಯ ಸಾಲದ ಬಡ್ಡಿ + ವಿದೇಶಗಳ ಉತ್ಪಾದನಾಂಗದ ನಿವ್ವಳ ಆದಾಯ + ಸರ್ಕಾರದ ಪ್ರಸ್ತುತ ವರ್ಗಾವಣೆಗಳು + ವಿಶ್ವದ ಉಳಿದ ಭಾಗಗಳ ಇತರ ನಿವ್ವಳ ವರ್ಗಾವಣೆಗಳು

**ಕೋಷ್ಟಕ 2.4 ಮೂಲ ರಾಷ್ಟ್ರೀಯ ಆದಾಯದ ಸಮಗ್ರತೆಗಳು**[5]

| | | |
|---|---|---|
| 1. | **ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶೀಯ ಉತ್ಪನ್ನ ($GDP_{MP}$)** | * ಒಂದು ವರ್ಷದಲ್ಲಿ ಮಾಪನ ಮಾಡಲಾದ ಒಂದು ದೇಶದ ದೇಶೀಯ ಭೌಗೋಳಿಕ ಪ್ರದೇಶದೊಳಗೆ ಉತ್ಪಾದಿಸಿದ ಎಲ್ಲಾ ಅಂತಿಮ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವೇ GDP ಅಂಶ.<br>* ಒಂದು ದೇಶದಲ್ಲಿನ ರಾಷ್ಟ್ರೀಯ ನಿವಾಸಿಗಳು ಅಥವಾ ಅವಿವಾಸಿಗಳು ಮಾಡಿದ ಎಲ್ಲಾ ಉತ್ಪಾದನೆಗಳನ್ನು ಈ ಉತ್ಪಾದನೆಯು ಸ್ಥಳೀಯ ಕಂಪನಿ ಅಥವಾ ವಿದೇಶಿ ಘಟಕಗಳ ಒಡೆತನದಲ್ಲಿ ಇರುತ್ತದೆಯೇ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಒಳಗೊಂಡಿರುತ್ತದೆ.<br>* ಎಲ್ಲವನ್ನೂ ಮಾರುಕಟ್ಟೆ ಬೆಲೆಗಳಲ್ಲಿ ಮೌಲ್ಯೀಕರಿಸಲಾಗಿರುತ್ತದೆ.<br>$GDP_{MP} = C+1+G+X-M$ |
| 2. | ಉತ್ಪಾದನಾಂಗದ ವೆಚ್ಚದಲ್ಲಿ GDP ($GDP_{FC}$) | * ಉತ್ಪಾದನಾಂಗ ವೆಚ್ಚದಲ್ಲಿ GDP ಎಂದರೆ ಮಾರುಕಟ್ಟೆ ಬೆಲೆಗಳಲ್ಲಿ ದೇಶೀಯ ಉತ್ಪನ್ನವಾಗಿದೆ. ಇದರಲ್ಲಿ ನಿವ್ವಳ ಉತ್ಪನ್ನ ತೆರಿಗೆಗಳನ್ನು ಕಳೆಯಲಾಗುತ್ತದೆ.<br>* ಅನುಭೋಗಿಗಳಿಂದ ಪಾವತಿಸಲಾದ ಬೆಲೆಗಳು ಮಾರುಕಟ್ಟೆ ಬೆಲೆಗಳು. ಈ ಮಾರುಕಟ್ಟೆ ಬೆಲೆಗಳು ಉತ್ಪನ್ನ ತೆರಿಗೆಗಳು ಮತ್ತು ಸಹಾಯಧನಗಳನ್ನು ಸಹ ಒಳಗೊಂಡಿರುತ್ತದೆ. ಉತ್ಪಾದನಾಂಗ ವೆಚ್ಚ ಎಂಬ ಪದದ ಅರ್ಥವೇನೆಂದರೆ ಉತ್ಪಾದಕರು ಸ್ವೀಕರಿಸಿದಂತಹ ಉತ್ಪನ್ನಗಳ ಬೆಲೆಗಳಾಗಿವೆ. ಆದ್ದರಿಂದ ಉತ್ಪಾದನಾಂಗ ವೆಚ್ಚವು ನಿವ್ವಳ ಪರೋಕ್ಷ ತೆರಿಗೆಗಳನ್ನು ಕಳೆದ ನಂತರದ ಮಾರುಕಟ್ಟೆ ಬೆಲೆಗಳಿಗೆ ಸಮವಾಗಿರುತ್ತದೆ. ಒಂದು ವರ್ಷದಲ್ಲಿ ಒಂದು ದೇಶದ ದೇಶೀಯ ಗಡಿಯೊಳಗೆ ಉದ್ಯಮ ಘಟಕಗಳಿಂದ ಉತ್ಪಾದಿಸಲಾದ ಉತ್ಪನ್ನಗಳ ಮಾರಾಟ ಮಾಡಲಾದ ಹಣದ ಮೌಲ್ಯವು ಉತ್ಪಾದನಾಂಗ ಬೆಲೆಗಳಲ್ಲಿ GDP ಆಗಿದೆ.<br>$GDP_{FC} = GDP_{MP} - NIT$ |
| 3. | **ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ದೇಶೀಯ ಉತ್ಪನ್ನ ($NDP_{MP}$)** | * ವರ್ತಮಾನದ GDP ಯನ್ನು ಕಾಯ್ದುಕೊಳ್ಳಲು ಒಂದು ದೇಶವು ಎಷ್ಟನ್ನು ವೆಚ್ಚ ಮಾಡಬೇಕಾಗುತ್ತದೆ. ಎಂಬುದನ್ನು ಅಂದಾಜಿಸಲು ನೀತಿ ನಿರೂಪಕರಿಗೆ ಈ ಮಾಪನವು ಅನುವು ಮಾಡಿಕೊಡುತ್ತದೆ. ಒಂದು ದೇಶವು ಸವಕಳಿಯ ಮೂಲಕ ನಷ್ಟವಾದ ಬಂಡವಾಳ ದಾಸ್ತಾನನ್ನು ಬದಲಿಸಲು ಸಮರ್ಥವಾಗದಿದ್ದರೆ ಆಗ GDP ಯು ಕಡಿಮೆಯಾಗುತ್ತದೆ.<br>$NDP_{MP} = GDP_{MP} - Dep$ |
| 4. | ಉತ್ಪಾದನಾಂಗದ ವೆಚ್ಚದಲ್ಲಿ NDP ($NDP_{FC}$) | * ಒಂದು ದೇಶದ ದೇಶೀಯ ಭೂ ಪ್ರದೇಶದೊಳಗೆ ಉತ್ಪಾದನಾಂಗಗಳು ಕೂಲಿ, ಲಾಭ, ಗೇಣಿ, ಬಡ್ಡಿ ಇತ್ಯಾದಿಗಳ ರೂಪದಲ್ಲಿ ಗಳಿಸಿದ ಆದಾಯವೇ ಉತ್ಪಾದನಾಂಗ ವೆಚ್ಚದಲ್ಲಿ NDP ಆಗಿದೆ.<br>$NDP_{FC} = NDP_{MP}$ – ನಿವ್ವಳ ಉತ್ಪನ್ನ ತೆರಿಗೆಗಳು – ನಿವ್ವಳ ಉತ್ಪಾದನಾ ತೆರಿಗೆಗಳು |
| 5. | ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ ($GNP_{MP}$) | * ಒಂದು ವರ್ಷದಲ್ಲಿ ಭಾರತದ ಸಾಮಾನ್ಯ ನಿವಾಸಿಗಳು ಉತ್ಪಾದಿಸಿದ ಅಂತಿಮ ಸರಕುಗಳು ಮತ್ತು ಸೇವೆಗಳನ್ನು ಮಾರುಕಟ್ಟೆ ದರದಲ್ಲಿ ಮಾಪನ ಮಾಡುವುದೇ $GNP_{MP}$ ಮೌಲ್ಯವಾಗಿದೆ.<br>* ರಾಷ್ಟ್ರೀಯ ಗಡಿಯೊಳಗೆ ನೆಲೆಸಿರುವ ಅಥವಾ ವಿದೇಶದಲ್ಲಿರುವ ಎಂದು ಪರಿಗಣಿಸದೇ ಒಂದು ರಾಷ್ಟ್ರದ ಸಾಮಾನ್ಯ ನಿವಾಸಿಗಳು ಉತ್ಪಾದಿಸಿದ ಎಲ್ಲಾ ಆರ್ಥಿಕ ಉತ್ಪನ್ನಗಳನ್ನು GNP ಎಂದು ಕರೆಯಲಾಗುತ್ತದೆ.<br>* ಪ್ರತಿಯೊಂದನ್ನು ಮಾರುಕಟ್ಟೆ ಬೆಲೆಗಳಲ್ಲಿ ಮಾಪನ ಮಾಡಲಾಗುತ್ತದೆ.<br>$GNP_{MP} = GDP_{MP} + NFIA$ |

[5]ಸಂಯುಕ್ತ ರಾಷ್ಟ್ರಗಳು, ಇತರ ಕೆಲವು ಏಜೆನ್ಸಿಗಳೊಂದಿಗಿನ ಪಾಲುಗಾರಿಕೆಯೊಂದಿಗೆ, ನೀಡಿರುವ System of National Accounts 2008 (SNA 2008) ಅನುಸರಿಸಿದಂತೆ, ದೇಶಗಳು ಈಗ ಹೊಸ ಸಮಗ್ರತೆಗಳೆಡೆಗೆ ಬದಲಾಗುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಭಾರತವು ಈ ಸಮಗ್ರತೆಗಳಿಗೆ ಬದಲಾಯಿಸಿಕೊಂಡಿದೆ.

| | | |
|---|---|---|
| 6. | **ಉತ್ಪಾದನಾಂಗ ವೆಚ್ಚದಲ್ಲಿ GNP ($GNP_{FC}$)** | * ಒಂದು ವರ್ಷದಲ್ಲಿ ಒಂದು ದೇಶಕ್ಕೆ ಸೇರಿದ ಉತ್ಪಾದನಾಂಗಗಳು ಸ್ವೀಕರಿಸಿದ ಉತ್ಪನ್ನದ ಮೌಲ್ಯವನ್ನು ಮಾಪನ ಮಾಡುವುದೇ ಉತ್ಪಾದನಂಗ ವೆಚ್ಚದ GNP<br>$GNP_{FC} = GNP_{MP}$ – ನಿವ್ವಳ ಉತ್ಪನ್ನ ತೆರಿಗೆಗಳು – ನಿವ್ವಳ ಉತ್ಪಾದನಾ ತೆರಿಗೆಗಳು. |
| 7. | **ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ ($NNP_{MP}$)** | * ಒಂದು ನಿರ್ದಿಷ್ಟ ಸಮಯದಲ್ಲಿ ಒಂದು ದೇಶವು ಎಷ್ಟು ಪ್ರಮಾಣದಲ್ಲಿ ಅನುಭೋಗಿಸುತ್ತದೆ ಎನ್ನುವುದನ್ನು ಇದು ಮಾಪನ ಮಾಡುತ್ತದೆ. ಎಲ್ಲಿ ಉತ್ಪಾದನೆಯನ್ನು ಮಾಡಲಾಗಿದೆ (ದೇಶೀಯ ಭೂ ಪ್ರದೇಶದೊಳಗೆ ಅಥವಾ ವಿದೇಶದಲ್ಲಿ) ಎನ್ನುವುದನ್ನು ಪರಿಗಣಿಸದೆ NNP ಯು ಉತ್ಪನ್ನವನ್ನು ಮಾಪನ ಮಾಡುತ್ತದೆ.<br>$NNP_{MP} = GNP_{MP}$ – ಸವಕಳಿ<br>$NNP_{MP} = NDP_{MP} + NFIA$ |
| 8. | **ಉತ್ಪಾದ’ನಾಂಗ’ ವೆಚ್ಚದಲ್ಲಿ NNP (NN-$P_{FC}$) ಅಥವಾ**<br>**ರಾಷ್ಟ್ರೀಯ ಆದಾಯ (NI)** | * ಒಂದು ವರ್ಷದಲ್ಲಿ ಒಂದು ದೇಶಕ್ಕೆ ಸೇರಿದ ಎಲ್ಲಾ ಉತ್ಪಾದನಾಂಗಗಳು, ಉತ್ಪಾದನೆಯಲ್ಲಿ, ಕೂಲಿ, ಲಾಭ, ಗೇಣಿ ಮತ್ತು ಬಡ್ಡಿಯ ಇತ್ಯಾದಿಗಳ ರೂಪದಲ್ಲಿ ಗಳಿಸಿರುವ ಆದಾಯದ ಒಟ್ಟು ಮೊತ್ತವೇ ಉತ್ಪಾದನಾಂಗದ ವೆಚ್ಚದಲ್ಲಿ NNP<br>* ರಾಷ್ಟ್ರೀಯ ಗಡಿಯೊಳಗಿನ ಉತ್ಪಾದನೆಯ ಮಿತಿಗೆ ಒಳಪಡದಿರುವ ರಾಷ್ಟ್ರೀಯ ಉತ್ಪನ್ನವಾಗಿದೆ. ವಿದೇಶಗಳಿಂದ ಬಂದ ನಿವ್ವಳ ಉತ್ಪಾದನಾಂಗದ ಆದಾಯಕ್ಕೆ ಸೇರಿಸಲಾದ ನಿವ್ವಳ ದೇಶೀಯ ಉತ್ಪಾದನಾಂಗದ ಆದಾಯವಾಗದೆ<br>$NI = NNP_{MP}$ – ನಿವ್ವಳ ಉತ್ಪನ್ನ ತೆರಿಗೆಗಳು – ನಿವ್ವಳ ಉತ್ಪಾದನಾ ತೆರಿಗೆಗಳು<br>$= NDP_{FC} + NFIA = NNP_{FC}$ |
| 9. | **ಮಾರುಕಟ್ಟೆ ಬೆಲೆಗಳಲ್ಲಿ GVA** | * ಮಾರುಕಟ್ಟೆ ಬೆಲೆಗಳಲ್ಲಿ GDP |
| 10. | **ಮೂಲ ಬೆಲೆಗಳಲ್ಲಿ GVA** | * $GVA_{MP}$ – ನಿವ್ವಳ ಉತ್ಪನ್ನ ತೆರಿಗೆಗಳು |
| 11. | **ಉತ್ಪಾದನಾಂಗಗಳ ವೆಚ್ಚದಲ್ಲಿ GVA** | * ಮೂಲ ಬೆಲೆಗಳಲ್ಲಿ GVA – ನಿವ್ವಳ ಉತ್ಪಾದನಾ ತೆರಿಗೆಗಳು |

## 2.4. ನಾಮಮಾತ್ರ ಮತ್ತು ನೈಜ *GDP (Nominal and Real GDP)*

ಸರಕು ಮತ್ತು ಸೇವೆಗಳಲ್ಲಿನ ಬೆಲೆಗಳು ನಮ್ಮ ಅಧ್ಯಯನದ ಸಮಯದಲ್ಲಿ ಬದಲಾಗುವುದಿಲ್ಲ ಎಂಬುದು ಈ ಎಲ್ಲಾ ಚರ್ಚೆಯಲ್ಲಿನ ಒಂದು ಸೂಚ್ಯ ಊಹೆಯಾಗಿದೆ. ಬೆಲೆಗಳಲ್ಲಿ ಬದಲಾವಣೆಯಾದರೆ *GDP* ಗಳನ್ನು ಹೋಲಿಸುವಲ್ಲಿ ತೊಂದರೆಗಳುಂಟಾಗಬಹುದು. ಎರಡು ಸತತ ವರ್ಷಗಳಲ್ಲಿ ದೇಶದ *GDP* ಯನ್ನು ಅಳೆದರೆ ಎರಡನೇ ವರ್ಷದ *GDP* ಯ ಅಂಕಿ ಅಂಶವು ಮೊದಲನೇ ವರ್ಷಕ್ಕಿಂತ ಎರಡು ಪಟ್ಟು ಹೆಚ್ಚಿರುವುದನ್ನು ನೋಡುತ್ತೇವೆ. ದೇಶದ ಉತ್ಪಾದನೆಯ ಪ್ರಮಾಣವು ದ್ವಿಗುಣವಾಗಿದೆ ಎಂದು ನಾವು ತೀರ್ಮಾನಿಸಬಹುದು. ಆದರೆ ಎರಡು ವರ್ಷಗಳ ನಡುವೆ ಕೇವಲ ಎಲ್ಲಾ ಸರಕುಗಳು ಮತ್ತು ಸೇವೆಗಳ ಬೆಲೆಗಳು ಮಾತ್ರ ದ್ವಿಗುಣಗೊಂಡಿದ್ದು ಉತ್ಪಾದನೆಯು ಸ್ಥಿರವಾಗಿ ಉಳಿಯುವ ಸಾಧ್ಯತೆ ಇರುತ್ತದೆ.

ಆದ್ದರಿಂದ ವಿಭಿನ್ನ ದೇಶಗಳ *GDP* ಯ ಅಂಕಿ ಅಂಶಗಳನ್ನು (ಸಮಗ್ರ ಆರ್ಥಿಕ ಚಲಕಗಳು) ಹೋಲಿಸಲು ಅಥವಾ ಒಂದೇ ದೇಶದ ವಿವಿಧ ಸಮಯದ ಹಂತಗಳಲ್ಲಿ *GDP* ಯ ಅಂಕಿ ಅಂಶಗಳನ್ನು ಹೋಲಿಸಲು, ನಾವು ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ಮೌಲ್ಯ ಮಾಪನ ಮಾಡಿದ *GDP* ಯನ್ನು ಅವಲಂಬಿಸಲು ಸಾಧ್ಯವಿಲ್ಲ. ನಾವು ಹೋಲಿಕೆ ಮಾಡುವುದಕ್ಕೆ ನೈಜ *GDP* ಯ ಸಹಾಯವನ್ನು ತೆಗೆದುಕೊಳ್ಳುತ್ತೇವೆ. ಸ್ಥಿರ ಬೆಲೆಗಳ ಗಣದಲ್ಲಿ (ಸ್ಥಿರಬೆಲೆಗಳಲ್ಲಿ) ಸರಕು ಮತ್ತು ಸೇವೆಗಳನ್ನು ಮೌಲ್ಯ ಮಾಪನ ಮಾಡಿ ನೈಜ *GDP*ಯನ್ನು ಲೆಕ್ಕಚಾರ ಮಾಡಲಾಗುತ್ತದೆ. ಈ ಬೆಲೆಗಳು ಸ್ಥಿರವಾಗಿರುವುದರಿಂದ ನೈಜ *GDP*ಯು ಬದಲಾವಣೆಯಾದರೆ

ಉತ್ಪನ್ನದ ಪ್ರಮಾಣವು ಬದಲಾಗುತ್ತದೆ ಎಂಬುದು ನಮಗೆ ಖಚಿತವಾಗುತ್ತದೆ. ಮತ್ತೊಂದು ರೀತಿಯಲ್ಲಿ ನಾಮಮಾತ್ರ *GDP* ಯು, ಪ್ರಸಕ್ತ ಚಾಲ್ತಿಯಲ್ಲಿರುವ ಬೆಲೆಯಲ್ಲಿ *GDP*ಯ ಮೌಲ್ಯವಾಗಿದೆ. ಉದಾಹರಣೆಗೆ, ಒಂದು ದೇಶವು ಕೇವಲ ಬ್ರೆಡ್‌ನ್ನು (ರೊಟ್ಟಿ) ಮಾತ್ರ ಉತ್ಪಾದಿಸುತ್ತದೆ ಎಂದುಕೊಳೋಣ. 2000 ಇಸವಿಯಲ್ಲಿ 100 ಘಟಕಗಳಷ್ಟು ಬ್ರೆಡ್‌ನ್ನು (ರೊಟ್ಟಿಯನ್ನು) ₹10 ದರದಲ್ಲಿ ಉತ್ಪಾದಿಸಿತು. ಪ್ರಸ್ತುತ ಬೆಲೆಯಲ್ಲಿ *GDP* ಯು ₹ 1,000 ಆಗಿದೆ. ಅದೇ ದೇಶ 2001 ರಲ್ಲಿ 110 ಘಟಕಗಳಷ್ಟು ಬ್ರೆಡ್ ಅನ್ನು ₹.15 ಬೆಲೆಗೆ ಉತ್ಪಾದಿಸುತ್ತದೆ. ಆದ್ದರಿಂದ 2001 ರಲ್ಲಿ ನಾಮಮಾತ್ರ *GDP* ಯು ₹1,650. ಆಗಿರುತ್ತದೆ. (= ₹110 × ₹15). 2001 ರಲ್ಲಿ ನೈಜ *GDP* ಯು ವರ್ಷ 2000 ದ ಬೆಲೆಯಲ್ಲಿ (2000 ನೇ ವರ್ಷವನ್ನು ಆಧಾರ ವರ್ಷ ಎಂದು ಕರೆಯಲಾಗುತ್ತದೆ) ₹110 × ₹10 = ₹1,100.

ನೈಜ *GDP*ಗೆ ನಾಮಮಾತ್ರದ *GDP*ಯ ಅನುಪಾತವು ಆಧಾರ ವರ್ಷದಿಂದ (ನೈಜ *GDP* ಯನ್ನು ಲೆಕ್ಕಚಾರ ಮಾಡಲು ಬಳಸಲಾಗುವ ವರ್ಷ) ಈ ಪ್ರಸಕ್ತ ವರ್ಷಕ್ಕೆ ಬೆಲೆಗಳು ಹೇಗೆ ಬದಲಾಗಿವೆ ಎಂಬುದರ ಬಗ್ಗೆ ಒಂದು ಕಲ್ಪನೆಯನ್ನು ನೀಡುತ್ತದೆ ಎಂಬುದನ್ನು ಗಮನಿಸಬೇಕಾಗಿದೆ. ಪ್ರಸಕ್ತ ವರ್ಷದ ನೈಜ ಮತ್ತು ನಾಮಮಾತ್ರ *GDP*ಯ ಲೆಕ್ಕಾಚಾರದಲ್ಲಿ ಉತ್ಪಾದನೆಯ ಪ್ರಮಾಣವನ್ನು ಸ್ಥಿರಗೊಳಿಸಲಾಗಿದೆ. ಆದ್ದರಿಂದ, ಈ ಮಾಪನಗಳು ವ್ಯತ್ಯಾಸಗೊಂಡರೆ ಇದು ಆಧಾರ ವರ್ಷ ಮತ್ತು ಪ್ರಸಕ್ತ ವರ್ಷದ ನಡುವಿನ ಬೆಲೆಯ ಮಟ್ಟದ ನಡುವಿನ ಬದಲಾವಣೆಯ ಕಾರಣದಿಂದಾಗಿದೆ. ನೈಜ *GDP* ಮತ್ತು ನಾಮಮಾತ್ರದ *GDP*ಯ ಅನುಪಾತವು ಒಂದು ಜನಪ್ರಿಯ ಬೆಲೆಗಳ ಸೂಚಿಯಾಗಿದೆ. ಇದನ್ನು *GDP*ಯ **ಅನಪ್ರಸರಣಕ (Deflator)** ಎಂದು ಕರೆಯಲಾಗುತ್ತದೆ. ಹಾಗಾಗಿ *GDP* ನಾಮಮಾತ್ರ *GDP*ಯನ್ನು ಸೂಚಿಸಿದರೆ, gdp ಯು ನೈಜ *GDP*ಯನ್ನು ಸೂಚಿಸುತ್ತದೆ. ಆಗ *GDP* ಅನಪ್ರಸರಣಕ $=\dfrac{GDP}{gdp}$

ಕೆಲವೊಮ್ಮೆ ಅನಪ್ರಸರಣಕವನ್ನು ಸಹ ಶೇಕಡಾವಾರು ಪದಗಳಲ್ಲಿ ಸೂಚಿಸಲಾಗುತ್ತದೆ. ಅಂತಹ ಸಂದರ್ಭದಲ್ಲಿ

$$\text{ಅನಪ್ರಸರಣಕ} = \frac{GDP}{gdp} \times 100$$

ಹಿಂದಿನ ಉದಾಹರಣೆಯಲ್ಲಿ *GDP* ಅನಪ್ರಸರಣಕ $\dfrac{1,650}{1100} = 1.5$ ಆಗಿದೆ.

(ಶೇಕಡಾವಾರು ಪದಗಳಲ್ಲಿ ಇದು ಶೇಕಡಾ 150)

ಇದು 2000 ದಲ್ಲಿ ತಯಾರಿಸಿದ ಬ್ರೆಡ್ಡಿನ (ರೊಟ್ಟಿಯ) ಬೆಲೆಯು 2001 ರಲ್ಲಿ 1.5 ಪಟ್ಟು ಹೆಚ್ಚಾಗಿತ್ತು ಎಂಬುದನ್ನು ಸೂಚಿಸುತ್ತದೆ. ಇದು ನಿಜವಾಗಿದ್ದು, ಬ್ರೆಡ್ ಬೆಲೆ ವಾಸ್ತವವಾಗಿ ₹ 10 ರಿಂದ 15 ಕ್ಕೆ ಏರಿಕೆಯಾಗಿದೆ. *GDP*ಯ ಅನಪ್ರಸರಣಕದಂತೆ (*deflator*) ನಾವು *GNP*ಯ ಅನಪ್ರಸರಣಕವನ್ನು (*deflator*) ಸಹ ಹೊಂದಬಹುದು.

ಅರ್ಥಿಕತೆಯಲ್ಲಿ ಬೆಲೆಗಳ ಬದಲಾವಣೆಯನ್ನು ಅಳೆಯಲು ಇನ್ನೊಂದು ವಿಧಾನವಿದೆ. ಅದನ್ನು **ಗ್ರಾಹಕ ಬೆಲೆ ಸೂಚ್ಯಂಕ** (*CPI*) ಎಂದು ಕರೆಯಲಾಗುತ್ತದೆ. ಇದು ಪ್ರಾತಿನಿಧಿಕ ಅನುಭೋಗಿಯು ಕೊಂಡುಕೊಳ್ಳಬಹುದಾದ ಒಂದು ನೀಡಲಾದ ಸರಕುಗಳ ಬುಟ್ಟಿಯ ಬೆಲೆಗಳ ಸೂಚ್ಯಾಂಕವಾಗಿದೆ. ಸಾಮಾನ್ಯವಾಗಿ *CPI*ಯನ್ನು ಶೇಕಡಾವಾರು ಪದಗಳಲ್ಲಿ ವ್ಯಕ್ತಪಡಿಸಲಾಗುತ್ತದೆ. ನಮ್ಮ ಪರಿಗಣನೆಯಲ್ಲಿ 2 ವರ್ಷಗಳಿವೆ. ಒಂದು ಆಧಾರ ವರ್ಷ, ಇನ್ನೊಂದು ಚಾಲ್ತಿ ವರ್ಷ. ಒಂದು ನೀಡಲಾದ ಸರಕುಗಳ ಬುಟ್ಟಿಯನ್ನು ಖರೀದಿಸುವ ವೆಚ್ಚವನ್ನು ಆಧಾರ ವರ್ಷದಲ್ಲಿ ನಾವು ಲೆಕ್ಕಚಾರ ಮಾಡುತ್ತೇವೆ. ನಾವು ಪ್ರಸ್ತುತ ವರ್ಷದಲ್ಲಿ ಅದೇ ಬುಟ್ಟಿಯನ್ನು ಖರೀದಿಸುವ ವೆಚ್ಚವನ್ನು ಸಹ ಲೆಕ್ಕ ಹಾಕುತ್ತೇವೆ. ಆಮೇಲೆ ನಾವು ಚಾಲ್ತಿ ವರ್ಷದ ಲೆಕ್ಕಾಚಾರವನ್ನು, ಆಧಾರ ವರ್ಷದ ಲೆಕ್ಕಚಾರಕ್ಕೆ, ಶೇಕಡವಾರು ರೂಪದಲ್ಲಿ ವ್ಯಕ್ತಪಡಿಸುತ್ತೇವೆ. ಮೂಲ ಆಧಾರ ವರ್ಷದ ಮುಖಾಮುಖಿಯಾಗಿ ಇದು ನಮಗೆ ಪ್ರಸ್ತುತ ವರ್ಷದ ಅನುಭೋಗಿ ಬೆಲೆ ಸೂಚ್ಯಂಕವನ್ನು ನೀಡುತ್ತದೆ. ಉದಾಹರಣೆಗೆ, ನಾವು ಎರಡು ಸರಕುಗಳನ್ನು ಅಕ್ಕಿ ಮತ್ತು ಉಡುಪು ಉತ್ಪಾದಿಸುವ ಆರ್ಥಿಕತೆಯನ್ನು ತೆಗೆದುಕೊಳ್ಳೋಣ. ಒಬ್ಬ ಪ್ರಾತಿನಿಧಿಕ ಅನುಭೋಗಿಯು ಒಂದು ವರ್ಷದಲ್ಲಿ

90 ಕೆ.ಜಿ. ಯಷ್ಟು ಅಕ್ಕಿ ಮತ್ತು 5 ಉಡುಪುಗಳನ್ನು ಖರೀದಿಸುತ್ತಾನೆ. 2000ದ ಇಸುವಿಯಲ್ಲಿ ಒಂದು ಕಿ.ಗ್ರಾಂ. ಅಕ್ಕಿ ಬೆಲೆಯು ₹ 10 ಮತ್ತು ಒಂದು ಉಡುಪಿನ ಬೆಲೆ ₹ 100 ಆಗಿತ್ತು ಎಂದು ಕೊಳ್ಳೋಣ.

ಆದ್ದರಿಂದ ಅನುಭೋಗಿಯು ಅಕ್ಕಿಯ ಮೇಲೆ ₹ 10 × 90 = ₹ 900 ಅನ್ನು ಹಾಗೆಯೇ ಉಡುಪಿನ ಮೇಲೆ ₹ 100 × 5 = ₹ 500 ಅನ್ನು ಒಂದು ವರ್ಷದಲ್ಲಿ ವೆಚ್ಚ ಮಾಡಬೇಕಾಗಿತ್ತು ಈ ಎರಡು ವಸ್ತುಗಳ ಮೇಲಿನ ವೆಚ್ಚದ ಒಟ್ಟು ಮೊತ್ತವು ₹ 900 + ₹ 500 = ₹ 1400 ಆಗಿದೆ. ಈಗ 2005 ರಲ್ಲಿ ಒಂದು ಕಿ.ಗ್ರಾಂ. ಅಕ್ಕಿ ಮತ್ತು ಒಂದು ಉಡುಪಿನ ಬೆಲೆ ಕ್ರಮವಾಗಿ ₹ 15 ಮತ್ತು ₹ 120 ಕ್ಕೆ ಏರಿಕೆಯಾದರೆ, ಅದೇ ಪ್ರಮಾಣದ ಅಕ್ಕಿ ಮತ್ತು ಉಡುಪುಗಳನ್ನು ಖರೀದಿಸಲು ಪ್ರತಿಯೊಬ್ಬನೂ ₹ 1,350 ಮತ್ತು ₹. 600 ಗಳನ್ನು ಖರ್ಚು ಮಾಡಬೇಕಾಗುತ್ತದೆ (ಮೊದಲಿನಂತೆಯೇ ಲೆಕ್ಕ ಹಾಕಲಾಗಿದೆ) ಅವುಗಳ ಮೊತ್ತವು ₹ 1,350 + ₹ 600 = ₹ 1,950 ಆಗಿರುತ್ತದೆ. ಆದ್ದರಿಂದ

$$CPI = \frac{1,950}{1,400} \times 100 = 139.29$$ ಆಗುತ್ತದೆ (ಸರಿಸುಮಾರು).

ಅನೇಕ ಸರಕುಗಳಿಗೆ ಎರಡು ಬೆಲೆಗಳಿವೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಒಬ್ಬ ಗ್ರಾಹಕ ವಾಸ್ತವವಾಗಿ ಪಾವತಿಸುವ ಬೆಲೆಯನ್ನು **ಚಿಲ್ಲರೆ ಬೆಲೆ**ಯೆನ್ನುತ್ತೇವೆ. ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ಮಾಡುವ ಬೆಲೆಯನ್ನು **ಸಗಟು ಬೆಲೆ** ಎನ್ನುತ್ತೇವೆ. ವ್ಯಾಪಾರಿಗಳು ಮಿತಿಯನ್ನು (ಲಾಭ) ಇಟ್ಟುಕೊಂಡಿರುವುದರಿಂದ ಈ ಎರಡರ ಮೌಲ್ಯವು ಭಿನ್ನವಾಗಿರಬಹುದು. ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುವ ಸರಕುಗಳನ್ನು (ಕಚ್ಚಾ ವಸ್ತುಗಳು ಅಥವಾ ಅರೆ ಸಿದ್ಧಪಡಿಸಿದ ಸರಕುಗಳಂತಹವು) ಸಾಮಾನ್ಯ ಅನುಭೋಗಿಗಳು ಖರೀದಿಸುವುದಿಲ್ಲ

*CPI* ನಂತೆ, ಸಗಟು ಬೆಲೆಯ ಈ ಸೂಚ್ಯಂಕವನ್ನು ಸಗಟು ಬೆಲೆ ಸೂಚ್ಯಂಕ (*WPI*)ಎಂದು ಕರೆಯಲಾಗುತ್ತದೆ. *USA* ನಂತಹ ದೇಶಗಳಲ್ಲಿ ಇದನ್ನು ಉತ್ಪಾದಕ ಬೆಲೆ ಸೂಚ್ಯಂಕ (*PPI*) ಎಂದು ಉಲ್ಲೇಖಿಸಲಾಗುತ್ತದೆ. *CPI* (ಮತ್ತು ಸಮಾನವಾಗಿ *WPI*) *GDP* ಅನಪ್ರಸರಣಕಕ್ಕಿಂತ ವಿಭಿನ್ನವಾಗಿರಬಹುದು ಏಕೆಂದರೆ,

1. ಅನುಭೋಗಿಗಳು ಖರೀದಿಸಿದ ಸರಕುಗಳು ಒಂದು ದೇಶದಲ್ಲಿ ಉತ್ಪತ್ತಿಯಾಗುವ ಎಲ್ಲ ಸರಕುಗಳನ್ನು ಪ್ರತಿನಿಧಿಸುವುದಿಲ್ಲ. *GDP* ಅನಪ್ರಸರಣಕವು ಇಂತಹ ಎಲ್ಲಾ ಸರಕು ಮತ್ತು ಸೇವೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.
2. *CPI* ಪ್ರಾತಿನಿಧಿಕ ಅನುಭೋಗಿ ಅನುಭೋಗಿಸಿದ ಸರಕುಗಳ ಬೆಲೆಗಳನ್ನು ಒಳಗೊಂಡಿದೆ. ಆದ್ದರಿಂದ ಇದು ಆಮದು ಮಾಡಿಕೊಂಡ ಸರಕುಗಳ ಬೆಲೆಗಳನ್ನು ಒಳಗೊಂಡಿದೆ. *GDP* ಅನಪ್ರಸರಣಕವು ಆಮದು ಮಾಡಿದ ಸರಕುಗಳ ಬೆಲೆಗಳನ್ನು ಒಳಗೊಂಡಿರುವುದಿಲ್ಲ.
3. ತೂಕಗಳು *CPI* ನಲ್ಲಿ ಸ್ಥಿರವಾಗಿರುತ್ತವೆ, ಆದರೆ *GDP* ಅನಪ್ರಸರಣಕದಲ್ಲಿ ಪ್ರತಿಯೊಂದು ಸರಕಿನ ಉತ್ಪಾದನಾ ಮಟ್ಟದಂತೆ ಅವು ಬದಲಾಗುತ್ತದೆ.

## 2.5 *GDP* ಮತ್ತು ಯೋಗಕ್ಷೇಮ *GDP And Welfare*

ಒಂದು ದೇಶದ ಜನರ ಯೋಗಕ್ಷೇಮ ಸೂಚಕವಾಗಿ *GDP*ಯನ್ನು ತೆಗೆದುಕೊಳ್ಳಬಹುದೇ? ಒಬ್ಬ ವ್ಯಕ್ತಿಯು ಅಧಿಕ ಆದಾಯವನ್ನು ಹೊಂದಿದ್ದರೆ ಆ ವ್ಯಕ್ತಿಯು ಹೆಚ್ಚು ಸರಕು ಮತ್ತು ಸೇವೆಗಳನ್ನು ಖರೀದಿಸಬಹುದು. ಮತ್ತು ಅವನ ಅಥವಾ ಅವಳ ಭೌತಿಕ ಕಲ್ಯಾಣ ಉತ್ತಮಗೊಳ್ಳುತ್ತದೆ. ಆದುದರಿಂದ ಆತನ/ಆಕೆಯ ಆದಾಯದ ಮಟ್ಟವನ್ನು ಆತನ/ಆಕೆಯ ಯೋಗಕ್ಷೇಮದ ಮಟ್ಟವೆಂದು ಪರಿಗಣಿಸುವುದು ಸಮಂಜಸವಾಗಿ ಕಾಣಬಹುದು. *GDP*ಯು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಭೌಗೋಳಿಕ ಗಡಿಯೊಳಗೆ ನಿರ್ಮಿಸಿದ ಒಟ್ಟು ಸರಕು ಮತ್ತು ಸೇವೆಗಳ ಮೌಲ್ಯದ ಮೊತ್ತವಾಗಿದೆ. ಇದು ಜನರಲ್ಲಿ ಆದಾಯದ ರೂಪದಲ್ಲಿ (ಉಳಿಸಿಕೊಂಡಿರುವ ಸಂಪಾದನೆಗಳನ್ನು ಹೊರತುಪಡಿಸಿ) ಹಂಚಿಕೆಯಾಗುತ್ತದೆ. ಆದುದರಿಂದ ನಾವು ಒಂದು ದೇಶದ ಅಧಿಕ ಮಟ್ಟದ *GDP*ಯನ್ನು ಆ ದೇಶದ ಜನರ ಅತ್ಯಧಿಕ ಯೋಗಕ್ಷೇಮದ ಸೂಚ್ಯಾಂಕವೆಂದು ಪರಿಗಣಿಸಲು ಪ್ರಲೋಭನೆಗೆ ಒಳಗಾಗಬಹುದು. (ಬೆಲೆ ಬದಲಾವಣೆಯ ಲೆಕ್ಕವಿಡಲು ನಾವು ನಾಮಮಾತ್ರ *GDP* ಬದಲು

ನೈಜ *GDP*ಯ ಮೌಲ್ಯವನ್ನು ತೆಗೆದು ಕೊಳ್ಳುತ್ತೇವೆ). ಆದರೆ ಇದು ಏಕೆ ಸರಿಯಲ್ಲ ಎಂಬುದಕ್ಕೆ ಕನಿಷ್ಠ ಮೂರು ಕಾರಣಗಳಿವೆ.

1. ***GDP*ಯ ವಿತರಣೆ – ಇದು ಹೇಗೆ ಏಕರೂಪವಾಗಿದೆ:** ಒಂದು ವೇಳೆ ದೇಶದ *GDP* ಏರಿಕೆಯಾದರೆ, ಅದರ ಪರಿಣಾಮವಾಗಿ ಯೋಗಕ್ಷೇಮವು ಹೆಚ್ಚಾಗದಿರಬಹುದು. ಇದು ಏಕೆಂದರೆ *GDP* ಯಲ್ಲಿನ ಹೆಚ್ಚಳ ಕೆಲವೇ ವ್ಯಕ್ತಿಗಳ ಅಥವಾ ಉದ್ಯಮ ಘಟಕಗಳ ಕೈಯಲ್ಲಿ ಕೇಂದ್ರೀಕೃತವಾಗಿರಬಹುದು. ಉಳಿದಂತೆ ವಾಸ್ತವವಾಗಿ ಆದಾಯವು ಕುಸಿದಿರಬಹುದು. ಅಂತಹ ಸಂದರ್ಭದಲ್ಲಿ ಇಡೀ ದೇಶದ ಯೋಗಕ್ಷೇಮವು ಹೆಚ್ಚಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ 2000 ಇಸವಿಯಲ್ಲಿ ಒಂದು ಕಾಲ್ಪನಿಕ ದೇಶದಲ್ಲಿನ ಜನಸಂಖ್ಯೆ 100 ಆಗಿದ್ದು ತಲಾ ₹ 10 ನ್ನು ಸಂಪಾದಿಸುತ್ತಿದ್ದರು ಎಂದು ಕೊಳ್ಳೋಣ. ಆದ್ದರಿಂದ ದೇಶದ *GDP*ಯು ₹ 1,000 ಆಗಿತ್ತು (ಆದಾಯದ ವಿಧಾನದಿಂದ). 2001ನೇ ಇಸವಿಯಲ್ಲಿ ಅದೇ ದೇಶದಲ್ಲಿ 90 ವ್ಯಕ್ತಿಗಳು ತಲಾ ₹ 9 ಗಳನ್ನು ಸಂಪಾದಿಸುತ್ತಿದ್ದು ಮತ್ತು ಉಳಿದ 10 ವ್ಯಕ್ತಿಗಳು ತಲಾ ₹ 20 ಸಂಪಾದಿಸುತ್ತಿದ್ದರು ಎಂದು ಕೊಳ್ಳೋಣ. ಈ ಎರಡು ಅವಧಿಗಳ ನಡುವೆ ಸರಕು ಮತ್ತು ಸೇವೆಗಳ ಬೆಲೆಗಳಲ್ಲಿ ಯಾವುದೇ ಬದಲಾವಣೆಗಳಿಲ್ಲವೆಂದುಕೊಳ್ಳೋಣ. 2001 ರಲ್ಲಿ ದೇಶದ *GDP* ಯು 90 × (₹ 9) + 10 × (₹ 20) = ₹ 810 + ₹ 200 = ₹ 1,010 ಆಗಿದ್ದು ಇದನ್ನು 2000ಇಸವಿಗೆ ಹೋಲಿಸಿದರೆ 2001 ರಲ್ಲಿ ದೇಶದ *GDP* ಯು ₹ 10 ರಷ್ಟು ಹೆಚ್ಚಾಗಿರುವುದನ್ನು ಗಮನಿಸಿ.

   ಆದರೆ ದೇಶದ ಶೇ. 90ರಷ್ಟು ಜನರ ನೈಜ ಆದಾಯವು ಶೇ. 10ರಷ್ಟು (₹ 10ರಿಂದ ₹ 9ಕ್ಕೆ) ಇಳಿಕೆಯನ್ನು ಕಂಡಾಗ ಇದು ಸಂಭವಿಸಿದೆ ಮತ್ತು ಶೇ. 10ರಷ್ಟು ಜನರು ಮಾತ್ರ ಅದರ ಆದಾಯದ ಶೇ. 100ರಷ್ಟು (₹ 10ರಿಂದ ₹ 20) ಹೆಚ್ಚಳದ ಲಾಭವನ್ನು ಪಡೆದುಕೊಂಡಿದ್ದಾರೆ. ದೇಶದ *GDP*ಯಲ್ಲಿ ಹೆಚ್ಚಳವಾದಾಗ್ಯೂ, ಶೇ. 90ರಷ್ಟು ಜನರ ಪರಿಸ್ಥಿತಿಯು ಕೆಳಕ್ಕಿಳಿದಿದೆ.

   ಪರಿಸ್ಥಿತಿ ಉತ್ತಮಗೊಂಡ ಜನರ ಶೇಕಡಾವಾರನ್ನು, ದೇಶದ ಯೋಗಕ್ಷೇಮ ಸುಧಾರಣೆಗೆ ಹೋಲಿಸಿದರೆ *GDP*ಯು ಖಂಡಿತವಾಗಿಯೂ ಒಂದು ಉತ್ತಮ ಸೂಚ್ಯಾಂಕವಾಗಲಾರದು.

2. **ವಿತ್ತೀಯವಲ್ಲದ ವಿನಿಮಯಗಳು:** ಆರ್ಥಿಕತೆಯಲ್ಲಿ ಅನೇಕ ಚಟುವಟಿಕೆಗಳು ಹಣದ ಮೂಲಕ (ವಿತ್ತೀಯ) ಮಾಪನಕ್ಕೆ ಒಳಗಾಗುವುದಿಲ್ಲ. ಉದಾಹರಣೆಗೆ, ಮನೆಯಲ್ಲಿ ಮಹಿಳೆಯರು ನಿರ್ವಹಿಸುವ ಗೃಹಕೃತ್ಯ ಸೇವೆಗಳಿಗೆ ಹಣ ಪಾವತಿಸಲಾಗುವುದಿಲ್ಲ. ಹಣದ ಸಹಾಯವಿಲ್ಲದೇ ಅನೌಪಚಾರಿಕ ವಲಯದಲ್ಲಿ ನಡೆಯುವ ವಿನಿಮಯ ಪದ್ಧತಿಯನ್ನು ಸಾಟಿ ವಿನಿಮಯ ಪದ್ಧತಿ ಎಂದು ಕರೆಯಲಾಗುತ್ತದೆ. ವಿನಿಮಯದಲ್ಲಿ ಸರಕುಗಳನ್ನು (ಅಥವಾ ಸೇವೆಗಳು) ನೇರವಾಗಿ ಸರಕುಗಳಿಗೆ ವಿನಿಮಯಮಾಡಲಾಗುತ್ತದೆ. ಆದರೆ ಹಣವನ್ನು ಬಳಸದೆ ಇರುವುದರಿಂದ, ಈ ವಿನಿಮಯಗಳನ್ನು ಆರ್ಥಿಕ ಚಟುವಟಿಕೆಯ ಭಾಗವಾಗಿ ನೋಂದಾಯಿಸಲಾಗಿರುವುದಿಲ್ಲ ಅಭಿವೃದ್ಧಿಶೀಲ ದೇಶಗಳಲ್ಲಿ, ಅನೇಕ ಹಿಂದುಳಿದ ಪ್ರದೇಶಗಳಲ್ಲಿ ಈ ರೀತಿಯ ವಿನಿಮಯ ನಡೆಯುತ್ತದೆ, ಆದರೆ ಅವುಗಳನ್ನು ಸಾಮಾನ್ಯವಾಗಿ ಆ ದೇಶಗಳ *GDP*ಗಳಲ್ಲಿ ಪರಿಗಣಿಸಲಾಗುವುದಿಲ್ಲ. ಇದು ಒಂದು *GDP*ಯ ಕಡಿಮೆ ಅಂದಾಜಿನ ಪ್ರಕರಣವಾಗುತ್ತದೆ. ಆದ್ದರಿಂದ ಪ್ರಮಾಣಿತ ರೀತಿಯಲ್ಲಿ ಲೆಕ್ಕ ಹಾಕಿದ *GDP*ಯು ಆ ದೇಶದ ಉತ್ಪಾದನಾ ಚಟುವಟಿಕೆ ಮತ್ತು ಯೋಗಕ್ಷೇಮದ ಸ್ಪಷ್ಟ ಸೂಚನೆಯನ್ನು ಕೊಡದಿರಬಹುದು.




*GDP* ಹಂಚಿಕೆಯು ಹೇಗೆ ಏಕಪ್ರಕಾರವಾಗುತ್ತದೆ? ಈಗಲೂ ಬಹುತೇಕ ಜನರು ಬಡವರಾಗಿದ್ದು ಕೆಲವರು ಲಾಭಪಡೆದವರಾಗಿ–ದ್ದಾರೆಂದು ಕಾಣುತ್ತದೆ.

3. **ಬಾಹ್ಯತೆಗಳು:** ಒಂದು ಉದ್ಯಮ ಘಟಕವು ಇನ್ನೊಂದು ಉದ್ಯಮ ಘಟಕಕ್ಕೆ ಅಥವಾ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಮಾಡುವ ಪ್ರಯೋಜನ (ಅಥವಾ ಹಾನಿಗಳು)ಗಳಿಗೆ ಬಾಹ್ಯತೆಗಳೆನ್ನುವರು ಇದಕ್ಕಾಗಿ ಅವರು (ಪ್ರಯೋಜನ ಪಡೆದ ಘಟಕಗಳು ಅಥವಾ ವ್ಯಕ್ತಿಗಳು) ಏನನ್ನೂ ಪಾವತಿಸಿರುವುದಿಲ್ಲ. ಹಾಗೆಯೇ ಹಾನಿಉಂಟಾದರೆ ತೊಂದರೆ ನೀಡಿದ ಘಟಕಗಳು ಅಥವಾ ವ್ಯಕ್ತಿಗಳು ಯಾವುದೇ ದಂಡ ನೀಡಿರುವುದಿಲ್ಲ ಬಾಹ್ಯತೆಗಳನ್ನು ಮಾರಲು ಮತ್ತು ಕೊಳ್ಳಲು ಯಾವುದೇ ಮಾರುಕಟ್ಟೆ ಇರುವುದಿಲ್ಲ. ಉದಾಹರಣೆಗೆ, ತೈಲ ಸಂಸ್ಕರಣಾಗಾರವು ಕಚ್ಚಾ ಪೆಟ್ರೋಲ್ ಅನ್ನು ಶುದ್ಧೀಕರಿಸುತ್ತದೆ ಮತ್ತು ಅದನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ ಎಂದು ಭಾವಿಸೋಣ. ಸಂಸ್ಕರಣಾಗಾರವು ಶುದ್ಧೀಕರಿಸಿದ ತೈಲ ಅದರ ಉತ್ಪನ್ನದ ಪ್ರಮಾಣವಾಗಿದೆ. ಸಂಸ್ಕರಣಾಗಾರವು ಬಳಸುವ ಮಧ್ಯಂತರ ಸರಕುಗಳ ಮೌಲ್ಯವನ್ನು (ಈ ಸಂದರ್ಭದಲ್ಲಿ ಕಚ್ಚಾ ತೈಲ) ಅದರ ಉತ್ಪಾದನಾ ಮೌಲ್ಯದಲ್ಲಿ ಕಳೆಯುವ ಮೂಲಕ ಶುದ್ಧೀಕರಣ ಘಟಕದ, ಮೌಲ್ಯವರ್ಧನೆಯನ್ನು ಅಂದಾಜು ಮಾಡಬಹುದು. ಶುದ್ಧೀಕರಣ ಘಟಕದ ಮೌಲ್ಯ ವರ್ಧನೆಯನ್ನು ಆರ್ಥಿಕತೆಯಲ್ಲಿ *GDP*ಯ ಭಾಗವಾಗಿ ಪರಿಗಣಿಸಬಹುದು. ಆದರೆ ಉತ್ಪಾದನೆಯನ್ನು ಕೈಗೊಳ್ಳುವಾಗ ಸಂಸ್ಕರಣಾ ಘಟಕವು ಹತ್ತಿರದ ನದಿಯನ್ನು ಕಲುಷಿತಗಳಿಸಬಹುದು. ಇದು ನದಿಯ ನೀರನ್ನು ಬಳಸುವ ಜನರಿಗೆ ಹಾನಿ ಉಂಟುಮಾಡಬಹುದು. ಆದ್ದರಿಂದ ಅವರ ಯೋಗಕ್ಷೇಮ ಕುಸಿಯುತ್ತದೆ. ಮಾಲಿನ್ಯವು, ಮೀನು ಅಥವಾ ಮೀನುಗಳಂತೆ ಬದುಕುವ ಇತರ ಜೀವಿರಾಶಿಗಳನ್ನು ಸಹ ಕೊಲ್ಲುತ್ತದೆ. ಇದರ ಪರಿಣಾಮವಾಗಿ ನದಿಯ ಮೀನುಗಾರರು ತಮ್ಮ ಜೀವನೋಪಾಯವನ್ನು ಕಳೆದುಕೊಳ್ಳಬಹುದು. ಇಂತಹ ಶುದ್ಧೀಕರಣವು ಇತರರ ಮೇಲೂ ಹಾನಿಕಾರಕ ಪರಿಣಾಮಗಳನ್ನುಂಟುಮಾಡುತ್ತದೆ, ಇದಕ್ಕಾಗಿ ಇದು ಯಾವುದೇ ವೆಚ್ಚಗಳನ್ನು ಭರಿಸುವುದಿಲ್ಲ, ಇವುಗಳನ್ನು ಬಾಹ್ಯತೆಗಳು ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ, *GDP* ಯು ಅಂತಹ ಋಣಾತ್ಮಕ ಬಾಹ್ಯತೆಗಳನ್ನು ಪರಿಗಣಿಸುವುದಿಲ್ಲ. ಆದ್ದರಿಂದ, ನಾವು *GDP*ಯನ್ನು ಆರ್ಥಿಕತೆಯ ಯೋಗಕ್ಷೇಮದ ಮಾಪನವಾಗಿ ತೆಗೆದುಕೊಂಡರೆ, ನೈಜ ಯೋಗಕ್ಷೇಮವನ್ನು ಅತಿಯಾಗಿ ಅಂದಾಜು ಮಾಡಿದಂತಾಗುವುದು. ಇದು ಋಣಾತ್ಮಕ ಬಾಹ್ಯತೆಯ ಒಂದು ಉದಾಹರಣೆಯಾಗಿದೆ. ಹಾಗೆಯೇ ಇಲ್ಲಿ ಧನಾತ್ಮಕ ಬಾಹ್ಯತೆಯ ಸನ್ನಿವೇಶಗಳೂ ಇರಬಹುದು. ಇಂತಹ ಸನ್ನಿವೇಶಗಳಲ್ಲಿ *GDP*ಯು ಆರ್ಥಿಕತೆಯ ವಾಸ್ತವ ಯೋಗಕ್ಷೇಮವನ್ನು ಕೆಳಅಂದಾಜು ಮಾಡಬಹುದು.


ಸಾರಾಂಶ ***Summary***

ಅತ್ಯಂತ ಮೂಲಭೂತ ಮಟ್ಟದಲ್ಲಿ, ಸಮಗ್ರ ಆರ್ಥಿಕತೆಯು (ಇದು ನಾವು ಸಮಗ್ರ ಅರ್ಥಶಾಸ್ತ್ರದಲ್ಲಿ ಅಧ್ಯಯನ ಮಾಡುವ ಆರ್ಥ ವ್ಯವಸ್ಥೆಗೆ ಅನ್ವಯಿಸುತ್ತದೆ) ವೃತ್ತಾಕಾರದಲ್ಲಿ ಕಾರ್ಯ ನಿರ್ವಹಿಸುವುದನ್ನು ನೋಡಬಹುದು. ಕುಟುಂಬಗಳು ಪೂರೈಸುವ ಆದಾನಗಳನ್ನು ಉದ್ಯಮಘಟಕಗಳು ಬಳಸಿಕೊಂಡು ಸರಕು ಮತ್ತು ಸೇವೆಗಳನ್ನು ಉತ್ಪಾದಿಸುತ್ತವೆ ಮತ್ತು ಕುಟುಂಬಗಳಿಗೆ ಮಾರಾಟ ಮಾಡುತ್ತವೆ. ಕುಟುಂಬಗಳು ತಾವು ಸಲ್ಲಿಸಿದ ಸೇವೆಗಳಿಗಾಗಿ ಉದ್ಯಮ ಘಟಕಗಳಿಂದ ಸಂಭಾವನೆ ಪಡೆಯುತ್ತವೆ ಮತ್ತು ಉದ್ಯಮ ಘಟಕಗಳು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಖರೀದಿಸುತ್ತವೆ. ಆದ್ದರಿಂದ ಆರ್ಥಿಕತೆಯಲ್ಲಿ ಉತ್ಪಾದನೆಯಾದ ಸರಕುಗಳು ಮತ್ತು ಸೇವೆಗಳ ಸಮಗ್ರ ಮೌಲ್ಯಗಳನ್ನು ಮೂರು ವಿಧಾನಗಳಲ್ಲಿ ಯಾವುದೇ ವಿಧಾನದಿಂದ ಲೆಕ್ಕಾಚಾರ ಮಾಡಬಹುದು. (ಎ) ಉತ್ಪಾದನಾಂಗಗಳ ಪಾವತಿಗಳ ಸಮಗ್ರ ಮೌಲ್ಯವನ್ನು (ಆದಾಯ ವಿಧಾನ) ಮಾಪನ ಮಾಡುವುದು. (ಬಿ) ಉದ್ಯಮ ಘಟಕಗಳು ಉತ್ಪಾದಿಸಿದ ಒಟ್ಟು ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಮಾಪನ ಮಾಡುವುದು (ಉತ್ಪನ್ನ ವಿಧಾನ)(ಸಿ) ಉದ್ಯಮ ಘಟಕಗಳಿಂದ ಸ್ವೀಕರಿಸಿದ ವೆಚ್ಚದ ಸಮಗ್ರ ಮೌಲ್ಯವನ್ನು ಮಾಪನಮಾಡುವುದು.(ವೆಚ್ಚದ ವಿಧಾನ). ಉತ್ಪನ್ನ ವಿಧಾನದಲ್ಲಿ, ದ್ವಿ ಎಣಿಕೆಯನ್ನು ತಪ್ಪಿಸಲು, ನಾವು ಮಧ್ಯಂತರ ಸರಕುಗಳ ಮೌಲ್ಯವನ್ನು ಕಳೆಯಬೇಕಾಗಿದೆ ಮತ್ತು ಅಂತಿಮ ಸರಕು ಮತ್ತು ಸೇವೆಗಳ ಸಮಗ್ರ ಮೌಲ್ಯವನ್ನು ಮಾತ್ರ ಗಣನೆಗೆತೆಗೆದುಕೊಳ್ಳಬೇಕು ಪ್ರತಿಯೊಂದು ವಿಧಾನಗಳ ಮೂಲಕ ಆರ್ಥಿಕತೆಯ ಸಮಗ್ರ ಆದಾಯವನ್ನು ಲೆಕ್ಕಚಾರ

ಮಾಡಲು ಸೂತ್ರಗಳನ್ನು ಪಡೆಯುತ್ತೇವೆ. ಹೂಡಿಕೆಯನ್ನು ಮಾಡಲು ಸರಕುಗಳನ್ನು ಸಹ ಖರೀದಿಸಬಹುದೆಂಬುದನ್ನು ನಾವು ಗಮನಿಸಬಹುದು ಮತ್ತು ಈ ಹೂಡಿಕೆಗಳು ಉದ್ಯಮ ಘಟಕಗಳ ಉತ್ಪಾದನಾ ಸಾಮರ್ಥ್ಯಕ್ಕೆ ಸೇರುತ್ತವೆ. ಇವುಗಳ ಒದಗಣೆಯನ್ನು ಅವಲಂಬಿಸಿರುವ ಸಮಗ್ರ ಆದಾಯವು ವಿವಿಧ ವರ್ಗಗಳಾಗಿರಬಹುದು. ನಾವು *GDP*, *GNP*, ಮಾರುಕಟ್ಟೆ ಬೆಲೆಯಲ್ಲಿ *NNP* ಮತ್ತು ಉತ್ಪಾದನಾಂಗದ ವೆಚ್ಚದಲ್ಲಿ *NNP*, *PI* ಮತ್ತು *PDI* ನಡುವಿನ ವ್ಯತ್ಯಾಸಗಳನ್ನು ಸೂಚಿಸಿದ್ದೇವೆ. ಸರಕು ಮತ್ತು ಸೇವೆಗಳ ಬೆಲೆಗಳು ವ್ಯತ್ಯಾಸಗೊಳ್ಳುವುದರಿಂದ, ನಾವು ಮೂರು ಪ್ರಮುಖ ಬೆಲೆ ಸೂಚ್ಯಂಕಗಳನ್ನು (*GDP* ಯ ಅನಪ್ರಸರಣಕ *CPI*, *WPI*) ಹೇಗೆ ಲೆಕ್ಕ ಹಾಕಬೇಕೆಂದು ಚರ್ಚಿಸಿದ್ದೇವೆ. ಅಂತಿಮವಾಗಿ ದೇಶದ ಯೋಗಕ್ಷೇಮದ ಸೂಚ್ಯಂಕವಾಗಿ *GDP* ಯನ್ನು ಪರಿಗಣಿಸುವುದು ತಪ್ಪಾಗಬಹುದು.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಅಂತಿಮ ಸರಕುಗಳು | ಅನುಭೋಗಿ ಸರಕುಗಳು |
| ಗ್ರಾಹಕರ ಬಾಳಿಕೆಗಳು | ಬಂಡವಾಳ ಸರಕುಗಳು |
| ಮಧ್ಯಂತರ ಸರಕುಗಳು | ದಾಸ್ತಾನುಗಳು |
| ಹರಿವುಗಳು | ಒಟ್ಟು ಹೂಡಿಕೆ |
| ನಿವ್ವಳ ಹೂಡಿಕೆಗಳು | ಸವಕಳಿ |
| ಕೂಲಿ | ಬಡ್ಡಿ |
| ಲಾಭ | ಗೇಣಿ |
| ಆದಾಯದ ವೃತ್ತಾಕಾರದ ಚಲನೆ | ರಾಷ್ಟ್ರೀಯ ಆದಾಯದ ಲೆಕ್ಕಾಚಾರದ ಉತ್ಪಾದನಾ ವಿಧಾನ |
| ರಾಷ್ಟ್ರೀಯ ಆದಾಯದ ಲೆಕ್ಕಚಾರದ ವೆಚ್ಚದ ವಿಧಾನ | ರಾಷ್ಟ್ರೀಯ ಆದಾಯದ ಲೆಕ್ಕಾಚಾರದ ಆದಾಯದ ವಿಧಾನ |
| ಸಮಗ್ರ ಆರ್ಥಿಕತೆಯ ಮಾದರಿ | ಆದಾನ |
| ಮೌಲ್ಯ ವರ್ಧಿತ | ತಪಶೀಲುಪಟ್ಟಿ |
| ತಪಶೀಲುಗಳಲ್ಲಿನ ಯೋಜಿತ ಬದಲಾವಣೆ | ಯೋಜಿತವಲ್ಲದ ದಾಸ್ತಾನುಗಳಲ್ಲಿನ ಬದಲಾವಣೆ |
| ಒಟ್ಟು ದೇಶೀಯ ಉತ್ಪನ್ನ (*GDP*) | ನಿವ್ವಳ ದೇಶೀಯ ಉತ್ಪನ್ನ (*NDP*) |
| ಒಟ್ಟು ರಾಷ್ಟ್ರೀಯ ಉತ್ಪನ್ನ (*GNP*) | ನಿವ್ವಳ ರಾಷ್ಟ್ರೀಯ ಉತ್ಪನ್ನ (*NNP*) (ಮಾರುಕಟ್ಟೆಬೆಲೆಗಳಲ್ಲಿ) |
| *NNP* (ಉತ್ಪಾದನಾಂಗಗಳ ವೆಚ್ಚದಲ್ಲಿ) ಅಥವಾ ರಾಷ್ಟ್ರೀಯ ಆದಾಯ (*NI*) | ವಿತರಣೆಯಾಗದ ಆದಾಯಗಳು |
| ಕುಟುಂಬಗಳು ಮಾಡಿದ ನಿವ್ವಳ ಬಡ್ಡಿಯ ಪಾವತಿಗಳು | ಕಂಪನಿ ತೆರಿಗೆ |
| ಸರ್ಕಾರ ಹಾಗೂ ಉದ್ಯಮ ಘಟಕಗಳಿಂದ ಕುಟುಂಬಗಳಿಗೆ ಮಾಡಿದ ವರ್ಗಾವಣೆ ಪಾವತಿಗಳು | ವೈಯಕ್ತಿಕ ಆದಾಯ (*PI*) |
| ವೈಯಕ್ತಿಕ ತೆರಿಗೆ ಪಾವತಿಗಳು | ತೆರಿಗೆ ರಹಿತ ಪಾವತಿಗಳು |

| | |
|---|---|
| ವೈಯಕ್ತಿಕ ವೆಚ್ಚ ಮಾಡಬಹುದಾದ ಆದಾಯ | ರಾಷ್ಟ್ರೀಯ ವೆಚ್ಚ ಮಾಡಬಹುದಾದ ಆದಾಯ |
| ಖಾಸಗಿ ಆದಾಯ | ನಾಮಮಾತ್ರ *GDP* |
| ನೈಜ *GDP* | ಆಧಾರ ವರ್ಷ |
| *GDP* ಅನಪ್ರಸರಣಕ | ಅನುಭೋಗಿ ಬೆಲೆ ಸೂಚ್ಯಂಕ(*CPI*) |
| ಸಗಟು ಬೆಲೆ ಸೂಚ್ಯಂಕ (*WPI*) | ಬಾಹ್ಯತೆಗಳು |

1. ಉತ್ಪಾದನೆಯ ನಾಲ್ಕು ಅಂಗಗಳಾವುವು ? ಮತ್ತು ಇವುಗಳಲ್ಲಿ ಪ್ರತಿಯೊಂದಕ್ಕೆ ನೀಡುವ ಸಂಭಾವನೆಯನ್ನು ಏನೆಂದು ಕರೆಯುತ್ತಾರೆ ?
2. ಆರ್ಥಿಕತೆಯ ಒಟ್ಟು ಅಂತಿಮ ವೆಚ್ಚವು ಒಟ್ಟು ಉತ್ಪಾದನಾಂಗಗಳ ಪಾವತಿಗೆ ಏಕೆ ಸಮನಾಗಿರಬೇಕು ? ವಿವರಿಸಿ.
3. ಸಂಗ್ರಹ ಮತ್ತು ಹರಿವಿನ ನಡುವಿನ ವ್ಯತ್ಯಾಸಗಳಾವುವು? ನಿವ್ವಳ ಹೂಡಿಕೆ ಮತ್ತು ಬಂಡವಾಳದ ನಡುವೆ ಸಂಗ್ರಹ ಯಾವುದು ? ಮತ್ತು ಹರಿವು ಯಾವುದು?

   ಒಂದು ತೊಟ್ಟಿಯಲ್ಲಿನ ನೀರಿನ ಹರಿವಿನೊಂದಿಗೆ ನಿವ್ವಳ ಬಂಡವಾಳ ಮತ್ತು ಬಂಡವಾಲವನ್ನು ಹೋಲಿಸಿ.
4. ಯೋಜಿತ ಮತ್ತು ಯೋಜಿತವಲ್ಲದ ದಾಸ್ತಾನಿನ ನಡುವಿನ ವ್ಯತ್ಯಾಸವೇನು ? ದಾಸ್ತಾನುಗಳಲ್ಲಿನ ಬದಲಾವಣೆ ಮತ್ತು ಉದ್ಯಮ ಘಟಕಗಳ ಮೌಲ್ಯಾಧಾರಿತಗಳ ನಡುವಿನ ಸಂಬಂಧವನ್ನು ಬರೆಯಿರಿ.
5. ಮೂರು ವಿಧಾನಗಳಿಂದ ರಾಷ್ಟ್ರದ GDP ಯನ್ನು ಲೆಕ್ಕಾಚಾರ ಮಾಡುವ ಅನನ್ಯತೆಗಳನ್ನು ಬರೆಯಿರಿ.
6. ಮುಂಗಡ ಪತ್ರದ ಕೊರತೆ ಮತ್ತು ವ್ಯಾಪಾರ ಕೊರತೆಯನ್ನು ವ್ಯಾಖ್ಯಾನಿಸಿ. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಉಳಿತಾಯದ ಮೇಲೆ ಖಾಸಗಿ ಹೂಡಿಕೆಯು 2000 ಕೋಟಿಗಳಷ್ಟಿತ್ತು. ಮುಂಗಡ ಪತ್ರದ ಕೊರತೆಯ ಮೊತ್ತವು (–) 1500 ಕೋಟಿ ₹. ಗಳು. ದೇಶದ ವ್ಯಾಪಾರ ಕೊರತೆಯ ಪ್ರಮಾಣ ಯಾವುದು ?
7. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ದೇಶದ ಮಾರುಕಟ್ಟೆ ಬೆಲೆಯಲ್ಲಿ *GDP* ಯು 1000 ಕೋಟಿ ಯಾಗಿತ್ತು ಎಂದು ಭಾವಿಸಿ. ವಿದೇಶದಿಂದ ನಿವ್ವಳ ಉತ್ಪಾದನಾಂಗದ ಆದಾಯ 100 ಕೋಟಿ ₹. ಪರೋಕ್ಷ ತೆರಿಗೆಗಳ ಮೌಲ್ಯ ಸಹಾಯಧನಳು ₹ 150 ಕೋಟಿ ಮತ್ತು ರಾಷ್ಟ್ರೀಯ ಆದಾಯ ₹ 850 ಸವಕಳಿಯ ಒಟ್ಟು ಮೌಲ್ಯವನ್ನು ಲೆಕ್ಕಚಾರ ಮಾಡಿರಿ.
8. ಒಂದು ನಿರ್ದಿಷ್ಟ ದೇಶದ ವರ್ಷದಲ್ಲಿನ ಉತ್ಪಾದನಾಂಗದ ವೆಚ್ಚದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವು ₹ 1900 ಕೋಟಿ ಯಾಗಿರಲಿ. ಕುಟುಂಬಗಳಿಂದ ಉದ್ಯಮ ಘಟಕಗಳಿಗೆ/ಸರ್ಕಾರಗಳು ಅಥವಾ ಉದ್ಯಮ ಘಟಕಗಳಿಂದ/ ಸರ್ಕಾರಗಳಿಂದ ಕುಟುಂಬಗಳಿಗೆ ಯಾವುದೇ ಬಡ್ಡಿ ಪಾವತಿಗಳಿಲ್ಲ. ಕುಟುಂಬಗಳ ವೈಯಕ್ತಿಕ ವಿತರಣಾ ಆದಾಯ ₹ 1200 ಕೋಟಿ. ಅವು ಪಾವತಿಸಿದ ವೈಯಕ್ತಿಕ ಆದಾಯ ತೆರಿಗೆಯು ₹ 600 ಕೋಟಿ. ಮತ್ತು ಉದ್ಯಮ ಘಟಕಗಳು ಮತ್ತು ಸರಕಾರ ಉಳಿಸಿ ಕೊಂಡಿರುವ ಗಳಿಕೆಯ ಮೌಲ್ಯವು ₹ 200 ಕೋಟಿ ಗಳಷ್ಟಿದೆ. ಸರ್ಕಾರ ಮತ್ತು ಉದ್ಯಮ ಘಟಗಳಿಂದ ಕುಟುಂಬಗಳಿಗೆ ಪಾವತಿಸಿದ ವರ್ಗಾವಣೆ ಪಾವತಿಗಳ ಮೌಲ್ಯವೆಷ್ಟು ?

9. ಈ ಕೆಳಗಿನ ಅಂಕಿ ಅಂಶಗಳನ್ನು ಉಪಯೋಗಿಸಿ ವೈಯಕ್ತಿಕ ಆದಾಯ ಮತ್ತು ವೈಯಕ್ತಿಕ ವಿತರಿಸಲಾಗುವ ಆದಾಯಗಳನ್ನು ಲೆಕ್ಕಾಚಾರ ಮಾಡಿ.

| | | ₹ ಕೋಟಿಗಳಲ್ಲಿ. |
|---|---|---|
| (*a*) | ಉತ್ಪಾದನಾಂಗಗಳ ಬೆಲೆಯಲ್ಲಿ ನಿವ್ವಳ ದೇಶೀಯ ಉತ್ಪನ್ನ | 8000 |
| (*b*) | ವಿದೇಶಗಳ ನಿವ್ವಳ ಉತ್ಪಾದನಾಂಗಗಳಿಂದ ಬಂದ ಆದಾಯ | 200 |
| (*c*) | ವಿತರಿಸಲಾಗದ ಲಾಭ | 1000 |
| (*d*) | ನಿಗಮ ತೆರಿಗೆ | 500 |
| (*e*) | ಕುಟುಂಬಗಳು ಸ್ವೀಕರಿಸಿದ ಬಡ್ಡಿ | 1500 |
| (*f*) | ಕುಟುಂಬಗಳು ಪಾವತಿಸಿದ ಬಡ್ಡಿ | 1200 |
| (*g*) | ವರ್ಗಾವಣೆ ಆದಾಯ | 300 |
| (*h*) | ವೈಯಕ್ತಿಕ ತೆರಿಗೆ | 500 |

10. ಒಂದು ದಿನದಲ್ಲಿ ಕ್ಷೌರಿಕನೊಬ್ಬನು ರಾಜುವಿನ ಕೂದಲು ಕತ್ತರಿಸುವುದರಿಂದ 500 ₹ ಗಳನ್ನು ಸಂಗ್ರಹಿಸುತ್ತಾನೆ. ಈ ದಿನದಲ್ಲಿ ಅವನ ಉಪಕರಣ ₹ 50 ಮೌಲ್ಯದಷ್ಟು ಸವಕಳಿಯಾಗುತ್ತದೆ. ಉಳಿದ 450 ₹ ಗಳಿಗೆ ₹ 30 ಮೌಲ್ಯದಷ್ಟು ಮರಾಟ ತೆರಿಗೆಯನ್ನು ಕಟ್ಟುತ್ತಾನೆ. ಮನೆಗೆ 200 ₹ ಗಳನ್ನು ತೆಗೆದುಕೊಳ್ಳುತ್ತಾನೆ. 220 ₹ ಗಳನ್ನು ಅಭಿವೃದ್ಧಿಗಾಗಿ ಹೊಸ ಉಪಕರಣಗಳನ್ನು ಕೊಳ್ಳುವುದಕ್ಕಾಗಿ ಉಳಿಸಿಕೊಳ್ಳುತ್ತಾನೆ. 20 ₹ ಗಳನ್ನು ತೆರಿಗೆಯಾಗಿ ಅವನು ಮತ್ತಷ್ಟು ಪಾವತಿಸುತ್ತಾನೆ. ಈ ಮಾಹಿತಿಯನ್ನುಆಧರಿಸಿ ರಾಜುವಿನ ಈ ಕೆಳಗಿನ ಆದಾಯ ಲೆಕ್ಕಚಾರಗಳಿಗೆ ರಾಜುವಿನ ಸಂಪೂರ್ಣ ಕೊಡುಗೆಯನ್ನು ತಿಳಿಸಿ.

(*a*) ಒಟ್ಟು ದೇಶೀಯ ಉತ್ಪನ್ನ (*b*) ಮಾರುಕಟ್ಟೆ ಬೆಲೆಯಲ್ಲಿ *NNP*.

(*c*) ಉತ್ಪಾದನಾಂಗಗಳ ಬೆಲೆಯಲ್ಲಿ *NNP*. (*d*) ವಿತರಿಸಲಾಗುವ ವೈಯಕ್ತಿಕ ಆದಾಯ.

11. ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ಆರ್ಥಿಕತೆಯ ನಾಮರೂಪಿ *GNP* ಯ ಮೌಲ್ಯವು ₹ 2500 ಆಗಿದ್ದು ಅದೇ ವರ್ಷದಲ್ಲಿ ಆ ದೇಶದ *GNP* ಯ ಮೌಲ್ಯಮಾಪನದ ಬೆಲೆಯು ಅದೇ ಆಧಾರ ವರ್ಷದಲ್ಲಿ 3000 ಕೋಟಿಯಾಗಿತ್ತು. ಒಂದು ವರ್ಷದ *GNP* ಯ ಹಣದುಬ್ಬರವನ್ನು ಶೇಕಡವಾರು ಪದಗಳಲ್ಲಿ ಲೆಕ್ಕ ಹಾಕಿ ಆಧಾರ ವರ್ಷ ಮತ್ತು ಗಣನೆಗೆ ತೆಗೆದುಕೊಂಡಿರುವ ವರ್ಷಗಳ ನಡುವೆ ಬೆಲೆಯ ಮಟ್ಟ ಹೆಚ್ಚಳವಾಗುತ್ತದೆಯೇ ?

12. *GDP* ಯನ್ನು ಒಂದು ದೇಶದ ಯೋಗಕ್ಷೇಮದ ಸೂಚ್ಯಂಕವಾಗಿ ಬಳಸಿಕೊಳ್ಳುವುದರ ಕೆಲವು ಮಿತಿಗಳನ್ನು ಬರೆಯಿರಿ.

### ಸೂಚಿತ ಅಧ್ಯಯನಗಳು *Suggested Readings*


1. Bhaduri, A., 1990. Macroeconomics: The Dynamics of Commodity Production, pages 1 – 27, Macmillan India Limited, New Delhi.
2. Branson, W. H., 1992. Macroeconomic Theory and Policy, (third edition), pages 15 – 34, Harper Collins Publishers India Pvt Ltd., New Delhi.
3. Dornbusch, R and S. Fischer. 1988. Macroeconomics, (fourth edition) pages 29 – 62, McGraw Hill, Paris.
4. Mankiw, N. G., 2000. Macroeconomics, (fourth edition) pages 15 – 76, Macmillan Worth Publishers, New York.

**ಕೋಷ್ಟಕ 2.5: ಸ್ಥಿರ ಬೆಲೆಗಳಲ್ಲಿ (2011 – 2012) ಭಾರತದಲ್ಲಿ GVA ಮತ್ತು GDP**[6]

| ಕ್ರಮ ಸಂಖ್ಯೆ | ಬಾಬ್ತುಗಳು | 2016–17ರಲ್ಲಿನ ಮೌಲ್ಯ (ಲಕ್ಷ, ಕೋಟಿ ರೂಗಳಲ್ಲಿ) |
|---|---|---|
| 1. | ಮೂಲ ಬೆಲೆಗಳಲ್ಲಿ GVA | 111.854 |
| 2. | ನಿವ್ವಳ ಉತ್ಪಾದನಾ ತೆರಿಗೆ | 10.044 |
| 3. | GDP (1 + 2) | 121.898 |



**ಕೋಷ್ಟಕ 2.6: GDPಯ ಸಂಯೋಜನೆ: ವೆಚ್ಚದ ಭಾಗ (2011 – 2012ರ ಬೆಲೆಗಳು)**

| ಕ್ರಮ ಸಂಖ್ಯೆ | ಬಾಬ್ತುಗಳು | 2016–17ರಲ್ಲಿನ ಮೌಲ್ಯ (ಲಕ್ಷ, ಕೋಟಿ ರೂಗಳಲ್ಲಿ) |
|---|---|---|
| 1. | ಖಾಸಗಿ ಅಂತಿಮ ಅನುಭೋಗ ವೆಚ್ಚ (PFCE) | 68.066 |
| 2. | ಸರ್ಕಾರದ ಅಂತಿಮ ಅನುಭೋಗದ ವೆಚ್ಚ (GFCE) | 10.044 |
| 3. | ಒಟ್ಟು ಸ್ಥಿರ ಬಂಡವಾಳ ಶೇಖರಣೆ (GFCF) | 36.020 |
| 4. | ದಾಸ್ತಿನಿನಲ್ಲಿ ಬದಲಾವಣೆ | 2.918 |
| 5. | ಬೆಲೆ ಬಾಳುವ ಬಾಬ್ತುಗಳು | 1.487 |
| | **ಹೂಡಿಕೆ (3 + 4 + 5)** | **40.425** |
| 6. | ಸರಕು ಮತ್ತು ಸೇವೆಗಳ ರಫ್ತು | 24.860 |
| 7. | ಸರಕು ಮತ್ತು ಸೇವೆಗಳ ಅಮದು | 25.687 |
| | **ನಿವ್ವಳ ರಫ್ತುಗಳು (6 – 7)** | **–0.827** |
| 8. | ವ್ಯತ್ಯಾಸಗಳು | 0.839 |
| **9.** | **GDP (1 + 2 + 3 + 4 + 5 + 6 + 7 + 8)** | **121.898** |

[6]ಇವುಗಳು ಮೇ 31, 2017ರಲ್ಲಿ **CSO** ಯಿಂದ ಬಿಡುಗಡೆಮಾಡಲ್ಪಟ್ಟ ತಾತ್ಕಲಿಕ ಅಂದಾಜುಗಳು.